ತಿಳಿಸುವರು; ಇದೇ ಜೈನಧರ್ಮ. ವಿಶ್ವ ಎಂದಿನಿಂದ ಇದೆಯೋ ಅಂದಿನಿಂದ ಜಿನಧರ್ಮವೂ ಇದೆ. ಎಲ್ಲಿಯ ವರೆಗೆ ಈ ವಿಶ್ವ ಇರುತ್ತದೆಯೋ ಅಲ್ಲಿಯ ತನಕ ಜಿನ ಧರ್ಮವೂ ಇರುತ್ತದೆ. (ಇದರ ವ್ಯಾಪ್ತಿಯಲ್ಲಿ ಏರುಪೇರುಗಳಾಗಬಹುದು.) ಹಿಂದೆಯೂ ತೀರ್ಥಂಕರರು ಕಾಣಿಸಿಕೊಂಡರು, ಈಗಲೂ ತೀರ್ಥಂಕರರಿದ್ದಾರೆ. (ಅಂದರೆ ವರ್ತಮಾನ ಕಾಲದಲ್ಲಿದ್ದವರು ಅಥವ ವಿದೇಹ ಕ್ಷೇತ್ರದಲ್ಲಿ ಈಗಲೂ ಇರುವವರು). ಮುಂದೆಯೂ ತೀರ್ಥಂಕರರು ಬಂದೇ ಬರುವರು. ದೇವರ ಅವತಾರವನ್ನೂ ಅವಾಂತರವನ್ನೂ ಜೈನಧರ್ಮ ಒಪ್ಪುವುದಿಲ್ಲ. ಸಂಸಾರದಲ್ಲಿ ಅಂಡಲೆಯುತ್ತಿರುವ ನಮ್ಮಂಥ ಚೇತನಗಳೇ ಕರ್ಮಪಾಶದಿಂದ ಪಾರಾಗಿ ತೀರ್ಥಕರರಾಗುವರೆಂಬುದನ್ನು ನೆನಪಿನಲ್ಲಿಡಬೇಕು. ಒಂದೊಂದು ಚೇತನವೂ ದೇವರಾಗುವ ರಹಸ್ಯವನ್ನು ಜಿನಧರ್ಮ ಜಗತ್ತಿಗೆ ಸಾರಿದೆ. ಬೇಕಾದವರು ಪರೀಕ್ಷಿಸಿ ನೋಡಬಹುದು. ಎಲ್ಲ ಜೀವಿಗಳೂ ದೇವರಾಗಲೆಂಬುದೇ ಜೈನಧರ್ಮದ ಹಾರೈಕೆ.

ದ್ರವ್ಯ

ಗುಣಗಳ ಸಮೂಹಕ್ಕೆ ದ್ರವ್ಯವೆನ್ನುವರು. ದ್ರವ್ಯದ ಸರ್ವಭಾಗದಲ್ಲೂ ಸರ್ವ ಅವಸ್ಥೆಯಲ್ಲೂ ಯಾವುದು ಇರುವುದೋ ಅದಕ್ಕೆ **ಗುಣ**ವೆಂದು ಹೆಸರು. ಗುಣಗಳಲ್ಲಿ ಯಾವುವು ಸರ್ವದ್ರವ್ಯದಲ್ಲೂ ಇರುವುವೋ ಅವು **ಸಾಮಾನ್ಯ ಗುಣ**ಗಳೆನಿಸುವುವು. ವಿಶಿಷ್ಟವಾದ ಗುಣಗಳಿಗೆ **ವಿಶೇಷಗುಣ**ಗಳೆನ್ನುವರು. ಅಸ್ತಿತ್ವ, ವಸ್ತುತ್ವ, ದ್ರವ್ಯತ್ವ, ಪ್ರಮೇಯತ್ವ, ಅಗುರುಲಘುತ್ವ ಮತ್ತು ಪ್ರದೇಶತ್ವ ಈ ಆರೂ ಸಾಮಾನ್ಯ ಗುಣಗಳಾಗಿ ಎಲ್ಲ ದ್ರವ್ಯದಲ್ಲೂ ಇರುತ್ತವೆ.[೧] (ಚೈತನ್ಯವೆಂಬುದು ಜೀವದ ವಿಶಿಷ್ಟ ಗುಣವಾದುದರಿಂದ ಅದು ವಿಶೇಷ ಗುಣವಾಗಿದೆ.)

ಮಕ್ಕಳಾಗುವುದಿಲ್ಲ. ಹಾಗೆ ಇವುಗಳ ಸ್ಥಿತಿಯು. ಸಧವೆಯರಿದ್ದೂ ಬಂಜೆಯಾಗಿರುವ ಸ್ತ್ರೀಯರಂತೆ ಅಭವ್ಯರ ಸ್ಥಿತಿಯಾಗಿದೆ. ಇದು ದೋಷಮಿಶ್ರಿತ ಸುವರ್ಣವಾಗಿದೆ. ಶುದ್ಧವಾಗುವ ಯೋಗ್ಯತೆಯಿದೆ. ಅದಕ್ಕೆ ನಿಮಿತ್ತ ಮಾತ್ರ(ಕಾಲಲಬ್ಧಿ) ಬೇಕಾಗಿದೆ. ಆದರೆ ಆ ನಿಮಿತ್ತವನ್ನು ಪಡೆದು ಶುದ್ಧ ಸುವರ್ಣದ ಅಭಿವ್ಯಕ್ತಿಯನ್ನು ಅದೆಂದೂ ತೋರುವುದಿಲ್ಲ. ಈ ಸ್ಥಿತಿಯಲ್ಲಿರುವ ಅಭವ್ಯಜೀವಿಗಳಿಗೆ 'ಭವಸಿದ್ಧ'ರೆಂದು ಹೇಳುವರು. ಇವು ಯಾವಾಗಲೂ ಸಂಸಾರದಲ್ಲೇ ಇರುವುವು. ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವ ಈ ಪಂಚಸಂಸಾರ ಪರಿವರ್ತನೆಯಲ್ಲಿ ಸುತ್ತುತ್ತಿರುತ್ತವೆ. ಆದರೂ ವಿಶ್ವದಲ್ಲಿ ಭವ್ಯಜೀವಿಗಳ ಸಂಖ್ಯೆಯೇ ಹೆಚ್ಚಾಗಿದೆ. ಅಭವ್ಯ ಜೀವಿಗಳು ಬಹಳ ಕಡಿಮೆಯಾಗಿವೆ."—ಶ್ರೀ ಮಿರ್ಜಿ ಅಣ್ಣಾರಾಯರು, ಜೈ. ಧ., ಪು. ೨೯೯.

ಆಸನ್ನಭವ್ಯ=ಶೀಘ್ರವಾಗಿ ಮುಕ್ತನಾಗುವಾತ; ದೂರಭವ್ಯ=ತಡವಾಗಿ ಮುಕ್ತನಾಗುವಾತ; ಅಭವ್ಯ=ಬಹು ಮಟ್ಟಿಗೆ ಮುಕ್ತನಾಗುವ ಪ್ರಯತ್ನವನ್ನೇ ಮಾಡದ ಚೇತನ.

೧. (೧) ಅಸ್ತಿತ್ವ:–ಇದು ದ್ರವ್ಯದ ಅವಿನಾಶೀ ಸ್ವಭಾವವಾಗಿದೆ. ಈ ಶಕ್ತಿಯಿಂದಲೇ ದ್ರವ್ಯಕ್ಕೆ ನಿತ್ಯತ್ವ ಪ್ರಾಪ್ತಿಯಾಗಿದೆ.

(೨) ವಸ್ತುತ್ವ:–ಈ ಶಕ್ತಿಯೇ ದ್ರವ್ಯದ ಅರ್ಥಕ್ರಿಯಾಕಾರಿತ್ವಕ್ಕೆ ಕಾರಣವಾಗಿದೆ. ಕೊಡದ ಅರ್ಥಕ್ರಿಯೆಯು ಜಲಧಾರಣವಾಗುವುದು. ಈ ಜಲಧಾರಣ ಕ್ರಿಯೆಗೆ ವಸ್ತುತ್ವವೆನ್ನುವರು.

(೩) ದ್ರವ್ಯತ್ವ:–ಯಾವ ಶಕ್ತಿಯ ನಿಮಿತ್ತದಿಂದ ದ್ರವ್ಯ ಯಾವಾಗಲೂ ಒಂದೇ ಸಮನೆ ಉಳಿಯುವುದಿಲ್ಲ, ಮತ್ತು ಯಾವುದರ ಪರ್ಯಾಯ ಯಾವಾಗಲೂ ಮಾರ್ಪಾಟಾಗುತ್ತಿದೆ, ಈ ಶಕ್ತಿಗೆ 'ದ್ರವ್ಯತ್ವ'ವೆನ್ನುವರು.

ಷಡ್‌ದ್ರವ್ಯಗಳು (Six Kinds of Substance)

ಜೀವಾಜೀವ ಸೇರಿ ಜಗತ್ತಾಗಿದೆ. ಆತ್ಮವು ಕರ್ಮದೊಡಗೂಡಿ ಜೀವವೆನಿಸಿದೆ. ಅಜೀವದಲ್ಲಿ ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಎಂಬ ಐದೂ ಅಂತರ್ಗತವಾಗುವುವು. ಈ ಐದರೊಡನೆ ಜೀವವನ್ನೂ ಸೇರಿಸಿ ಷಡ್‌ದ್ರವ್ಯವೆನ್ನುವರು. ದ್ರವ್ಯಕ್ಕೆ ಉತ್ಪತ್ತಿ ವಿನಾಶಗಳು ಪರ್ಯಾಯರೂಪದಲ್ಲಿ ಕಂಡು ಬಂದರೂ ಮೂಲರೂಪದಲ್ಲಿ ಅವಿಕೃತವೂ ಅಪರಿವರ್ತಿತವೂ ಆಗಿದೆ.

ಜೀವದ್ರವ್ಯ "ಜೈನರ ಜೀವ ಮತ್ತು ವೇದಾಂತಮತವು ಹೇಳುವ ಬ್ರಹ್ಮ ಇವೆರಡೂ ಒಂದೇ ಅಲ್ಲ. (ಬ್ರಹ್ಮವು ಏಕವೂ ಅದ್ವಿತೀಯವೂ ಆದುದು. ಆದರೆ ಜೈನಮತದಲ್ಲಿ ಜೀವರು ಅಸಂಖ್ಯರು). ಜೀವ ಮತ್ತು ಸಾಂಖ್ಯರ ಪುರುಷ ಇವರು ಒಂದೇ ಅಲ್ಲ. ಏಕೆಂದರೆ ಜೀವನು ನಿತ್ಯಶುದ್ಧನೂ ನಿತ್ಯಮುಕ್ತನೂ ಅಲ್ಲ; ಜೀವನ ಬಂಧನವು ಸತ್ಯವು. ಜೈನರ ಜೀವ ಮತ್ತು ನ್ಯಾಯ ವೈಶೇಷಿಕರ ಆತ್ಮ, ಮತ್ತು ಬೌದ್ಧರ ಕ್ಷಣಿಕ ವಿಜ್ಞಾನಪ್ರವಾಹ ಇವೆರಡೂ ಒಂದೇ ಅಲ್ಲ. ಏಕೆಂದರೆ ಜೀವನು ಸದ್ರೂಪವೂ ಸತ್ಯವೂ ನಿತ್ಯವೂ ಆದ ಪದಾರ್ಥವು.[೧]"

ಜೀವವನ್ನು ಜೈನಾಚಾರ್ಯರು ವ್ಯವಹಾರ ಮತ್ತು ನಿಶ್ಚಯವೆಂಬ ಎರಡು ದೃಷ್ಟಿಯಿಂದ ಅವಲೋಕಿಸುವರು. ಶುದ್ಧ ನಿಶ್ಚಯದಿಂದ ನೋಡಿದಾಗ ಜೀವ ಅವಿನಾಶಿಯೂ ನಿರುಪಾಧಿಕವೂ ಆದ ಶುದ್ಧ ಚೈತನ್ಯಲಕ್ಷಣ ಪ್ರಾಣ(ಭಾವಪ್ರಾಣ)ದಿಂದ ಜೀವಿಸುವನು; ಕಲಂಕರಹಿತ ಕೇವಲಜ್ಞಾನದರ್ಶನೋಪಯೋಗಮಯನಾಗಿರುವನು[೨]; ಅಮೂರ್ತನಾಗಿ ಅತೀಂದ್ರಿಯನಾಗಿ ಶುದ್ಧ ಬುದ್ಧೈಕ ಸ್ವಭಾವನಾಗಿರುವನು; ನಿಷ್ಕ್ರಿಯನಾಗಿರುವನು; ಲೋಕಾಕಾಶವನ್ನೆಲ್ಲ ವ್ಯಾಪಿಸುವಂತಹ ಅಸಂಖ್ಯೇಯ ಪ್ರದೇಶವುಳ್ಳವನು (ಸರ್ವವ್ಯಾಪಕ) ನಿರ್ವಿಕಲ್ಪವಾದ ಬ್ರಹ್ಮಾನಂದದಲ್ಲಿ ಓಲಾಡುವನು; ಸಂಸಾರರಹಿತನಾಗಿ ನಿತ್ಯಾನಂದೈಕ ರೂಪನಾಗಿರುವನು. ಅನಂತಸಿರಿ ಲೋಲನಾಗಿ ಸಿದ್ಧನೆನಿಸುವನು; ಸ್ವಭಾವತಃ ಊರ್ಧ್ವಗತಿಶೀಲನಾಗಿರುವನು.

ಮೇಲಿನ ವಿವರಣೆ ಕರ್ಮರಹಿತವಾದ ಜೀವನ ಸ್ವರೂಪವಾಗಿದೆ. ಈಗ ವ್ಯವಹಾರ ನಯದ ಕಡೆ ತಿರುಗೋಣ. ಜೀವ, ಅನಾದಿ ಕರ್ಮಬಂಧನಕ್ಕೆ ಸಿಕ್ಕಿ ಅಶುದ್ಧವಾದ ದ್ರವ್ಯ ಮತ್ತು

---

(೪) ಪ್ರಮೇಯತ್ವ:–ದ್ರವ್ಯ ಯಾವುದಾದರೂ ಒಂದು ಜ್ಞಾನಕ್ಕೆ ವಿಷಯವಾಗುವುದು ಪ್ರಮೇಯತ್ವ ಗುಣದಿಂದಲೇ.

(೫) ಅಗುರು ಲಘುತ್ವ:–ದ್ರವ್ಯದೊಳಗಿನ ದ್ರವ್ಯತ್ವ ಸ್ಥಿರವಾಗುಳಿಯುವಂತೆ ನೋಡಿಕೊಳ್ಳುವ ಶಕ್ತಿಗೆ 'ಅಗುರುಲಘುತ್ವ'ವೆಂದು ಹೆಸರು. ಈ ಶಕ್ತಿಯಿರುವುದರಿಂದಲೇ ಒಂದು ದ್ರವ್ಯ ಎಂದೂ ಇನ್ನೊಂದಾಗಿ ಮಾರ್ಪಡುವುದಿಲ್ಲ.

(೬) ಪ್ರದೇಶವತ್ವ:–ಈ ಶಕ್ತಿಯಿಂದ ಒಂದೊಂದು ದ್ರವ್ಯದಲ್ಲೂ ಯಾವುದಾದರೂ ಒಂದು ಆಕಾರ ಅತ್ಯಾವಶ್ಯಕವಾಗಿ ಉಳಿಯುತ್ತದೆ. ಜೈ. ಸಿ. ಪ್ರ. ಪು. ೩೧.

೧. ಮ. ಪ್ರ. ಪೂಜಾರ, ಜೈ. ಧ. ಪ., ಉಪೋದ್ಘಾತ, ಪು. II.

೨. 'ಉಪಯೋಗ'ವೆಂದರೆ ಪದಾರ್ಥಜ್ಞಾನ ಮಾಡಿಕೊಳ್ಳುವ ಆತ್ಮನ ಕ್ರಿಯೆ.

ಭಾವಪ್ರಾಣಗಳಿಂದ ಜೀವಿಸುವನು.[೧] ಕ್ಷಾಯೋಪಶಮಿಕ ಜ್ಞಾನದರ್ಶನ ನಿವೃತ್ತಿಯಿಂದ ಜ್ಞಾನದರ್ಶನೋಪಯೋಗಮಯನಾಗಿರುವನು.[೨] ಕರ್ಮದಿಂದ ಪ್ರಾಪ್ತಿಯಾದ ದೇಹದಲ್ಲಿ ಸೆರೆಸಿಕ್ಕಿರುವುದರಿಂದ ಸ್ಪರ್ಶಾದಿಗುಣ ವಿಶಿಷ್ಟವಾದ ದೇಹಧಾರಿಯಾಗಿರುವುದರಿಂದ ಮೂರ್ತನಾಗಿರುವನು. ಮನೋವಚನಕಾಯ ವ್ಯಾಪಾರೋತ್ಪಾದಕ ಕರ್ಮಗಳಿಂದ ಕೂಡಿರುವುದರಿಂದ, ಶುಭಾಶುಭ ಕರ್ಮಗಳ ಕರ್ತೃವಾಗಿರುವನು. ಕರ್ಮದಿಂದ (ಶರೀರ ಕರ್ಮ) ಲಭ್ಯವಾದ ಶರೀರವೆಂಬ ಗೂಡಿನಲ್ಲಿ ಸೆರೆಸಿಕ್ಕಿರುವುದರಿಂದ ಸ್ವದೇಹ ಪರಿಮಾಣನಾಗಿರುವನು. ಶುಭಾಶುಭ ಕರ್ಮಜನಿತ ಸುಖದುಃಖವನ್ನು ಅನುಭವಿಸುವುದರಿಂದ ಜೀವ ಭೋಕ್ತೃವೆನಿಸುವನು. ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವರೂಪವಾದ ಪಂಚವಿಧ ಸಂಸಾರದಲ್ಲಿದ್ದಾನೆ. ಚತುರ್ಗತಿಗಳಲ್ಲಿ ಜೀವ ಅಂಡಲೆಯುತ್ತಿರುವನು.

ಸಂಸಾರಿ ಜೀವಿಗಳಲ್ಲಿ ಸ್ಥಾವರ ಹಾಗೂ ತ್ರಸವೆಂದು ಎರಡು ಬಗೆ. ಸ್ಥಾವರ ನಾಮಕರ್ಮದಿಂದ ಸ್ಪರ್ಶನೇಂದ್ರಿಯ ಮಾತ್ರವುಳ್ಳ ಏಕೇಂದ್ರಿಯ ಜೀವಿಗಳಿಗೆ ಸ್ಥಾವರ

---

೧. ಸುಖ (ಬ್ರಹ್ಮಾನಂದ), ಸತ್ತೆ, ಜ್ಞಾನ, ಉಪಯೋಗ ಮುಂತಾದುವು 'ಭಾವಪ್ರಾಣ'ವಾಗಿವೆ. ಇಂದ್ರಿಯ, ಬಲ, ಆಯುಷ್ಯ, ಶ್ವಾಸೋಚ್ಛ್ವಾಸಗಳು 'ದ್ರವ್ಯಪ್ರಾಣ'ವಾಗಿವೆ. ಸರ್ವಪದಾರ್ಥಗಳ ಅಸ್ತಿತ್ವವನ್ನು ಗ್ರಹಣಮಾಡುವ ಸತ್ತೆಗೆ 'ಮಹಾಸತ್ತೆ'ವೆನ್ನುವರು.

೨. ಉದಯ, ಉಪಶಮ, ಕ್ಷಯ, ಕ್ಷಯೋಪಶಮ—ಇವು ಕರ್ಮದ ನಾಲ್ಕು ಅವಸ್ಥೆಗಳಾಗಿವೆ. ಕರ್ಮವು ಫಲಕೊಡಲು ಸಿದ್ಧವಾಗುವುದನ್ನು 'ಉದಯ'ವೆನ್ನುವರು. ಫಲಕೊಡಬೇಕಾದ ಕರ್ಮಗಳು ಕೆಲವು ಕಾರಣಗಳಿಂದ ಫಲಕೊಡದೆ ಉಪಶಮವಾಗುವುದಕ್ಕೆ 'ಉಪಶಮ'ವೆನ್ನುವರು. ಕರ್ಮ ಸಂಪೂರ್ಣವಾಗಿ ನಾಶವಾಗುವುದಕ್ಕೆ 'ಕ್ಷಯ'ವೆನ್ನುವರು. ಕರ್ಮದ ಕೆಲಭಾಗ ನಶಿಸಿ ಮತ್ತೆ ಕೆಲಭಾಗ ಉಪಶಮಗೊಂಡರೆ 'ಕ್ಷಯೋಪಶಮ'ವೆನ್ನುವರು.

ಔದಯಿಕಭಾವ:–ಉದಯದಲ್ಲುಂಟಾಗುವ ನಾಲ್ಕು ಗತಿ, ನಾಲ್ಕು ಕಷಾಯ, ಮೂರು ಲಿಂಗ, ಮಿಥ್ಯಾದರ್ಶನ, ಅಜ್ಞಾನ, ಅಸಂಯಮ, ಅಸಿದ್ಧತ್ವ, ಆರು ಲೇಶ್ಯೆ–ಈ ೨೧ ಭಾವಗಳಿಗೆ 'ಔದಯಿಕ ಭಾವ'ವೆನ್ನುವರು.

ಔಪಶಮಿಕಭಾವ:–ಕರ್ಮಗಳು ಉಪಶಮಗೊಂಡಾಗ ಉಂಟಾಗುವ ಔಪಶಮಿಕ ಸಮ್ಯಕ್ತ್ವ ಚಾರಿತ್ರಗಳು ಔಪಶಮಿಕ ಭಾವವಾಗಿವೆ.

ಕ್ಷಾಯಿಕಭಾವ:–ಕರ್ಮಗಳು ಕ್ಷಯಗೊಂಡು ಪ್ರಾಪ್ತಿಯಾಗುವ ಭಾವ ಕ್ಷಾಯಿಕದಾನಲಾಭ ಭೋಗೋಪಭೋಗವೀರ್ಯ ಸಮ್ಯಕ್ತ್ವಚಾರಿತ್ರ ಎಂಬ ಒಂಭತ್ತು ಭಾವಗಳಿಗೆ 'ಕ್ಷಾಯಿಕಭಾವ'ವೆನ್ನುವರು.

ಕ್ಷಾಯೋಪಶಮಿಕ ಭಾವ:–ಕ್ಷಯೋಪಶಮದಿಂದುಂಟಾಗುವ ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಾಯಜ್ಞಾನ, ಕುಮತಿ ಕುಶ್ರುತ ವಿಭಂಗ ಜ್ಞಾನಗಳು (೩ ಅಜ್ಞಾನಗಳು), ಚಕ್ಷು ಅಚಕ್ಷು ಅವಧಿ ದರ್ಶನಗಳು (೩ ದರ್ಶನ), ಕ್ಷಾಯೋಪಶಮಿಕದಾನ ಲಾಭ ಭೋಗೋಪಭೋಗ ವೀರ್ಯಗಳು (೫ ಲಬ್ಧಿಗಳು), ಕ್ಷಾಯೋಪಶಮಿಕಸಮ್ಯಕ್ತ್ವ, ಸರಾಗಚಾರಿತ್ರ, ಸಂಯಮಾಸಂಯಮವೆಂದು ೧೮ ಬಗೆ ಕ್ಷಾಯೋಪಶಮಕ ಭಾವಗಳಿವೆ.

ಪಾರಿಣಾಮಕಭಾವಗಳು:–ಕರ್ಮಗಳ ಉದಯಾದಿ ಗೋಜಿಲ್ಲದೆ ಆತ್ಮನಲ್ಲಿ ಅನಾದಿಯಿಂದಿರುವ ಜೀವತ್ವ, ಭವ್ಯತ್ವ, ಅಭವ್ಯತ್ವವೆಂಬಿವು 'ಪಾರಿಣಾಮಿಕ' ಭಾವಗಳಾಗಿವೆ.

ಜೀವಿಗಳೆನ್ನುವರು.[೧] ದ್ವೀಂದ್ರಿಯ ಜೀವಿಗಳು,[೨] ತ್ರೀದ್ರಿಯ ಜೀವಿಗಳು,[೩] ಚತುರಿಂದ್ರಿಯ ಜೀವಿಗಳು,[೪] ಪಂಚೇಂದ್ರಿಯ ಜೀವಿಗಳು[೫] ತ್ರಸನಾಮ ಕರ್ಮಕ್ಕೊಳ ಪಟ್ಟಿರುವುದರಿಂದ ತ್ರಸಜೀವಿ(ಚಲಿಸುವ)ಗಳಾಗಿವೆ.

ಏಕೇಂದ್ರಿಯ ಜೀವಗಳಲ್ಲಿ ಬಾದರೈ ಸ್ಥೂಲೈ ಕೇಂದ್ರಿಯ ಮತ್ತು ಸೂಕ್ಷ್ಮೈ ಕೇಂದ್ರಿಯವೆಂದು ಎರಡು ಬಗೆ[೬]. ದ್ವೀಂದ್ರಿಯ, ತ್ರೀಂದ್ರಿಯ ಚತುರಿಂದ್ರಿಯ ಜೀವಗಳನ್ನು 'ವಿಕಲತ್ರಯ ಜೀವ'ಗಳೆನ್ನುವರು.

ಈ ಎಲ್ಲ ಜೀವಗಳು ಪರ್ಯಾಪ್ತಕ ಹಾಗೂ ಅಪರ್ಯಾಪ್ತಕವೆಂದು ಎರಡೆರಡು ಬಗೆಯಾಗಿವೆ. ಶಕ್ತಿ ಪೂರ್ಣಗೊಳ್ಳುವುದಕ್ಕೆ 'ಪರ್ಯಾಪ್ತಿ'ಯೆನ್ನುವರು[೭]. ಪ್ರಕೃತವಾದ ಶರೀರಕ್ಕೂ ಪರ್ಯಾಪ್ತಿಗಳಿಗೂ ಸಮಂಜಸವಾದ ಪುದ್ಗಲವನ್ನು ಪರಿಗ್ರಹಿಸಿ ಅದು ಘನ ಮತ್ತು ಖಲಭಾಗ ರಸಭಾಗ ರೂಪವಾಗಿ ಪರಿಣಮಿಸುವಂತೆ ಮಾಡುವ ಶಕ್ತಿ ಪೂರ್ತಿಗೊಳ್ಳುವುದಕ್ಕೆ 'ಆಹಾರ ಪರ್ಯಾಪ್ತಿ'ಯೆನ್ನುವರು. ಮೂಳೆ ಮುಂತಾದ ಘನಭಾಗ, ರಕ್ತ ಮುಂತಾದ ದ್ರವಭಾಗವೂ ಬೇರೆಬೇರೆಯಾಗಿ ರೂಪಗೊಳ್ಳುವಂತೆ ಮಾಡುವ ಶಕ್ತಿ ಪೂರ್ತಿಯಾಗುವುದಕ್ಕೆ 'ಶರೀರ ಪರ್ಯಾಪ್ತಿ'ಯೆನ್ನು

---

೧. **ಸ್ಥಾವರ ಜೀವಿಗಳು**:–"ಪೃಥಿವೀಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ, ವನಸ್ಪತಿಕಾಯಿಕವೆಂದು ಐದು ಬಗೆ. ಚನ್ನಂಗಿ ಬೇಳೆಯಾಕಾರವಾಗಿ ಪೃಥಿಮಿಕಾಯಿಕ ಜೀವಿಗಳೂ, ಜಲಬಿಂದುವಿನ ಆಕಾರವಾಗಿ ಜಲಕಾಯಿಕ ಜೀವಗಳೂ, ಸೂಡುಗಟ್ಟಿದ ಸೂಜಿಯ ಆಕಾರವಾಗಿ ಅಗ್ನಿಕಾಯಿಕ ಜೀವಿಗಳೂ, ಧ್ವಜಾಕಾರವಾಗಿ ವಾಯುಕಾಯಿಕ ಜೀವಿಗಳೂ, ಮರ, ಗಿಡ, ಬಳ್ಳಿ, ಪೊದರು, ಹುಲ್ಲು ಮೊದಲಾದ ಅನೇಕಾಕಾರವಾಗಿ ವನಸ್ಪತಿಕಾಯಿಕ ಜೀವಿಗಳೂ ಇರುತ್ತವೆ. ಏಕೇಂದ್ರಿಯ ಜೀವಿಗಳು ಇನ್ನೂ ಅನೇಕ ಪ್ರಕಾರವಾಗಿವೆ."—ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ದ್ರ. ಸಂ., ಪು. ೧೫.

೨. ಕೇವಲ ಸ್ಪರ್ಶನ ಮತ್ತು ರಸನೇಂದ್ರಿಯಗಳನ್ನು ಪಡೆದಿರುವಂಥ ಶಂಖದ ಹುಳು, ಕ್ರಿಮಿ ಮೊದಲಾದುವು ದ್ವೀಂದ್ರಿಯಜೀವಿಗಳಾಗಿವೆ.

೩. ಸ್ಪರ್ಶನ, ರಸನ ಮತ್ತು ಘ್ರಾಣೇಂದ್ರಿಯಗಳನ್ನು ಮಾತ್ರ ಪಡೆದಿರುವ ಇರುವೆ ಮುಂತಾದುವು ತ್ರೀಂದ್ರಿಯಜೀವಿಗಳಾಗಿವೆ.

೪. ಸ್ಪರ್ಶನ, ರಸನ, ಘ್ರಾಣ ಮತ್ತು ಚಕ್ಷು ಈ ನಾಲ್ಕು ಇಂದ್ರಿಯಗಳುಳ್ಳ ಭ್ರಮರ ಮುಂತಾದುವು ಚತುರಿಂದ್ರಿಯಜೀವಿಗಳಾಗಿವೆ.

೫. ಸ್ಪರ್ಶನ, ರಸನ, ಘ್ರಾಣ, ಚಕ್ಷು, ಶ್ರೋತ–ಈ ಐದು ಇಂದ್ರಿಯಗಳನ್ನೂ ಪಡೆದಿರುವ ಮನುಷ್ಯ, ಮೃಗ, ಪಶು, ಪಕ್ಷಿ, ದೇವ, ನಾರಕ ಮುಂತಾದವರನ್ನು 'ಪಂಚೇಂದ್ರಿಯ ಜೀವಿ'ಗಳೆನ್ನುವರು. ಕೆಲವಕ್ಕೆ ಹೃದಯದೊಳಗೆ ಅಷ್ಟದಲ ಕಮಲದಂತೆ ಒಂದು ಮಾಂಸಖಂಡವಿರುವುದು; ಇದಕ್ಕೆ 'ದ್ರವ್ಯ ಮನಸ್ಸು' ಎನ್ನುವರು. ಇದನ್ನು ಪಡೆದಂಥ ಪಂಚೇಂದ್ರಿಯ ಜೀವಗಳಿಗೆ ಗ್ರಹಣ ಮನನ ಶಕ್ತಿಯಿರುತ್ತದೆ; ಅವು ಶಿಕ್ಷಣಾದಿಗಳನ್ನು ಗ್ರಹಿಸಬಲ್ಲವು; ಇಂಥವಕ್ಕೆ 'ಸಂಜ್ಞೀಪಂಚೇಂದ್ರಿಯ'ವೆನ್ನುವರು. ದ್ರವ್ಯ ಮನಸ್ಸಿಲ್ಲದ ಅಂದರೆ ಗ್ರಹಣ ಮನನ ಶಕ್ತಿಗಳಿಲ್ಲದ ಪಂಚೇಂದ್ರಿಯಗಳಿಗೆ 'ಅಸಂಜ್ಞಿಪಂಚೇಂದ್ರಿಯ ಜೀವಿ'ಯೆನ್ನುವರು.

೬. ನೂಕಾಟ ತಾಕಾಟಗಳಿಗೆ ಸಿಕ್ಕುವಂಥ ಸ್ಥೂಲಕಾಯದ ಏಕೇಂದ್ರಿಯ ಜೀವಿಗಳಿಗೆ ಬಾದರೈಸ್ಥೂಲೈಕೇಂದ್ರಿಯ ಜೀವಿಗಳೆಂದೂ, ಬೆಂಕಿ, ನೀರು, ಆಯುಧಗಳಿಂದ ಬಾಧೆಗೊಳಗಾಗದ ಸೂಕ್ಷ್ಮ ಶರೀರವುಳ್ಳ ಜೀವಿಗಳಿಗೆ ಸೂಕ್ಷ್ಮೈಕೇಂದ್ರಿಯಜೀವಿಗಳೆಂದು ಕರೆಯುವರು.

೭. (೧) ಆಹಾರ, (೨) ಶರೀರ, (೩) ಇಂದ್ರಿಯ, (೪) ಉಚ್ಛ್ವಾಸ ನಿಃಶ್ವಾಸ, (೫) ಭಾಷೆ, (೬) ಮನಸ್ಸು ಈ ಆರಕ್ಕೂ ಪರ್ಯಾಪ್ತಿಯೆನ್ನುವರು.

ವರು. ಸ್ಪರ್ಶ ಮೊದಲಾದ ಇಂದ್ರಿಯಗಳ ವಿಷಯವನ್ನು ಪರಿಗ್ರಹಿಸುವ ಶಕ್ತಿ, ಪೂರ್ಣಗೊಳ್ಳುವುದಕ್ಕೆ 'ಇಂದ್ರಿಯ ಪರ್ಯಾಪ್ತಿ'ಯೆನ್ನುವರು. ಉಸಿರಾಟದ ಶಕ್ತಿ ಪೂರ್ಣಗೊಳ್ಳುವುದಕ್ಕೆ 'ಉಚ್ಛ್ವಾಸನಿಃಶ್ವಾಸ ಪರ್ಯಾಪ್ತಿ'ಯೆನ್ನುವರು. ಭಾಷಾ ವರ್ಗಣೆಯಿಂದ ಬಂದ ಪುದ್ಗಲಗಳನ್ನು ವಚನರೂಪವಾಗಿ ಪರಿವರ್ತಿಸುವ ಶಕ್ತಿ ಪೂರ್ತಿಯಾಗುವುದಕ್ಕೆ 'ಭಾಷಾ ಪರ್ಯಾಪ್ತಿ'ಯೆನ್ನುವರು. ಮನೋವರ್ಗಣೆಯಿಂದಾದ ದ್ರವ್ಯ ಮನಸ್ಸಿನ ಸಹಾಯದಿಂದ ಗ್ರಹಣ ಮನನಾದಿಗಳನ್ನು ಪಡೆವ ಶಕ್ತಿ ಪೂರ್ತಿಯಾಗುವುದಕ್ಕೆ 'ಮನಃಪರ್ಯಾಪ್ತಿ'ಯೆನ್ನುವರು. ಇವುಗಳಲ್ಲಿ ಮೊದಲಿನ ನಾಲ್ಕು ಪರ್ಯಾಪ್ತಿಗಳು ಏಕೇಂದ್ರಿಯ ಜೀವಗಳಿಗೂ, ಮೊದಲಿನ ಐದು ಪರ್ಯಾಪ್ತಿಗಳು ವಿಕಲತ್ರಯ ಮತ್ತು ಅಸಂಜ್ಞೀ ಪಂಚೇಂದ್ರಿಯ ಜೀವಿಗಳಿಗೂ, ಆರು ಪರ್ಯಾಪ್ತಿಗಳು ಸಂಜ್ಞೀಪಂಚೇಂದ್ರಿಯಗಳಿಗೂ ಉಂಟಾಗುವುವು. ಆದರೆ ಈ ಪರ್ಯಾಪ್ತಿಗಳುಂಟಾಗುವುದರಲ್ಲೇ ಜೀವಿ ನಾಶವೊಂದಿದ್ದರೆ ಅದಕ್ಕೆ 'ಅಪರ್ಯಾಪ್ತಕ ಜೀವಿ'ಯೆನ್ನುವರು. (ಒಂದು ಪರ್ಯಾಪ್ತಿಯು ಪೂರ್ಣವಾಗದೆ ಶ್ವಾಸೋಚ್ಛ್ವಾಸದ ಹದಿನೆಂಟನೆಯ ಭಾಗದಲ್ಲೇ ಮರಣಾವಸ್ಥೆಗೆ ಗುರಿಯಾದ ಜೀವಿಗೆ 'ಲಬ್ಧ್ಯಪರ್ಯಾಪ್ತಕ'ವೆನ್ನುವರು; ಅಪರ್ಯಾಪ್ತಿ ನಾಮಕರ್ಮೋದಯದಿಂದ ಹೀಗಾಗುವುದು.) ಪರ್ಯಾಪ್ತಾಪರ್ಯಾಪ್ತ ಭೇದ ಪ್ರತಿಯೊಂದು ಜೀವದಲ್ಲಿಯೂ ಇರುವುದರಿಂದ ಜೀವಕೋಟಿ ಯನ್ನು ಹದಿನಾಲ್ಕು ವಿಭಾಗವಾಗಿ ಭಾಗಿಸಿರುವರು.[೧] ಈ ಭೇದಗಳಿಗೆ ಹದಿನಾಲ್ಕು 'ಜೀವ ಸಮಾಸ'ವೆನ್ನುವರು.

ಅಜೀವದ್ರವ್ಯ

ತ್ರಿಕಾಲವನ್ನೂ ತ್ರಿಲೋಕವನ್ನೂ ಏಕಕಾಲದಲ್ಲಿ ಗ್ರಹಿಸುವ ಕೇವಲಜ್ಞಾನದರ್ಶನಗಳು ಆತ್ಮನ ಶುದ್ಧೋಪಯಾಗವಾಗಿವೆ. ಮತಿಶ್ರುತ ಅವಧಿ ಮನಃಪರ್ಯಯ ಜ್ಞಾನಗಳು ಆತ್ಮನ 'ಅಶುದ್ಧೋಪಯೋಗವಾಗಿವೆ. ಅವ್ಯಕ್ತರೂಪವಾದ ಸುಖದುಃಖಾನುಭವಕ್ಕೆ **'ಕರ್ಮಫಲ ಚೇತನಾ'** ಎನ್ನುವರು. ಅಶುದ್ಧೋಪಯೋಗಕ್ಕೂ, ತನ್ನ ಪ್ರಯತ್ನಪೂರಕವಾದ ಇಷ್ಟಾನಿಷ್ಟ ಪರಿಣಾಮಕ್ಕೂ, ರಾಗದ್ವೇಷರೂಪವಾದ ಪರಿಣಾಮಕ್ಕೂ **'ಕರ್ಮಚೇತನಾ'** ಎನ್ನುವರು. ಶುದ್ಧೋಪಯೋಗಕ್ಕೆ 'ಶುದ್ಧಚೇತನಾ' ಎನ್ನುವರು. ಈ ಚೇತನಗಳಲ್ಲಿ ಯಾವುದೊಂದೂ ಇಲ್ಲದಿರುವ ವಸ್ತುವಿಗೆ 'ಅಜೀವದ್ರವ್ಯ'ವೆನ್ನುವರು. (೧) ಪುದ್ಗಲ, (೨) ಧರ್ಮ, (೩) ಅಧರ್ಮ, (೪) ಆಕಾಶ, (೫) ಕಾಲ—ಈ ಐದೂ ಅಜೀವದ್ರವ್ಯಗಳಾಗಿವೆ.

ಪುದ್ಗಲ (Matter[೨]) ಪೂರಣಗಲನ (ಸೇರುವುದು ಬೇರೆಯಾಗುವುದು) ಸ್ವಭಾವವುಳ್ಳ

೧. ಎರಡು ಏಕೇಂದ್ರಿಯ, ೩ ವಿಕಲತ್ರಯ, ಎರಡು ಪಂಚೇಂದ್ರಿಯ ವಿಭಾಗಗಳನ್ನು (ಒಟ್ಟು ಏಳು ವಿಭಾಗ) ಪರ್ಯಾಪ್ತಕ ಮತ್ತು ಅಪರ್ಯಾಪ್ತಕಗಳಿಂದ ಗುಣಿಸಿದರೆ ಹದಿನಾಲ್ಕು ವಿಭಾಗವಾಗುವುದು.

೨. "This is well understood in physics and chemistry. Here the real substance is the atom, the ultimate indivisible unit. Matter is made up of atoms, but the atom is not made up of other units. Atoms as at present understood by modern chemistry are far grosser than those contemplated by the Jains. Innumerable atoms as understood by the Jains make when combined tha atom of modern chemistry, which is not an ultimate unit.-'JAINISM' by HERBEAT WARREN, page 13.

ವಸ್ತುವಿಗೆ ಪುದ್ಗಲವೆನ್ನುವರು. ಯಾವುದರಲ್ಲಿ ಸ್ಪರ್ಶ, ರಸ, ಗಂಧ ಮತ್ತು ವರ್ಣಗಳಿರುವುವೋ ಅದನ್ನು ಪುದ್ಗಲದ್ರವ್ಯವೆನ್ನುವರು. ಇದರಲ್ಲಿ ವಿಭಾಗಿಸಲು ಬಾರದ ಸೂಕ್ಷ್ಮಾತಿಸೂಕ್ಷ್ಮ ವಿಭಾಗಕ್ಕೆ ಪರಮಾಣುವೆಂದೂ, ಅನೇಕ ಅಣುಗಳು ಸೇರಿ ಉಂಟಾದ ಪಿಂಡಕ್ಕೆ 'ಸ್ಕಂದ'ವೆಂದೂ ಕರೆಯುತ್ತಾರೆ. ಅಣುಗಳಲ್ಲಿ ಸ್ನಿಗ್ಧರೂಕ್ಷ ಗುಣಗಳಿರುವುದರಿಂದ ಅವು ಒಂದಕ್ಕೊಂದು ಕಲೆಯಬಲ್ಲವು. "ಎರಡು ಭಾಗಸ್ನಿಗ್ಧ ಅಥವಾ ರೂಕ್ಷ ಗುಣವುಳ್ಳ ಅಣುವಿಗೆ ನಾಲ್ಕು ಭಾಗ ಸಜಾತೀಯ ಅಥವಾ ವಿಜಾತೀಯ ಗುಣವುಳ್ಳ ಅಣುವಿನೊಡನೆ ಬಂಧವಾಗುವುದು. ಒಂದು ಭಾಗ-ಜಘನ್ಯಗುಣವುಳ್ಳ ಅಣುವಿಗೆ ಬೇರೆ ಅಣುಗಳೊಡನೆ ಬಂಧವಿಲ್ಲ. ಮುಂದೆ ಎರಡೆರಡು ಅಧಿಕ ಗುಣಗಳುಳ್ಳ ಅಣುಗಳಿಗೆ ಬಂಧವಿದೆ. ಅಣುಗಳು ಒಂದಕ್ಕೊಂದು ಸೇರಿ ಸ್ಕಂಧವಾಗುವುದು.[೧]" ಶಬ್ದ (ಭಾಷಾತ್ಮಕ ಮತ್ತು ಅಭಾಷಾತ್ಮಕ) ಮತ್ತು ರಾಗದ್ವೇಷಾದಿ ಎಲ್ಲ ಕರ್ಮಗಳೂ ಪುದ್ಗಲ ವಿಭಾಗದಲ್ಲೇ ಅಡಕವಾಗುವುವು![೨]

ಧರ್ಮದ್ರವ್ಯ (ETHER[೩]) ಮೀನುಗಳ ಸಂಚಾರಕ್ಕೆ ನೀರು ನೆರವಾಗುವಂತೆ ಧರ್ಮದ್ರವ್ಯವು ಜೀವಗಳ ಮತ್ತು ಪುದ್ಗಲಗಳ ಸಂಚಾರಕ್ಕೆ ನೆರವಾಗುವುದು. ಆದರೆ ಧರ್ಮದ್ರವ್ಯ ಎಂದೂ ಜೀವ ಪುದ್ಗಲಗಳನ್ನು ತಾನಾಗೆ ಸಂಚಾರ ಮಾಡಿಸುವುದಿಲ್ಲ. ಇದು ಕೇವಲ ಉದಾಸೀನ ಕಾರಣವಾಗಿದೆ. (ಧರ್ಮದ್ರವ್ಯಕ್ಕೂ ಪುಣ್ಯಕ್ಕೂ ಸಂಬಂಧವನ್ನು ಕಲ್ಪಿಸಬಾರದು) ಇದು ಅಖಂಡವಾಗಿಯೂ ಅಮೂರ್ತವಾಗಿಯೂ ಇರುವಂಥ ಒಂದು ವಸ್ತು. ಇದು ಲೋಕದ ತುಂಬ ವ್ಯಾಪಕವಾಗಿದೆ. ನೀರಿಲ್ಲದಿದ್ದರೆ ಮೀನು ಹೇಗೆ ಸಂಚರಿಸಲಾರದೋ ಹಾಗೆಯೇ ಧರ್ಮದ್ರವ್ಯವಿಲ್ಲದಿದ್ದರೆ ಜೀವ ಮತ್ತು ಪುದ್ಗಲ ಸಂಚರಿಸಲಾರವು. (Medium of Motion—Dharma.)

ಅಧರ್ಮದ್ರವ್ಯ (Medium of rest): ಜೀವ ಮತ್ತು ಪುದ್ಗಲಗಳು ತಂಗಲು ಅಧರ್ಮದ್ರವ್ಯ ನೆರವಾಗುವುದು. ಹೋಗುವವರನ್ನು ಇದು ತಾನಾಗೇ ತಡೆದು ನಿಲ್ಲಿಸುವುದಿಲ್ಲ. ಧರ್ಮದ್ರವ್ಯದಂತೆ ಇದೂ ಅಖಂಡವಾಗಿ ಅಮೂರ್ತವಾಗಿ ಇರುವಂಥ ದ್ರವ್ಯ. ಇದು ಲೋಕದ ತುಂಬ ವ್ಯಾಪಕವಾಗಿದೆ. (ಅಧರ್ಮದ್ರವ್ಯವೆಂದರೆ ದುರದೃಷ್ಟವೆಂದುತಿಳಿಯಬಾರದು.)

ಆಕಾಶದ್ರವ್ಯ (Space): ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಕಾಲದ್ರವ್ಯಗಳಿಗೆ

೧. ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ದ್ರ. ಸಂ. ಪು. ೩೬.

೨. ಶಬ್ದ, ಬಂಧ (ಒಂದಕ್ಕೊಂದು ಅಂಟಿರುವುದು), ಸೂಕ್ಷ್ಮತ್ವ, ಸ್ಥೂಲತ್ವ, ಸಂಸ್ಥಾನ(ಆಕಾರ)ಭೇದ, ಕತ್ತಲು, ನೆರಳು, ಬಿಸಿಲು, ಬೆಳದಿಂಗಳು—ಇವೆಲ್ಲ ಪುದ್ಗಲದ್ರವ್ಯದ ಪರ್ಯಾಯವಾಗಿವೆ. ರೋಗವು ಪುದ್ಗಲವೇ.

೩. **TWO ETHERS** (ಧರ್ಮದ್ರವ್ಯ, ಅಧರ್ಮದ್ರವ್ಯ): Ether, mentioned above, is not matter in the Jaina View. Matter has various qualities and relations which these two ethers do not possess. It is only the Jain philosophy that believes in these two substances. They are accompanying causes ('hetu') respectively of the motion of moving things and beings and of the stationary state of things and beings that are resting, in the sense of not moving. In each case it is the accompanying cause without which you cannot do—J. I., by HERBERT WARREN, page 13.

ಇರುವುದಕ್ಕೆ ಸ್ಥಳ ನೀಡುವಂಥದು ಆಕಾಶದ್ರವ್ಯವಾಗಿದೆ. ಜೀವಾದಿ ದ್ರವ್ಯಗಳು ಇರುವಂಥ ಆಕಾಶವಿಭಾಗಕ್ಕೆ ಲೋಕಾಕಾಶವೆಂದೂ, ದ್ರವ್ಯಗಳಿಲ್ಲದ ಪ್ರದೇಶಕ್ಕೆ ಅಲೋಕಾಕಾಶವೆಂದೂ ಕರೆಯುತ್ತಾರೆ.

ಕಾಲದ್ರವ್ಯ (Time[೨]): ಕುಂಬಾರನ ತಿಗರಿಯು ತಿರುಗಲಿಕ್ಕೆ ಅದರ ಕೆಳಗಿನ ಕಬ್ಬಿಣದ ಆಣಿಯು ಕಾರಣವಾಗುವಂತೆ, ಯಾವುದು ಜೀವಾದಿದ್ರವ್ಯಗಳು ಪರಿಣಮಿಸುವುದಕ್ಕೆ ನೆರವಾಗುವುದೋ ಅದಕ್ಕೆ ಕಾಲದ್ರವ್ಯವೆನ್ನುವರು. ಜೀವ ಪುದ್ಗಲ ದ್ರವ್ಯಗಳ ನೂತನ ಪುರಾತನ ಅವಸ್ಥೆಗಳಿಗೆ ಕಾರಣವಾದುದಕ್ಕೆ ವ್ಯವಹಾರಕಾಲವೆನ್ನುವರು. ಇದು ಸಮಯ, ಘಳಿಗೆ, ದಿನ, ಮಾಸ ಮುಂತಾದ ಭೇದಗಳಿಂದ ಕೂಡಿದೆ.

ತಾವಾಗೇ ಅವಸ್ಥಾಂತರವನ್ನು ಪಡೆವ ಜೀವಾದಿ ಪುದ್ಗಲಗಳ ಪರಿಣಮನಕ್ಕೆ ಸಹಕಾರಿಯಾಗಿರುವುದಕ್ಕೆ 'ವರ್ತನಾ' ಎನ್ನುವರು; ವರ್ತನೆಯೇ ಲಕ್ಷಣವಾಗುಳ್ಳದಕ್ಕೆ ನಿಶ್ಚಯ ಕಾಲವೆನ್ನುವರು; ಇದು ಅನಾದಿನಿಧನವೂ ಅಮೂರ್ತವೂ ಆಗಿದೆ.

ಎಷ್ಟು ಲೋಕಾಕಾಶಪ್ರದೇಶಗಳಿವೆಯೋ ಅಷ್ಟೇ ಕಾಲದ್ರವ್ಯಪ್ರದೇಶಗಳಿದ್ದು, ಒಂದೊಂದು ಲೋಕಾಕಾಶಪ್ರದೇಶದ ಮೇಲೂ ಒಂದೊಂದು ಕಾಲದ್ರವ್ಯಪ್ರದೇಶವಿದೆ. ಕಾಲವು ಅಣುದ್ರವ್ಯ ರೂಪವಾದುದು; ಇದು ಬಹುಪ್ರದೇಶಿಯಲ್ಲವಾದುದರಿಂದ ಅಸ್ತಿಕಾಯವಲ್ಲ.

ವರ್ತನ, ಪರಿಣಾಮ, ಕ್ರಿಯೆ, ಪರತ್ವ ಮತ್ತು ಅಪರತ್ವ ಇವು ಕಾಲದ್ರವ್ಯದಿಂದಾಗುವ ಉಪಕಾರಗಳು. ಜೀವಾದಿದ್ರವ್ಯಗಳು ತಮ್ಮ ಪರ್ಯಾಯಗಳು ಪೂರ್ಣಗೊಳ್ಳುವುದಕ್ಕಾಗಿ ಆಗಿಂದಾಗ್ಗೆ ಪರಿವರ್ತನೆಯಾಗುತ್ತಿರುತ್ತವೆ. ಈ ಪರಿವರ್ತನೆಗೆ ಬಹಿರಂಗವಾಗಿ ಯಾವುದು ಕಾರಣವೋ ಅದು 'ವರ್ತನೆ' ಎನಿಸುವುದು. ದ್ರವ್ಯದಲ್ಲಿ ಒಂದು ಧರ್ಮವನ್ನು ನಾಶ ಮಾಡಿ ಮತ್ತೆ ಇನ್ನೊಂದು ಧರ್ಮವನ್ನು ಉಂಟುಮಾಡುವ ಪರ್ಯಾಯವನ್ನು ಹೊಂದುವುದಕ್ಕೆ ಪರಿಣಾಮವೆಂದು ಹೆಸರು. ದ್ರವ್ಯದಲ್ಲಿ ಚಲನವಲನ ಕಾಣಿಸಿಕೊಳ್ಳುವುದು, ಒಂದು ಕಡೆಯಿಂದ ಇನ್ನೊಂದು ಕ್ಷೇತ್ರಕ್ಕೆ ಚಲಿಸುವುದು ಕ್ರಿಯೆಯೆನಿಸುವುದು. ಹಿರಿಯ ಕಿರಿಯ ಎಂಬ ವ್ಯವಹಾರಕ್ಕೆ ಪರತ್ವ ಅಪರತ್ವಗಳು ಕಾರಣವಾಗಿವೆ.

ಕಲ್ಪಕಾಲ

ಒಂದು ಕಲ್ಪವನ್ನು ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂದು ವಿಭಾಗಿಸುವರು. ಹತ್ತು ಕೋಟಾಕೋಟಿ ಸಾಗರೋಪಮಕಾಲಕ್ಕೆ ಒಂದು ಉತ್ಸರ್ಪಿಣಿಕಾಲವಾಗುವುದು. ಅವಸರ್ಪಿಣಿಯೂ ಅಷ್ಟೇ ವಿಸ್ತಾರವಾದುದು. ಇವೆರಡೂ ಒಂದಾದ ಮೇಲೊಂದರಂತೆ ಕಾಣಿಸಿಕೊಂಡು

೨. TIME : Time is not a collection of indivisible inseparable parts, as are the other five substances. Time is called a substance only as a matter of convenience. It is really the modification (Paryaya) of a substance. It is that modification of a thing or being by which we know the anteriority or posteriority of it, the oldness or newness. And it is a modification which is common to all the other substances. (Dravyas). Time is really the duration of the states of substances—J. I., by HERBERT WARREN, page 14.

ಅನಂತಕಾಲದಿಂದ ನಿರಂತರವಾಗಿ ಸುತ್ತುತ್ತಿವೆ. ಮುಂದೆಯೂ ಸುತ್ತುವುವು. ಉತ್ಸರ್ಪಿಣಿಯಲ್ಲಿ ದಿನೇದಿನೇ ಧರ್ಮ, ಸತ್ಯ, ನ್ಯಾಯ, ಪ್ರಾಣಿಗಳ ಸುಖಸಂತೋಷ ಆಯುರಾರೋಗ್ಯ ಹೆಚ್ಚುತ್ತಾ ಹೋಗುವುವು; ಅವಸರ್ಪಿಣಿಯಲ್ಲಿ ಕ್ರಮವಾಗಿ ಅವು ಇಳಿಯುತ್ತಾ ಬರುವುವು. ಲೋಕದ ಮೇಲಾಗುವ ಕಾಲಧರ್ಮಕ್ಕನುಸರಿಸಿ ಉತ್ಸರ್ಪಿಣಿ ಮತ್ತು ಅವಸರ್ಪಿಣಿಗಳನ್ನು ಮತ್ತೆ ಆರಾರು ವಿಭಾಗ ಮಾಡಿರುವರು:

ಉತ್ಸರ್ಪಿಣಿ		ಅವಸರ್ಪಿಣಿ	
(೧) ದುಷ್ಷಮ ದುಷ್ಷಮ	— ಪೂರ್ಣ ದುಃಖ	(೧) ಸುಷಮ ಸುಷಮ	ಸುಖ × ಸುಖ
(೨) ದುಷ್ಷಮ	— ದುಃಖ	(೨) ಸುಷಮ	ಸುಖ
(೩) ದುಷ್ಷಮ ಸುಷಮ	— ದುಃಖ ಮುಂದು ಸುಖ ಹಿಂದು	(೩) ಸುಷಮ ದುಷ್ಷಮ	ಸುಖ + ದುಃಖ
(೪) ಸುಷಮ ದುಷ್ಷಮ	— ಸುಖ ಮುಂದು ದುಃಖ ಹಿಂದು	(೪) ದುಷ್ಷಮ ಸುಷಮ	ದುಃಖ + ಸುಖ
(೫) ಸುಷಮ	— ಸುಖಕರ	(೫) ದುಷ್ಷಮ	ದುಃಖ
(೬) ಸುಷಮ ಸುಷಮ	— ಸುಖತಮ	(೬) ದುಷ್ಷಮ ದುಷ್ಷಮ	ದುಃಖ × ದುಃಖ

ಅವಸರ್ಪಿಣಿಯ ಮೊದಲ ಮೂರು ಕಾಲಗಳೂ, ಉತ್ಸರ್ಪಿಣಿಯ ಕೊನೆಯ ಮೂರು ಕಾಲಗಳೂ ತುಂಬ ಹಾಯಾಗಿದ್ದು ದುಡಿಯುವ ಗೋಜಿಲ್ಲದೆ ಕಲ್ಪತರುಗಳಿಂದ ಬೇಕುಬೇಕಾದುದನ್ನು ಜನ ಪಡೆದು ಸುಖವಾಗಿರುವರು. ಈ ಕಾಲಧರ್ಮಕ್ಕೆ ಭೋಗಭೂಮಿಯೆನ್ನುವರು. ಅವಸರ್ಪಿಣಿಯ ನಾಲ್ಕನೆ ಕಾಲದಲ್ಲೂ ಉತ್ಸರ್ಪಿಣಿಯ ಮೂರನೇ ಕಾಲದಲ್ಲೂ ೬೩ ಜನ ಶಲಾಕಾಪುರುಷರು ಜನಿಸುವರು; ಇವರಲ್ಲಿ ೨೪ ಜನ ಜಗದೋದ್ಧಾರಕರಾದ ತೀರ್ಥಂಕರ ಭಗವಾನರಾಗಿರುವರು. ಉತ್ಸರ್ಪಿಣಿಯ ಮೊದಲನೆ ಮೂರುಕಾಲ ಅಂತೆ ಅವಸರ್ಪಿಣಿಯ ಕೊನೆಯ ಮೂರುಕಾಲದಲ್ಲಿ ಪ್ರಾರಂಭವಾಗುವುದು ಜಗದ ಜಂಜಾಟವೆಲ್ಲ; ದುಡಿದು ತಿನ್ನುವ ಅವಸ್ಥೆ ಬಂದು ಭೋಗಭೂಮಿ ಹೋಗಿ ಕರ್ಮಭೂಮಿ ತಲೆಹಾಕುವುದು; ಇದ್ದಬದ್ದ ಕಲ್ಪವೃಕ್ಷಗಳೆಲ್ಲ ಮುರುಟಿ ಹೋಗುವುವು! ಭರತ ಮತ್ತು ಐರಾವತಕ್ಷೇತ್ರಗಳು ಕಾಲಧರ್ಮಕ್ಕನುಗುಣವಾಗಿ ಒಮ್ಮೆ ಭೋಗಭೂಮಿಯಾದರೆ ಮತ್ತೊಮ್ಮೆ ಕರ್ಮಭೂಮಿಗಳಾಗುತ್ತಿವೆ. ಸಾಡೇಸಾತಿನ ಶನಿಕಾಟ ಲೌಕಿಕವಾಗಿ ದುಃಖಕರವಾದುದಾದರೂ ಆಧ್ಯಾತ್ಮಿಕವಾಗಿ ಏಳಿಗೆಯ ಕಾಲವೆಂದು ಜ್ಯೋತಿಷ್ಯ ಹೇಳುತ್ತದೆ. ಅದೇ ರೀತಿ ಕರ್ಮಭೂಮಿಯಾದಾಗ ಬೆವರುಸುರಿಸಿ ಹೊಟ್ಟೆ ತುಂಬಿಸಿಕೊಳ್ಳುವ ತಾಪತ್ರಯವಿದ್ದರೂ 'ದುಷ್ಷಮ ಸುಷಮ' (ಕರ್ಮಭೂಮಿಯಾಗಿ ಪರಿವರ್ತನೆಯಾಗುವ ಕಾಲದ ಮೊದಲ ಭಾಗ) ಕಾಲ ಕರ್ಮಕ್ಷಯ ಮಾಡಿಕೊಳ್ಳಲು ಹದವಾದ ಕಾಲ! ಎಷ್ಟೇ ನೋವಿದ್ದರೂ ಮತ್ತೊಮ್ಮೆ ಎಂದೂ ನೋವಿಗೆ ಸಿಗದಂಥ ಯೋಜನೆ ಹಾಕುವವರು ಈ ಕಾಲದಲ್ಲೇ ಹಾಕಬೇಕು.[೧]

೧. ಈ ಮಾತು ಕೇವಲ ಭರತ ಮತ್ತು ಐರಾವತಕ್ಕೆ ಅನ್ವಯಿಸುವುದು. 'ದುಷ್ಷಮ ಸುಷಮ' ಕಾಲವನ್ನು ನಾವು ಕಳೆದುಕೊಂಡರೆ ಮತ್ತೆ ಭರತಕ್ಷೇತ್ರದಿಂದಾಗಲಿ ಐರಾವತಕ್ಷೇತ್ರದಿಂದಾಗಲಿ ನೇರವಾಗಿ ಮುಕ್ತರಾಗು

ಅಸ್ತಿಕಾಯ:—ಅಸ್ತಿ+ಕಾಯವೆಂದರೆ ಇರುವಿಕೆ ಮತ್ತು ಆಕ್ರಮಿಸುವಿಕೆ ಎಂಬ ಗುಣವುಳ್ಳ ದ್ರವ್ಯವಾಗುವುದು. ಅಂದರೆ ಅಸ್ತಿತ್ವ ಮತ್ತು ಬಹುಪ್ರದೇಶ ವ್ಯಾಪಕತ್ವ ಎಂಬ ಎರಡು ಧರ್ಮಗಳುಳ್ಳ ವಸ್ತುವು 'ಅಸ್ತಿಕಾಯ'ವಾಗುವುದು. ಷಡ್‌ದ್ರವ್ಯಗಳಲ್ಲಿ 'ಕಾಲದ್ರವ್ಯ' ಒಂದನ್ನು ಬಿಟ್ಟು ಉಳಿದ ಐದು ದ್ರವ್ಯಗಳು (ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ) ಅಸ್ತಿಕಾಯಗಳಾಗಿವೆ. ಕಾಲದ್ರವ್ಯಾಣುಗಳಲ್ಲಿ ಒಂದೊಂದೂ ಕೇವಲ ಒಂದೊಂದೇ ಆಕಾಶಪ್ರದೇಶವನ್ನು ಆಕ್ರಮಿಸಿಕೊಂಡಿರುತ್ತದೆ; ಒಂದೊಂದು ಪ್ರದೇಶದಲ್ಲಿ ಒಂದೊಂದೇ ಕಾಲದ್ರವ್ಯಾಣು ಬೇರೆ ಬೇರೆಯಾಗಿರುತ್ತದೆ. ಈ ಅಣುಗಳು ಒಂದರೊಡನೊಂದು ಕಲೆತು ಸ್ಕಂಧವಾಗುವುದಿಲ್ಲ. ಪುದ್ಗಲದ್ರವ್ಯಾಣುಗಳು ಒಂದರೊಡನೊಂದು ಸೇರಿ ಸ್ಕಂಧವಾಗಿ ಬಹುಪ್ರದೇಶಿಯೆನಿಸುವುದರಿಂದ ಅದನ್ನೂ ಅಸ್ತಿಕಾಯವೆನ್ನುವರು.[೧] (ಒಂದು ಪರಮಾಣು ತಂಗುವಷ್ಟೆಡೆಗೆ ಪ್ರದೇಶವೆನ್ನುವರು.)

ಸಪ್ತತತ್ವ

ಮುಖ್ಯ ತತ್ವಗಳು ಎರಡು, ಒಂದು ಜೀವ ಇನ್ನೊಂದು ಅಜೀವ. ಚೇತನಾಚೇತನದ (ಜೀವಾಜೀವ) ಪರ್ಯಾಯವನ್ನು ಪರ್ಯಾಲೋಚಿಸುವಾಗ (೧) ಆಸ್ರವ, (೨) ಬಂಧ, (೩) ಸಂವರ, (೪) ನಿರ್ಜರಾ, (೫) ಮೋಕ್ಷ—ಈ ಐದು ತತ್ವಗಳು ಕಂಡುಬರುತ್ತವೆ. ಅದರಿಂದ ಒಟ್ಟು **ಸಪ್ತತತ್ವಗಳಾಗುವುವು** (೨ + ೫ = ೭.)

ಆಸ್ರವ[೨]—ಪುದ್ಗಲದ್ರವ್ಯದ ಅಣುಸಮೂಹ, ಆತ್ಮಪ್ರದೇಶಕ್ಕೆ ಕರ್ಮರೂಪವಾಗಿ ಹರಿದು ಬರುವುದಕ್ಕೆ ಆಸ್ರವವೆಂದು ಹೆಸರು. ಜ್ಞಾನಾವರಣಾದಿ ಪುದ್ಗಲಕರ್ಮ, ಆತ್ಮ ಪ್ರದೇಶಕ್ಕೆ ಹರಿದುಬರಲು ನಿಮಿತ್ತಕಾರಣವಾದ ಜೀವದ ರಾಗಾದಿ ವಿಕಲ್ಪ ಪರಿಣಾಮಗಳಿಗೆ 'ಭಾವಾಸ್ರವ'ವೆಂದು ಹೆಸರು. ಜೀವದ ರಾಗಾದಿ ಪರಿಣಾಮವನ್ನು ನಿಮಿತ್ತ ಮಾಡಿಕೊಂಡು ಜ್ಞಾನಾವರಣಾದಿ ಕರ್ಮಗಳು ಆತ್ಮಪ್ರದೇಶಕ್ಕೆ ಹರಿದು ಬರುವಿಕೆಗೆ 'ದ್ರವ್ಯಾಸ್ರವ'ವೆನ್ನುವರು.

ಕರ್ಮಸಮೂಹದ ಸ್ವರೂಪವನ್ನು ಅರಿತ ಹೊರತು ಸಪ್ತತತ್ವ ಅರ್ಥವಾಗುವುದಿಲ್ಲ. ಅದರಿಂದ ಈಗ ಕರ್ಮಗಳ ಕಡೆ ತಿರುಗೋಣ.

ಅಷ್ಟಕರ್ಮ

ಕರ್ಮಪುದ್ಗಲವನ್ನು ಮುಖ್ಯವಾಗಿ ಎಂಟು ವಿಭಾಗ ಮಾಡಿರುವರು. ಒಂದೊಂದು ವಿಭಾಗದಲ್ಲೂ ಅನೇಕ ಉಪವಿಭಾಗಗಳಿವೆ. (೧) ಜ್ಞಾನಾವರಣ, (೨) ದರ್ಶನಾವರಣ, (೩) ವೇದ

ವಂತಿಲ್ಲ. ಬೇಕಾದರೆ ವಿದೇಹಕ್ಷೇತ್ರದಲ್ಲಿ ಭವವೆತ್ತಿ ಅಲ್ಲಿಂದ ಮುಕ್ತರಾಗಬಹುದು. ಅಂತೂ ಬಳಸಾಟ ತಪ್ಪಿದ್ದಲ್ಲ.

೧. ದ್ರ. ಸಂ., ಪ. ೨೪.

೨. All actions of embodied living beings, whether mental or physical, including speech, are accompanied by an influx of matter towards the soul.—Sri C. R. Jain, 'The Householders Dharma' Introduction, page ೪೨.

ನೀಯ, (೪) ಮೋಹನೀಯ, (೫) ಆಯುಷ್ಯ, (೬) ನಾಮ, (೭) ಗೋತ್ರ, (೮) ಅಂತರಾಯ.

(೧) **ಜ್ಞಾನಾವರಣೀಯ ಕರ್ಮ** (The Knowledge-obstructing): ಆತ್ಮನ ಸಹಜ ಸ್ವರೂಪವಾದ ಜ್ಞಾನದ ಮೇಲೆ ಮೋಡದಂತೆ ಕವಿದು ಅದನ್ನು ಮಂಕುಗೊಳಿಸುವುದು. ಇದರಲ್ಲಿ (೧) ಮತಿಜ್ಞಾನಾವರಣ, (೨) ಶ್ರುತಜ್ಞಾನಾವರಣ, (೩) ಅವಧಿಜ್ಞಾನಾವರಣ, (೪) ಮನಃಪರ್ಯಯಜ್ಞಾನಾವರಣ, (೫) ಕೇವಲಜ್ಞಾನಾವರಣ—ಈ ರೀತಿ ಐದು ಬಗೆಯಾಗಿದೆ. ಒಟ್ಟಿನಲ್ಲಿ ಜ್ಞಾನಾವರಣೀಯಕರ್ಮ ಸಂದರ್ಭೋಚಿತವಾಗಿ ಆತ್ಮನ ಜ್ಞಾನಚೇತನದ ಶಕ್ತಿ ಸಂಪದವನ್ನು ಕಬಳಿಸುತ್ತಾ ಹೋಗುವುದು.

(೨) **ದರ್ಶನಾವರಣೀಯಕರ್ಮ** (The perception-obstructing): ಇದು ಆತ್ಮದ ದರ್ಶನಗುಣವನ್ನು ಘಾತ ಮಾಡುವುದು. ಇದರಲ್ಲಿ (೧) ಚಕ್ಷು ದರ್ಶನಾವರಣ, (೨) ಅಚಕ್ಷು ದರ್ಶನಾವರಣ, (೩) ಅವಧಿದರ್ಶನಾವರಣ, (೪) ಕೇವಲ ದರ್ಶನಾವರಣ, (೫) ನಿದ್ರಾ, (೬) ನಿದ್ರಾನಿದ್ರ, (೭) ಪ್ರಚಲಾ, (೮) ಪ್ರಚಲಾಪ್ರಚಲ, (೯) ಸ್ತ್ಯಾನಗೃದ್ಧಿ—ಎಂದು ೯ ಬಗೆ. [ನಿದ್ರೆ ಬರುವುದು, ಮತ್ತೆ ಮತ್ತೆ ಜೊಂಪುಹತ್ತುವುದು, ಅರೆನಿದ್ರೆಯಾಗಿರುವುದು. ನಿದ್ರೆಯಲ್ಲಿ ಅವಯವಗಳನ್ನು ಅಲುಗಾಡಿಸುವುದು, ಜೊಲ್ಲು ಸುರಿಸುವುದು, ಸ್ವಪ್ನದಲ್ಲಿ ಶಕ್ತಿಮೀರಿ ಕೆಲಸಮಾಡುವುದು, ಎಚ್ಚರಾದಾಗ ಅದರ ನೆನಪೂ ಇಲ್ಲದಿರುವುದು, ಇವಕ್ಕೆ ಕ್ರಮವಾಗಿ ನಿದ್ರಾ, ನಿದ್ರಾನಿದ್ರ, ಪ್ರಚಲಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿ ಎಂದು ಹೇಳಲಾಗುವುದು.[೧]]

(೩) **ವೇದನೀಯ** (Which regulates the experiences of Pleasure and Pain): ಈ ಕರ್ಮ ಆತ್ಮದ ಅವ್ಯಾಬಾಧಗುಣವನ್ನು ಘಾತ ಮಾಡುವುದು. ಇದರಲ್ಲಿ ಸಾತಾ ವೇದನೀಯ (ವಿಷಯ ಸುಖವನ್ನು ತಂದೊಡ್ಡುವುದು), ಅಸಾತಾವೇದನೀಯ (ದುಃಖವನ್ನು ನೀಡುವುದು) ಎಂದು ಎರಡು ಬಗೆ.

(೪) **ಮೋಹನೀಯಕರ್ಮ**: ಆತ್ಮದ ದರ್ಶನ ಹಾಗೂ ಚಾರಿತ್ರ್ಯಗುಣವನ್ನು ಈ ಕರ್ಮ ಕುಂದಿಸುವುದು. ಇದರಲ್ಲಿ ಸಮ್ಯಗ್ದರ್ಶನ ಪ್ರಕಟವಾಗಲು ತಡೆಯೊಡ್ಡುವುದಕ್ಕೆ 'ದರ್ಶನಮೋಹನೀಯ'ವೆನ್ನುವರು. ಸಮ್ಯಕ್‌ಚಾರಿತ್ರ್ಯಕ್ಕೆ ಅಡ್ಡವಾಗಿ ಬರುವುದನ್ನು 'ಚಾರಿತ್ರ್ಯಮೋಹನೀಯ'ವೆನ್ನುವರು.[೨]

ದರ್ಶನಮೋಹನೀಯ: ಇದರಲ್ಲಿ (೧) ಮಿಥ್ಯಾತ್ವ, [ಇದು ಉದಯಕ್ಕೆ ಬಂದಾಗ ಜೀವಿಗೆ ಯೋಗ್ಯವಲ್ಲದ ಕಡೆ ಶ್ರದ್ಧೆಯುಂಟಾಗುವುದು.] (೨) **ಸಮ್ಯಙ್ಮಿಥ್ಯಾತ್ವ** [ಇದು ಉದಯಕ್ಕೆ ಬಂದಾಗ ಜೀವಿಗೆ ಮಿಶ್ರಪರಿಣಾಮವುಂಟಾಗುವುದು. ಆಗಿನ ಪರಿಣಾಮಕ್ಕೆ ಸಮ್ಯಕ್ತ್ವವೆಂದೂ

---

೧. ಮಿರ್ಜಿ ಅಣ್ಣಾರಾಯರು, ಜೈ. ಧ., ಪು. ೩೬೭.

೨. Mohaniya, which is of two kinds:

(i) darsana-mohaniya, which stands in the way of the adoption of the right-faith, and

(ii) charitra-mohaniya, which prevents one from following the right path (religion) in practice—Sri C. R. Jain, '*The Householders Dharma*', Introduction, page XXXVIII.

ಹೇಳುವುದಕ್ಕಾಗದು. ಅಂತೆ ಮಿಥ್ಯಾತ್ಮವೆಂದೂ ಹೇಳುವುದಕ್ಕೆ ಬಾರದು.[೧] (೩) **ಸಮ್ಯಕ್ತ್ವ ಪ್ರಕೃತಿ** [ಈ ಕರ್ಮ ಉದಯಿಸಿದಾಗ ಜೀವಿಯ ಸಮ್ಯಕ್ತ್ವ ಮೂಲೋತ್ಪಾಟನವಾಗದಿದ್ದರೂ ಅದರಲ್ಲಿ ಚಲಮಲಾದಿ ದೋಷಗಳು ಕಾಣಿಸಿಕೊಳ್ಳುವುವು.] ಈ ರೀತಿ ದರ್ಶನ ಮೋಹನೀಯ ಕರ್ಮದಲ್ಲಿ ಮೂರು ಪ್ರಭೇದಗಳಿವೆ.

ಚಾರಿತ್ರಮೋಹನೀಯ: ಇದರಲ್ಲಿ ೨೫ ಪ್ರಭೇದಗಳಿವೆ. ಅನಂತಾನುಬಂಧಿ ಕ್ರೋಧ ಮಾನಮಾಯಾಲೋಭ[೨], ಅಪ್ರತ್ಯಾಖ್ಯಾನಾವರಣ ಕ್ರೋಧ ಮಾನಮಾಯಾಲೋಭ[೩], ಪ್ರತ್ಯಾಖ್ಯಾನ ಕ್ರೋಧಮಾನ ಮಾಯಾಲೋಭ[೪], ಸಂಜ್ವಲನ ಕ್ರೋಧಮಾನ ಮಾಯಾಲೋಭ[೫] —ಈ ಹದಿನಾರು ಕರ್ಮಗಳಿಗೆ ಕಷಾಯವೆನ್ನುವರು. (೪ × ೪ = ೧೬)

ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುಂವೇದ, ನಪುಂಸಕವೇದ—ಈ ಒಂಭತ್ತು ಭೇದಗಳಿಗೆ **ನೋಕಷಾಯ**(ಕಿಂಚಿತ್ ಕಷಾಯ)ವೆನ್ನುವರು. ಹದಿನಾರು ಕಷಾಯಗಳೂ ಒಂಭತ್ತು ನೋಕಷಾಯಗಳೂ ಸೇರಿ **'ಚಾರಿತ್ರಮೋಹನೀಯ'**ವೆನಿಸುವುದು.

(೫) **ಆಯುಕರ್ಮ**[೬]—ಆತ್ಮವನ್ನು ದೇಹಪಂಜರದಲ್ಲಿ ಸಂದರ್ಭೋಚಿತವಾಗಿ ಬಂಧಿಸುವ ಕರ್ಮಕ್ಕೆ ಆಯುಕರ್ಮವೆನ್ನುವರು. ಇದರಲ್ಲಿ ನರಕಾಯುಷ್ಯ, ತಿರ್ಯಗಾಯುಷ್ಯ, ಮನುಷ್ಯಾಯುಷ್ಯ, ದೇವಾಯುಷ್ಯವೆಂದು ನಾಲ್ಕು ಬಗೆ.

(೬) **ನಾಮಕರ್ಮ**[೭]—ಆತ್ಮನಿಗೆ ನಾನಾ ಪ್ರಕಾರವಾದ ಶರೀರ, ಅವಯವ, ರೂಪಗಳನ್ನುಂಟುಮಾಡುವ ಕರ್ಮಕ್ಕೆ ನಾಮಕರ್ಮವೆನ್ನುವರು. ಇದರಲ್ಲಿ ೯೩ ಪ್ರಭೇದಗಳಿವೆ.[೮]

---

೧. ಯಥಾರ್ಥವಾದ ದೇವ, ಗುರು, ಶಾಸ್ತ್ರ ಇವನ್ನು ಅಂದರೆ ಸತ್ಯಸ್ವರೂಪವನ್ನು ನಂಬಿ ಬಾಳುವುದಕ್ಕೆ 'ಸಮ್ಯಕ್ತ್ವ'ವೆನ್ನುವರು. ಇದಕ್ಕೆ ವಿಪರೀತವಾದ ಮನೋಭಾವಕ್ಕೆ 'ಮಿಥ್ಯಾತ್ವ'ವೆನ್ನುವರು.

೨. ಕ್ರೋಧ, ಮಾನ, ಮಾಯಾ, ಲೋಭ ಇವುಗಳಿಂದ ಆತ್ಮನ ಸಮ್ಯಗ್ದರ್ಶನವು ಮಲಿನವಾಗುವಂಥ ಕರ್ಮವು ಅನಂತಾನುಬಂಧಿ ಕರ್ಮವಾಗಿದೆ.

೩. ಶ್ರಾವಕರ ಹನ್ನೆರಡು ವ್ರತಗಳ ಪಾಲನೆಗೆ ಅಡಚಣೆಯಾಗಿ ನಿಂತು ಆತ್ಮದ ದೇಶಚಾರಿತ್ರವನ್ನು ನಾಶಗೊಳಿಸುವ ಕಷಾಯಕ್ಕೆ 'ಅಪ್ರತ್ಯಾಖ್ಯಾನಾವರಣ'ವೆನ್ನುವರು.

೪. ಮುನಿವ್ರತದ ಪಾಲನೆಗೆ ಅಡಚಣೆಯೊಡ್ಡುವ ಕಷಾಯಕ್ಕೆ ಪ್ರತ್ಯಾಖ್ಯಾನಾವರಣ ಕರ್ಮವೆನ್ನುವರು.

೫. ಚಾರಿತ್ರ್ಯಪೂರ್ಣಗೊಳ್ಳಲು ಬಿಡದ ಕಷಾಯಕ್ಕೆ 'ಸಂಜ್ವಲನ'ವೆನ್ನುವರು.

೬. Ayuh, the force which determines the duration of the association of the soul with its physical body—Sri C. R. Jain, H. H. D. I., P. XXXIX.

೭. Nama, or the group of forces which organize the body and its limbs—Ibid.

೮. **ಗತಿ ನಾಲ್ಕು**—ನರಕ, ತಿರ್ಯಂಚ, ಮನುಷ್ಯ, ದೇವ; **ಜಾತಿ ಐದು**—ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ; **ಶರೀರ ಐದು**—ಔದಾರಿಕ, ವೈಕ್ರಿಯಕ, ಆಹಾರಕ, ತೈಜಸ, ಕಾರ್ಮಣ; **ಅಂಗೋಪಾಂಗ ಮೂರು**—ಔದಾರಿಕ, ವೈಕ್ರಿಯಕ, ಆಹಾರಕ (ಒಟ್ಟು ೪+೫+೫+೩=೧೭); **ನಿರ್ಮಾಣಕರ್ಮ**—ಅಂಗೋಪಾಂಗ ರಚನೆ ಮಾಡುವುದು; **ಬಂಧನಕರ್ಮ ಐದು**—ಔದಾರಿಕ, ವೈಕ್ರಿಯಕ, ಆಹಾರಕ, ತೈಜಸ, ಕಾರ್ಮಣ ಇವು ಶರೀರ ಪರಮಾಣುವನ್ನು ಹೊಂದಿಸುವುವು; **ಸಂಘಾತಕರ್ಮ ಐದು**—ಔದಾರಿಕಾದಿ ಕಾರ್ಮಣ, ಇವು ಶರೀರವನ್ನು ಛಿದ್ರರಹಿತ ಮಾಡುವುವು; **ಸಂಸ್ಥಾನಕರ್ಮ ಆರು**—ಸಮಚತುರಸ್ರ, ನ್ಯಗ್ರೋಧಪರಿಮಂಡಲ, ಸ್ವಾತಿ, ಕುಬ್ಜಕ, ವಾಮನ ಹುಂಡಕ ಇವು ದೇಹದ ಗಾತ್ರ, ಆಕಾರ, ಎತ್ತರ ಇವನ್ನು ನಿರ್ಧರಿಸುವುವು; **ಸಂಹನನ ಆರು**—ವಜ್ರವೃಷಭನಾರಾಚ, ನಾರಾಚ, ಅರ್ಧನಾರಾಚ, ಕೀಲಕ, ಅಸಂಪ್ರಾಪ್ತಾಸೃಪಾಟಿಕಾ ಇವು ಎಲುಬುಗಳ ಬಂಧನಕಾರ್ಯವನ್ನು ನೆರವೇರಿಸುವುವು. (ಒಟ್ಟು ೧೭+೧+೫+೫+೬+೬=೪೦); **ಸ್ಪರ್ಶ ಎಂಟು**—ಕಠೋರ, ಕೋಮಲ, ಹಗುರ, ಭಾರ, ತಣ್ಣಗೆ, ಬೆಚ್ಚಗೆ, ಸ್ನಿಗ್ಧ, ರೂಕ್ಷ; **ವರ್ಣ ಐದು**—ಕಪ್ಪು, ನೀಲ, ಕೆಂಪು, ಹಳದಿ, ಬಿಳಿಪು; **ರಸಕರ್ಮ ಐದು**—ಹುಳಿ, ಉಪ್ಪು ಸಿಹಿ, ಕಾರ, ಕಹಿ; **ಅನುಪೂರ್ವ್ಯ ನಾಲ್ಕು**—ನರಕ, ತಿರ್ಯಂಚ, ಮನುಷ್ಯ, ದೇವ (ಒಟ್ಟು ೪೦+೮+೫+೬+೪=೬೩); ಅಗುರುಲಘು, ಉಪಘಾತ; ಪರಘಾತ; ಆತಪ; ಉದ್ಯೋತ; **ವಿಹಾಯೋಗತಿ ಎರಡು**—ಮನೋಜ್ಞ, ಅಮನೋಜ್ಞ; ಉಚ್ಛ್ವಾಸ; ತ್ರಸ; ಸ್ಥಾವರ; ಬಾದರ; ಸೂಕ್ಷ್ಮ;ಪರ್ಯಾಪ್ತ; ಅಪರ್ಯಾಪ್ತ; ಪ್ರತ್ಯೇಕ; ಸಾಧಾರಣ; ಸ್ಥಿರ; ಅಸ್ಥಿರ; ಶುಭ; ಅಶುಭ; ಸುಭಗ; ಅಶುಭಗ (ಶರ್ಭಗ); ಸುಸ್ವರ; ದುಃಸ್ವರ; ಆದೇಯ; ಯಶಃಕೀರ್ತಿ; ಅಯಶಃಕೀರ್ತಿ; ತೀರ್ಥಂಕರ; **ಗಂಧ ಎರಡು**—ಸುಗಂಧ, ದುರ್ಗಂಧ (ಒಟ್ಟು ೬೩+೩೦=೯೩); ಇಲ್ಲಿಯ ಪ್ರತಿಯೊಂದು ಕರ್ಮದ ಮುಂದೆಯೂ 'ನಾಮಕರ್ಮ' ಎಂದು ಸೇರಿಸಿಕೊಳ್ಳಬೇಕು. ಆನುಪೂರ್ವಿನಾಮಕರ್ಮವೆಂದರೆ ಮರಣಾನಂತರ ಹಾಗೂ ಪುನರ್ಭವಕ್ಕೆ ಮೊದಲು ಅಂದರೆ ವಿಗ್ರಹಗತಿಯಲ್ಲಿ, ಮರಣಕ್ಕಿಂತ ಮುಂಚೆ ಇದ್ದ ಶರೀರಾಕಾರದ ಆತ್ಮಪ್ರದೇಶವನ್ನು ಉಳಿಸುವ ಕರ್ಮ. **ವಿಹಾಯೋಗತಿನಾಮ ಕರ್ಮ:**—ಈ ಕರ್ಮೋದಯದಿಂದ ಆಕಾಶದಲ್ಲಿ ಸಂಚರಿಸುವ ಶಕ್ತಿಯುಂಟಾಗುವುದು. **ತೀರ್ಥಂಕರನಾಮ ಕರ್ಮ:**—ಈ ಕರ್ಮದಿಂದ ಜೀವಿಗೆ ಅರ್ಹಂತ ಪದವಿ ಪ್ರಾಪ್ತಿಯಾಗುವುದು.

(೭) **ಗೋತ್ರ**[೧]—ಈ ಕರ್ಮದಿಂದ ಅನೂಚಾನವಾಗಿ ನಡೆದುಬಂದ ಆಚರಣಸ್ವರೂಪಿ ಉಚ್ಚ ಅಥವಾ ನೀಚ ಗೋತ್ರದಲ್ಲಿ (ವಂಶ) ಜನನವಾಗುವುದು. ಇದರಲ್ಲಿ ಉಚ್ಚ ಮತ್ತು ನೀಚ ಗೋತ್ರಗಳೆಂದು ಎರಡು ಬಗೆ.

(೮) **ಅಂತರಾಯಕರ್ಮ**[೨]—ಈ ಕರ್ಮವು ದಾನಾದಿ ಕಾರ್ಯಗಳಲ್ಲಿ ವಿಘ್ನವನ್ನು ತಂದೊಡ್ಡುವುದು. ಇದರಲ್ಲಿ ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ, ವೀರ್ಯಾಂತರಾಯವೆಂದು ಐದು ಬಗೆಯಾಗಿದೆ. ಸಂದರ್ಭೋಚಿತವಾಗಿ ಈ ಕರ್ಮಗಳು ಅಂತರಾಯವಾಗಿ ನಿಲ್ಲುವುವು. **ಜ್ಞಾನಾವರಣಾದಿ ಕರ್ಮಗಳು ಒಟ್ಟು ೧೪೮ ಉತ್ತರ ಪ್ರಕೃತಿ ಗಳಾಗಿವೆ.**[೩]

ಘಾತಿಕರ್ಮ[೪]

ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ ಕರ್ಮಗಳನ್ನು ಘಾತಿಚತುಷ್ಟಯವೆನ್ನುವರು. ಇವು ಜೀವಿಯ ಸಮ್ಯಕ್ತ್ವ, ಚಾರಿತ್ರ್ಯ, ಸುಖ, ಚೈತನ್ಯ, ಮುಂತಾದ ಅನುಜೀವೀ ಗುಣಗಳನ್ನು (ಭಾವಸ್ವರೂಪೀಗುಣ) ಘಾತಿಸುತ್ತಿವೆ. ಈ ನಾಲ್ಕು

---

೧. Gotra, which attracts the soul into a new 'womb' upon which depends the gotra (family or lineage) of the individual. H. H. D, I, P. XXXIX.

೨. Antaraya, which prevents effectiveness and interferes with energy in general. Ibid.

೩. ಜ್ಞಾನಾವರ್ಣೀಯ ಐದು, ದರ್ಶನಾವರ್ಣೀಯ ಒಂಭತ್ತು, ವೇದನೀಯ ಎರಡು, ಮೋಹನೀಯ ಇಪ್ಪತ್ತೆಂಟು, ಆಯುಷ್ಯ ನಾಲ್ಕು, ನಾಮ ತೊಂಬತ್ತಮೂರು, ಗೋತ್ರ ಎರಡು, ಅಂತರಾಯ ಐದು ಈ ರೀತಿ ಒಟ್ಟು ಕರ್ಮಪ್ರಕೃತಿಗಳು ೧೪೮ (೫+೯+೨+೨೮+೪+೯೩+೨+೫=೧೪೮)

೪. Of these, the first, second, fourth and eighth kinds of forces are called 'ghatiya' (destructive) because they stand in the way of the soul and prevent it from acquiring the perfection of Gods which it is hankering after. Ibid, I, P. ೪೧.

ಕರ್ಮಗಳೆನ್ನೂ ಗೆದ್ದರೆ ಜೀವ, ಜಿನನಾಗುವುದು. ಮತ್ತೆ ಅದಕ್ಕೆ ಸಂಸಾರದ ಭಯವಿರುವುದಿಲ್ಲ.

ಅಘಾತಿಕರ್ಮ

ವೇದನೀಯ, ಆಯು, ನಾಮ, ಗೋತ್ರ ಈ ನಾಲ್ಕು ಕರ್ಮಗಳನ್ನು ಅಘಾತಿ ಕರ್ಮಗಳೆನ್ನುವರು. ಇವು ಜೀವಿಯ ಜ್ಞಾನಾದಿ ಅನುಜೀವೀಗುಣಗಳನ್ನು ಘಾತಿಸುವುದಿಲ್ಲ. ಜಿನೇಂದ್ರ ಭಗವಾನನಿಗೂ ಈ ನಾಲ್ಕು ಕರ್ಮಗಳು ಇದ್ದೇ ಇರುತ್ತವೆ. ಸಿದ್ಧನಾಗುವಾಗ ಇವು ಹೊರಟು ಹೋಗುತ್ತವೆ.

ಬಂಧತತ್ತ್ವ[೧]

ಜ್ಞಾನಾವರಣಾದಿ ಕರ್ಮಪುದ್ಗಲಗಳು ಮತ್ತು ಆತ್ಮಪ್ರದೇಶಗಳು ಹಾಲು ನೀರು ಬೆರೆತಂತೆ ಅನ್ಯೋನ್ಯವಾಗಿ ಬೆರೆಯುವುದಕ್ಕೆ 'ದ್ರವ್ಯಬಂಧ'ವೆನ್ನುವರು. ದ್ರವ್ಯಬಂಧವಾಗುವುದಕ್ಕೆ ಕಾರಣವಾದ ಮಿಥ್ಯಾತ್ವ ರಾಗಾದಿರೂಪವಾದ ಅಶುದ್ಧ ಚೈತನ್ಯಭಾವಕ್ಕೆ ಭಾವಬಂಧವೆನ್ನುವರು.

ಜ್ಞಾನಾವರಣಾದಿ ಅಷ್ಟಕರ್ಮಗಳ ಸ್ವಭಾವ ಆತ್ಮನೊಡನೆ ಬಂಧವಾಗುವುದಕ್ಕೆ 'ಪ್ರಕೃತಿ ಬಂಧ'ವೆನ್ನುವರು. ಈ ಬಂಧವಾದಾಗ ಕರ್ಮಕ್ಕೆ ಆತ್ಮಘಾತ ಮಾಡುವ ಶಕ್ತಿ ಲಭಿಸುವುದು.

ಎಲ್ಲಿಯತನಕ ಕರ್ಮವು ಆತ್ಮನಲ್ಲಿ ತಂಗಿರುವುದೋ ಆ ಅವಧಿಗೆ 'ಸ್ಥಿತಿಬಂಧ'ವೆನ್ನುವರು. ಉದಾಹರಣೆಗೆ ಮೋಹನೀಯಕರ್ಮ ಅತಿ ಹೆಚ್ಚೆಂದರೆ ಎಪ್ಪತ್ತು ಕೋಟಾಕೋಟಿ ಸಾಗರದತನಕ, ಅತಿಕಡಿಮೆಯೆಂದರೆ ಒಂದೇ ಅಂತರ್ಮುಹೂರ್ತಕಾಲ[೨] ಆತ್ಮನಲ್ಲಿ ತಂಗಿರಬಹುದು.

ಕರ್ಮಗಳ ಫಲದಾಯಕ ಶಕ್ತಿಯ ಏರುಪೇರಿಗೆ 'ಅನುಭಾಗಬಂಧ'ವೆನ್ನುವರು. ಆತ್ಮನಲ್ಲಿ ತಂಗಿದ ಕರ್ಮಗಳ ಸಂಖ್ಯೆಯನ್ನು ನಿರ್ಣಯ ಮಾಡುವುದೇ 'ಪ್ರದೇಶಬಂಧ'ವಾಗಿದೆ.

ಮನೋವಾಕ್ಕಾಯ ವ್ಯಾಪಾರರೂಪವಾದ ಯೋಗವೇ ಪ್ರಕೃತಿಬಂಧ ಮತ್ತು ಪ್ರದೇಶ ಬಂಧಕ್ಕೆ ಕಾರಣವಾಗಿದೆ (ಆತ್ಮಪ್ರದೇಶಗಳ ಚಲನೆಗೆ 'ಯೋಗ'ವೆಂದು ಹೆಸರು). ಕಷಾಯಗಳು ಸ್ಥಿತಿಬಂಧಕ್ಕೂ ಅನುಭಾಗಬಂಧಕ್ಕೂ ಕಾರಣವಾಗಿವೆ. ಕಷಾಯಭಾವಗಳಲ್ಲಿ (ಆತ್ಮನ ಅಶುದ್ಧ ಭಾವಗಳಲ್ಲಿ) ಹೆಚ್ಚುಕಡಿಮೆಯಾದಂತೆ ಸ್ಥಿತಿ ಮತ್ತು ಅನುಭಾಗಬಂಧಗಳಲ್ಲೂ ಹೆಚ್ಚುಕಡಿಮೆಯಾಗುವುದು.

---

೧. So the combination of soul with matter produces energies (Karma) the totality of which together with the soul constitutes the man or other mundane living being. These energies can be considered with regard to their nature **(Prakriti)**, their duration or how long they will stay with the soul (sthiti) their intensity **(anubhaga)**, and their mass **(Pradesha)**. '*JAINISM*' by Herbert Warreb, Page 27.

೨. ಎರಡು ಘಳಿಗೆಗೆ ಒಂದು ಮುಹೂರ್ತ. ಒಂದು ಘಳಿಗೆ = ೪೮ ನಿಮಿಷ. ಮುಹೂರ್ತಕ್ಕೆ ಒಂದು ಸಮಯ ಕಡಮೆಯಾದರೂ ಅಂತರ್ಮುಹೂರ್ತವಾಗುವುದು. ಒಂದು ಪುದ್ಗಲ ಪರಮಾಣು ಒಂದು ಆಕಾಶ ಪ್ರದೇಶದಿಂದ ಇನ್ನೊಂದು ಆಕಾಶ ಪ್ರದೇಶಕ್ಕೆ ಮಂದಗತಿಯಿಂದ ಚಲಿಸಲು ತೆಗೆದುಕೊಳ್ಳುವ ಕಾಲಪ್ರಮಾಣಕ್ಕೆ 'ಸಮಯ'ವೆನ್ನುವರು.

೫. ಸಂವರತತ್ತ್ವ[೧]

ಆತ್ಮದಲ್ಲಿ ತಂಗಲು ಬರುವ ಕರ್ಮ ಪುದ್ಗಲವನ್ನು ತಡೆಯುವುದಕ್ಕೆ 'ಸಂವರ'ವೆಂದು ಹೆಸರು. ಕರ್ಮ ಪುದ್ಗಲಗಳು ಆತ್ಮನೆಡೆ ಎಂದೂ ತಾವಾಗೆ ಬರುವುದಿಲ್ಲ; ಆತ್ಮ ಕರೆದಾಗ ಮಾತ್ರ ಅವು ಬರುತ್ತವೆ[೨] ಕರ್ಮವನ್ನು ಕೈಬೀಸಿ ಕರೆವ ಆತ್ಮನ ರಾಗದ್ವೇಷಾದಿವಿಕಲ್ಪ ಪರಿಣಾಮವನ್ನು ತೊರೆಯುವುದೇ ನಿಜವಾದ ಸಂವರ. ಅದರಿಂದ ಶುದ್ಧ ಚೈತನ್ಯಭಾವಕ್ಕೆ 'ಭಾವಸಂವರ'ವೆನ್ನುವರು. ಭಾವಸಂವರದಿಂದ ತಡೆಯಾಗಿ ಹೊರಗೇ ನಿಲ್ಲುವ ಕರ್ಮಪುದ್ಗಲ ರಾಶಿಗೆ 'ದ್ರವ್ಯಸಂವರ'ವೆನ್ನುವರು. ಭಾವಸಂವರದಿಂದ ದ್ರವ್ಯಸಂವರ ಕೈಗೂಡುವುದು. ಭಾವಸಂವರವೆಂಬುದು ಮಿಥ್ಯಾತ್ವರಾಗಾದಿ ಪರ್ಯಾಯಗಳಂತೆ ಅಶುದ್ಧವೂ ಅಲ್ಲ, ಕೇವಲಜ್ಞಾನದಂತೆ ಪರಮ ಪರಿಶುದ್ಧವೂ ಅಲ್ಲ. ಶುದ್ಧಾಶುದ್ಧ ಪರಿಣಾಮಗಳಿಂದ ಬೇರೆಯಾದ ಭಾವಸಂವರವು ಶುದ್ಧಾತ್ಮಾನುಭವರೂಪವಾದ ರತ್ನತ್ರಯವಾಗಿ ಮೋಕ್ಷಕ್ಕೆ ಕಾರಣವಾಗಿರುವ ಮೂರನೇ ಅವಸ್ಥೆಯಾಗಿದೆ.

ಮೊದಲು ಕರ್ಮಗಳು ಬರುವ ರೀತಿಯನ್ನು ಅರಿತುಕೊಂಡು ಅನಂತರ ಅವನ್ನು ತಡೆಯುವುದಕ್ಕೆ ಪ್ರಯತ್ನಿಸಬೇಕು. ಆಸ್ರವವನ್ನು ಚೆನ್ನಾಗಿ ಗ್ರಹಿಸಿದಾತ ಸಂವರವನ್ನು ಸಾಧಿಸಬಲ್ಲ. ಆಸ್ರವದ ಮಾರ್ಗಗಳನ್ನು ಮುಚ್ಚಿ ಹಾಕಿದರೆ ಅದೇ ಸಂವರವಾಗುವುದು. ಸನ್ನಾಹವೆಸಗುತ್ತಿರುವ ಕರ್ಮಪುದ್ಗಲಗಳನ್ನು ತಡೆಹಿಡಿಯುವುದಕ್ಕಾಗಿ ಜೈನಾಚಾರ್ಯರು ಕ್ರಮಬದ್ಧವಾದ ಯೋಜನೆ ಹಾಕಿರುವರು. ಈ ಯೋಜನೆಯನ್ನು ಅನುಸರಿಸುವಾಗ ಸಂವರದ ಜೊತೆಯಾಗಿ ತಕ್ಕಮಟ್ಟಿಗೆ ನಿರ್ಜರೆಯೂ ಆಗುವುದು (೧) ಅಣುವ್ರತಗಳು, (೨) ಏಕಾದಶ ಪ್ರತಿಮೆಗಳು (ಏಕಾದಶ ನಿಲಯಗಳು) (೩) ದ್ವಾದಶಾನುಪ್ರೇಕ್ಷೆಗಳು, (೪) ಷೋಡಶಭಾವನೆಗಳು. ಇವು ಶ್ರಾವಕರ ಯೋಜನೆಯಾಗಿದೆ.

(೧) ಅಣುವ್ರತಗಳು:——(ಅ) ಅಹಿಂಸಾಣುವ್ರತ: ತನ್ನ ಉಳಿವಿಗಾಗಿ ಅನ್ಯಜೀವಿಗಳಿಗೆ ತೊಂದರೆ ಕೊಡದಂತೆ ಬಾಳುವುದಕ್ಕೆ ಅಹಿಂಸಾಣುವ್ರತವೆನ್ನುವರು. ಹಿಂಸೆಯಲ್ಲಿ ಸಂಕಲ್ಪೀ ಹಿಂಸೆ, ಆರಂಭೀ ಹಿಂಸೆ, ಉದ್ಯೋಗೀ ಹಿಂಸೆ, ಮತ್ತು ವಿರೋಧೀ ಹಿಂಸೆಯೆಂದು ನಾಲ್ಕು ತೆರನಾಗಿದೆ. ಗೃಹಸ್ಥ ಸಂಕಲ್ಪೀ ಹಿಂಸೆಯೊಂದನ್ನು ಸಂಪೂರ್ಣವಾಗಿ ತೊರೆದು ಉಳಿದ ಹಿಂಸೆಗಳನ್ನು ಕ್ರಮಕ್ರಮವಾಗಿ ತೊರೆಯುತ್ತಾ ಬರಬೇಕು.

---

೧. ಆಸ್ರವ ನಿರೋಧಃ ಸಂವರಃ:-ತತ್ತ್ವಾರ್ಥಸೂತ್ರ, ೯-೧.

೨. It would follow from this that they (KARMA) do not combine with spirit, except when they find the door open and the chambermaid of the soul waiting to take them into the presence of her mistress. This maid-in-waiting is nothing other than attention which opens the door to the incoming stimulus. But attention always implies interest, whether it indicate the merest wish to know or the most passionate longing to embrace. It would follow from this that the fusion of spirit and matter cannot take place unless the soul be first thrown into an attitude of desire, which signifies its inability to resist the advance of the intruders who readily combine with it. The companionship of spirit and matter, then, depends on the sweet will of the soul, and might be avoided if it so desire, H. H. D., I, p. xliii.

(ಆ) **ಸತ್ಯಾಣುವ್ರತ:** ಅಂಹಿಸಾಣುವ್ರತಕ್ಕೆ ಪೋಷಕವಾಗಿ ಸತ್ಯಾಣುವ್ರತವನ್ನು ಆಚರಿಸಬೇಕು. ಪರಪೀಡನೆಗೆ ಕಾರಣವಾಗಬಹುದಾದ ಸತ್ಯವನ್ನೂ ಹೇಳಬಾರದು.

(ಇ) **ಅಚೌರ್ಯಾಣುವ್ರತ:** ಅನ್ಯರ ವಸ್ತುವನ್ನು ತಾನೂ ಅಪಹರಿಸಬಾರದು ಅಂತೆ ಅಪಹರಿಸುವವರಿಗೆ ಹಿಂದೆ ನಿಂತು ಪ್ರೋತ್ಸಾಹವನ್ನೂ ಕೊಡಬಾರದು. ಪರಿಗ್ರಹ ಬುದ್ಧಿಯಿಂದ (ದುರಾಸೆಯಿಂದ) ಅಳತೆ ತೂಕದಲ್ಲಿ ಕೈವಾಡ ನಡೆಸುವುದೂ, ಪದಾರ್ಥಗಳನ್ನು ಲಾಭದ ದೃಷ್ಟಿಯಿಂದ ಒಂದರೊಡನೊಂದು ಬೆರಸುವುದೂ (ಹಾಲಿಗೆ ನೀರು, ತುಪ್ಪಕ್ಕೆ ಎಣ್ಣೆ, ಉತ್ತಮ ದರ್ಜೆಗೆ ಕಡಿಮೆ ದರ್ಜೆ ದಿನಸು ಬೆರಸುವುದು) ಕಳ್ಳತನ ಮಾಡಿದಂತೆಯೇ! ಅಚೌರ್ಯಾಣುವ್ರತಕ್ಕೆ ಆಸ್ತೇಯವೆಂಬ ಹೆಸರೂ ಉಂಟು.

(ಈ) ಬ್ರಹ್ಮಚರ್ಯಾಣುವ್ರತ: ವಿಷಯಲಂಪಟತನದಿಂದ ತನಗೂ ಅನ್ಯರಿಗೂ ಆಗಬಹುದಾದ ಹಿಂಸೆಯನ್ನೂ ಅವಾಂತರವನ್ನೂ ತಡೆಯುವುದಕ್ಕಾಗಿ ಈ ವ್ರತವಿದೆ. ದಂಪತಿಗಳು ಮಿತವಾಗಿ ಕಾಮ ವ್ಯಾಪಾರವನ್ನು ನಡೆಸಿದರೂ ಬ್ರಹ್ಮಚರ್ಯವನ್ನು ಪಾಲಿಸಿದಂತಾಗುವುದು. ಪರಸ್ತ್ರೀಯ ಬಯಕೆ ಹಾಗೂ ಗಮನ ಅಂತೆ ಪರಪುರಷನ ಬಯಕೆ ಹಾಗೂ ಗಮನ ಇವು ಬ್ರಹ್ಮಚರ್ಯಕ್ಕೆ ಕುಂದು ತರುವುವು.

(ಉ) ಪರಿಗ್ರಹ ಪರಿಮಾಣುವ್ರತ (ಅಪರಿಗ್ರಹಾಣುವ್ರತ): ದುರಾಸೆಯನ್ನು ತೊರೆವುದೇ ನಿಜವಾದ 'ಅಪರಿಗ್ರಹ'ವಾಗಿದೆ. ಗೃಹಸ್ಥ ಅತ್ಯಾವಶ್ಯಕವಾದಷ್ಟು ಆಸ್ತಿ ಅಡವನ್ನು ಮಾತ್ರ ಮಾಡಿದಾಗ ಅವನೂ ಅಪರಿಗ್ರಹಿಯಾಗುವನು. ಶ್ರೀಮಂತನಾಗಿದ್ದು ತನ್ನ ಐಶ್ವರ್ಯದ ಮೇಲೆ ಮೋಹವಿಟ್ಟುಕೊಳ್ಳದಿದ್ದರೂ ಆಗ ಅವನು ಅಪರಿಗ್ರಹಿಯೆನಿಸುವನು. ಲೋಕದ ಜಂಜಾಟಕ್ಕೆ ಪರಿಗ್ರಹವೇ ಅಡಿಪಾಯವಾಗಿದೆ!

ಮೇಲೆ ಹೇಳಿದ ಪಂಚವ್ರತಗಳನ್ನು ಅತ್ಯಂತ ವ್ಯಾಪಕವಾಗಿ, ಸೂಕ್ಷ್ಮವಾಗಿ ಮಹರ್ಷಿಗಳು ಪಾಲಿಸುವಾಗ ಅಣುವ್ರತಗಳು ಮಹಾವ್ರತಗಳಾಗುವುವು.

(೨) ಏಕಾದಶ ಪ್ರತಿಮೆಗಳು (ನಿಲಯಗಳು)—ಇವು ಪಂಚಾಣುವ್ರತಗಳನ್ನು ಪಾಲಿಸಿಕೊಂಡು ಆತ್ಮೋನ್ನತಿಯನ್ನು ಸಾಧಿಸಲು ಕ್ರಮವಾಗಿ ಮೇಲೇರುವ ಶ್ರಾವಕಸಾಧಕನ ನಾನಾ ನಿಲ್ದಾಣಗಳಾಗಿವೆ.

(ಅ) **ದಾರ್ಶನಿಕ:** ಸಮ್ಯಗ್ದೃಷ್ಟಿಯಾಗಿದ್ದು ಜೈನತತ್ವಗಳಲ್ಲಿ ಶ್ರದ್ಧೆಯಿಟ್ಟು ಇದ್ದುದರಲ್ಲಿ ತೃಪ್ತನಾಗಿರುವನು. ಭೋಗೋಪಭೋಗಗಳಲ್ಲಿ ಲಂಪಟನಾಗಿರುವುದಿಲ್ಲ. ಶುಭ ಪರಿಣಾಮದಲ್ಲಿ ಬಾಳುತ್ತಿರುತ್ತಾನೆ. ಎಂಥ ಸಂದರ್ಭದಲ್ಲೂ ಸಂಕಲ್ಪೀ ಹಿಂಸೆಗೆ ಭಾಗಿಯಾಗನು; ಮಧು, ಮಾಂಸ, ಮದ್ಯ ಇವನ್ನು ಎಂದೂ ಮುಟ್ಟುವುದಿಲ್ಲ.

(ಆ) **ವ್ರತಿಕ:** ಇವನು ಎಂಟು ಮೂಲಗುಣಗಳನ್ನೂ[೧] ಪಂಚಾಣುವ್ರತಗಳನ್ನೂ ದೋಷ

೧. **ಮೂಲಗುಣಗಳು:** (೧) ಮದ್ಯತ್ಯಾಗ, (೨) ಮಾಂಸತ್ಯಾಗ, (೩) ಮಧುತ್ಯಾಗ, (೪) ಉದುಂಬರಾದಿ ಪಂಚಫಲ ತ್ಯಾಗ, (೫) ರಾತ್ರಿ ಭೋಜನ ತ್ಯಾಗ, (೬) ಪಂಚಗುರು ಸ್ತೋತ್ರ, (೭) ಜೀವದಯಾ, (೮) ಜಲಗಾಲನ; ಅಥವ ಮಧು, ಮದ್ಯ, ಮಾಂಸ ತ್ಯಾಗ ಮತ್ತು ಅಣುವ್ರತ ಪರಿಪಾಲನೆ.

ರಹಿತವಾಗಿ ಪಾಲಿಸುವನು. ಸಾಧನೆಯಲ್ಲಿ ಮುಂದುವರಿಯಲು ಏಳು ಶೀಲಗಳನ್ನು[೧] ಕಾಪಾಡಿಕೊಳ್ಳುವನು.

(ಇ) **ಸಾಮಾಯಿಕಿ:** ಮೂರು ಸಂಜೆಗಳಲ್ಲೂ ಬಿಡದೆ ದೇವರ ಧ್ಯಾನವನ್ನು ಮಾಡುವವನಿಗೆ ಸಾಮಾಯಿಕಿ ಎನ್ನುವರು. ವ್ರತಿಕನ ಸಾಮಾಯಿಕ ಕೇವಲ ಅಭ್ಯಾಸವಾದರೆ ಇಲ್ಲಿ ಅದು ವ್ರತವಾಗಿದೆ. ಇದರಿಂದ ಮನೋದಾರ್ಢ್ಯ ವೃದ್ಧಿಯಾಗಿ ಸುಖದುಃಖಗಳನ್ನಿದಿರಿಸುವಂಥ ಭದ್ರ ಚೇತನ ಪ್ರಾಪ್ತಿಯಾಗುವುದು.

(ಈ) **ಪ್ರೋಷಧೋಪವಾಸಿ:** ಪರ್ವ ದಿನಗಳಂದು ಉಪವಾಸವನ್ನು ಆಚರಿಸುವವನನ್ನು ಪ್ರೋಷಧೋಪವಾಸಿಯೆನ್ನುವರು. ಇವನು ಆಹಾರಾದಿಗಳನ್ನು ತ್ಯಜಿಸುವುದು **'ಬಾಹ್ಯೋಪವಾಸ'**ವಾದರೆ ಅಂತರಂಗದ ರಾಗಾದಿಗಳನ್ನು ತಡೆಯುವುದು **'ಅಂತರಂಗದ ಉಪವಾಸ'**ವಾಗಿದೆ.

(ಉ) **ಸಚಿತ್ತವಿರತ:** ಹಸಿರು ಕಾಯಿಪಲ್ಯಗಳನ್ನು ಇಂಥವರು ತಿನ್ನುವುದಿಲ್ಲ. ವನಸ್ಪತಿಯಲ್ಲಿ ಲೆಕ್ಕವಿಲ್ಲದಷ್ಟು ಜೀವಿಗಳು ಆಶ್ರಯ ಪಡೆದಿರುತ್ತವೆ. ಅದರಿಂದ ಇದನ್ನು **'ಅನಂತಕಾಯ'**ವೆನ್ನುವರು. ಇಂಥ ಹಸಿರು ಕಾಯಿಪಲ್ಯವನ್ನು ತೊರೆಯುವುದರಿಂದ ಪ್ರಾಣಿಸಂಯಮ ಸಾಧಿಸಿದಂತಾಗುವುದು.[೨]

(ಊ) **ದಿವಾಮೈಥುನ ವಿರತ:** ಹಗಲಿನಲ್ಲಿ ಸ್ತ್ರೀ ಸಂಭೋಗ ತೊರೆದು ಅಂತೆ ಮನ ವಚನ ಗಳಿಂದಲೂ ಆ ಸುದ್ದಿಯನ್ನು ತೊಲಗಿಸಿದವನು 'ದಿವಾಮೈಥುನ ವಿರತ'ನಾಗುವನು.

(ಋ) **ಬ್ರಹ್ಮಚಾರಿ:** ಮನ ವಚನ ಕಾಯ ಪೂರ್ವಕ ಸ್ತ್ರೀಸಂಸರ್ಗವನ್ನು ತೊರೆದಾಗ 'ಬ್ರಹ್ಮಚಾರಿ'ಯಾಗುವನು.

(ೠ) **ಆರಂಭವಿರತ:** ತನ್ನ ಸಂತಾನ ಮನೆತನದ ಹೊಣೆಗಾರಿಕೆಯನ್ನು ಹೊರಲು ಸಿದ್ಧರಾದಾಗ ಶ್ರಾವಕ ಈ ವ್ರತವನ್ನು ಪಾಲಿಸಬೇಕು. ವ್ಯಾಪಾರ ವಹಿವಾಟಿನಲ್ಲಿ ಒಕ್ಕಲುತನದಲ್ಲಿ ತಾನು ಪ್ರವೇಶಿಸಬಾರದು. ಮಕ್ಕಳು ಸಲಹೆ ಕೇಳಿದಾಗ ಮಾತ್ರ ಸಲಹೆ ಕೊಡಬಹುದು.

(ಎ) **ಪರಿಗ್ರಹವಿರತ:** ಆರಂಭವಿರತಾವಸ್ಥೆಯಲ್ಲಿ ಶ್ರಾವಕ, ವಹಿವಾಟನ್ನು ತೊರೆದರೂ ಒಡೆತನವನ್ನು ತೊರೆದಿರುವುದಿಲ್ಲ. ಅದನ್ನೂ (ಒಡೆತನ) ತೊರೆದಾಗ ಪರಿಗ್ರಹವಿರತನೆನಿಸುವನು.

(ಏ) **ಅನುಮತಿ ವಿರತ:** ಇವನು ಮನೆಯ ವಹಿವಾಟಿನಲ್ಲಿ ತನ್ನ ಸಲಹೆಯನ್ನು ಕೊಡುವುದನ್ನೂ ನಿಲ್ಲಿಸಿ 'ಅನುಮತಿವಿರತ'ನಾಗುವನು. ಮನೆಗೂ ತನಗೂ ಯಾವ ಸಂಬಂಧವೂ

೧. **ಸಪ್ತಶೀಲಗಳು:** (೧) ದಿಗ್ವಿರತಿ, (೨) ದೇಶವಿರತಿ, (೩) ಅನರ್ಥ ದಂಡವಿರತಿ (ಈ ಮೂರಕ್ಕೂ ಗುಣವ್ರತವೆನ್ನುವರು), (೪) ಸಾಮಾಯಿಕ, (೫) ಪ್ರೋಷದೋಪವಾಸ, (೬) ಭೋಗೋಪಭೋಗಪರಿಮಿತಿ, (೭) ಅತಿಥಿ ಸಂವಿಭಾಗ (ಈ ನಾಲ್ಕು ಶಿಕ್ಷಾವ್ರತಗಳಾಗಿವೆ)

೨. ಹಸಿರು ಕಾಯಿಪಲ್ಯಕ್ಕೆ ಎರಡು ಅವಸ್ಥೆಯಿವೆ. (೧) ಸಪ್ರತಿಷ್ಠಿತ, (೨) ಅಪ್ರತಿಷ್ಠಿತ. ಸಪ್ರತಿಷ್ಠಾವಸ್ಥೆಯಲ್ಲಿ ವನಸ್ಪತಿಯಲ್ಲಿ ಬೇಕಾದಷ್ಟು ಜೀವಿಗಳು ನೆಲೆಸಿರುತ್ತವೆ. ಅಪ್ರತಿಷ್ಠಾವಸ್ಥೆಯಲ್ಲಿ ಅನ್ಯಜೀವಿಗಳು ತೊಲಗಿ ಕೇವಲ ಒಂದೇ ಜೀವ ಉಳಿದಿರುತ್ತದೆ. ಅದರಿಂದ ವನಸ್ಪತಿಯನ್ನು ಸಪ್ರತಿಷ್ಠಿತಾವಸ್ಥೆಯಲ್ಲಿ ತಿನ್ನಕೂಡದು. ಜೈ. ಧ. ೪೭೧.

ಇಲ್ಲದಂತೆ ಇದ್ದುಕೊಂಡು ಕೇವಲ ಆಹಾರಕ್ಕಾಗಿ ಅಲ್ಲಿಗೆ ಹೋಗಿ ಬರುತ್ತ ಬಸದಿಯಲ್ಲಿ ಕಾಲಯಾಪನೆ ಮಾಡುವನು.

(ಐ) **ಉದ್ದಿಷ್ಟ ವಿರತ:** ಅನುಮತಿವಿರತಾವಸ್ಥೆಯಲ್ಲಿ ತನ್ನ ಮಕ್ಕಳ ಮನೆಗೆ ಆಹಾರಕ್ಕಾಗಿ ಹೋಗುತ್ತಿರುತ್ತಾನೆ. ಉದ್ದಿಷ್ಟ ವಿರತಾವಸ್ಥೆಯಲ್ಲಿ ಅದನ್ನೂ ತೊರೆದು ಭಿಕ್ಷೆಯಿಂದ ಆಹಾರವನ್ನು ಪೂರೈಸಿಕೊಳ್ಳುವನು. ಇದೇ ಶ್ರಾವಕನ ಅಂತಿಮಾವಸ್ಥೆ. ಇದರಲ್ಲಿ ಲಂಗೋಟಿಯನ್ನೂ ಖಂಡವಸ್ತ್ರವನ್ನೂ ಧರಿಸುವವರಿಗೆ '**ಕ್ಷುಲ್ಲಕ**'ರೆನ್ನುವರು. ಕೇವಲ ಕೌಪೀನವೊಂದರಲ್ಲೇ ಇರುವವರನ್ನು '**ಐಲಕ**'ರೆನ್ನುವರು. ಇವರ ಬಾಳ್ವೆ, ಸಾಧು (ದಿಗಂಬರ ಮುನಿ) ಜೀವನಕ್ಕೆ ತೀರಾ ಹತ್ತಿರವಾದುದು.

(೩) **ದ್ವಾದಶಾನುಪ್ರೇಕ್ಷೆಗಳು:** ಶರೀರ ಮೊದಲ್ಗೊಂಡು ಸಕಲ ಪ್ರಪಂಚವೂ (ಸಂಸಾರ) ಆತ್ಮನಿಂದ ಬಾಹ್ಯವಾದ ಪುದ್ಗಲಪುಂಜದ ವೈಚಿತ್ರ್ಯವೆಂದುಕೊಂಡು ಮತ್ತೆ ಮತ್ತೆ ಆಲೋಚಿಸಿ ಇದರೊಡನೆ ಆತ್ಮೋದ್ಧಾರಕ್ಕೆ ಸಾಧಕವಾದ ಧರ್ಮವನ್ನು ತುಲನೆಮಾಡಿ ವೈರಾಗ್ಯಭಾವವನ್ನು ದೃಢಪಡಿಸಿಕೊಳ್ಳುವುದಕ್ಕೆ ಅನುಪ್ರೇಕ್ಷೆಗಳು ನೆರವಾಗುವುವು. ಇದು ಹನ್ನೆರಡು ಬಗೆಯಾಗಿದೆ. ಚಿಂತನೆಯೇ 'ಅನುಪ್ರೇಕ್ಷೆ'ಯೆನಿಸುವುದು.

(ಅ) **ಅನಿತ್ಯಾನುಪ್ರೇಕ್ಷೆ:** ಶರೀರೇಂದ್ರಿಯ ವಿಷಯಗಳೂ ಭೋಗೋಪಭೋಗಗಳೂ ಮಿಂಚಿನಂತೆ ಅಸ್ಥಿರವೆಂದು ಚಿಂತಿಸುವುದು.

(ಆ) ಜನ್ಮಜರಾಮರಣ ವ್ಯಾಧಿವ್ಯಸನ ಭರಿತವಾದ ಭವಸಾಗರದಿಂದ ತನ್ನನ್ನು ಉದ್ಧರಿಸಿ ಯಾರೂ ರಕ್ಷಿಸಲಾರರು. (ಅಂದರೆ ಬಂಧುಮಿತ್ರರು) ಧರ್ಮವೊಂದೇ ತನ್ನನ್ನು ರಕ್ಷಿಸುವಂಥದು ಎಂದು ಆಲೋಚಿಸುವುದಕ್ಕೆ '**ಅಶರಣಾನುಪ್ರೇಕ್ಷೆ**'ಯೆನ್ನುವರು.

(ಇ) ಸಂಸಾರದಲ್ಲಿ ಕರ್ಮಾಧೀನವಾಗಿ ಜೀವ ನಾನಾ ಭವವನ್ನೆತ್ತುತ್ತದೆಯೆಂದು ಚಿಂತಿಸಿದಾಗ '**ಸಂಸಾರಾನುಪ್ರೇಕ್ಷೆ**'ಯೆನಿಸುವುದು.

(ಈ) ತಾನು ಮಾಡಿದುದನ್ನು ತಾನೊಬ್ಬನೇ ಅನುಭವಿಸಬೇಕೇ ವಿನ ಇನ್ನಾರೂ ಪಾಲ್ಗೊಳ್ಳಲು ಬರಲಾರರೆಂದು ಯೋಚಿಸಿದಾಗ '**ಏಕತ್ವಾನುಪ್ರೇಕ್ಷೆ**'ಯಾಗುವುದು.

(ಉ) ಶರೀರಕ್ಕೂ ನನಗೂ ಸಂಬಂಧವಿಲ್ಲ, ನನ್ನವರೆಂದು ಇದುವರೆವಿಗೂ ತಿಳಿದುಕೊಂಡವರಲ್ಲಿ ಯಾರೊಬ್ಬರೂ ನನ್ನವರಲ್ಲವೆಂದು ಚಿಂತಿಸಿದರೆ '**ಅನ್ಯತ್ವಾನುಪ್ರೇಕ್ಷೆ**'ಯೆನಿಸುವುದು.

(ಊ) ಈ ದೇಹ ಶುಕ್ಲಶೋಣಿತಗಳಿಂದಾದುದು; ಇದು ಅತ್ಯಂತ ಕೊಳಕಾದುದು; ಎಂದು ಆಲೋಚಿಸಿದರೆ '**ಅಶುಚಿತ್ವಾನುಪ್ರೇಕ್ಷೆ**'ಯಾಗುವುದು.

(ಋ) ನಿರಂತರವಾಗಿ ಆತ್ಮಪ್ರದೇಶಕ್ಕೆ ಹರಿಯುತ್ತಿರುವ ಕರ್ಮ ಪುದ್ಗಲ ಪ್ರವಾಹದಿಂದ ನಾನು ಪಡಬಾರದ ಪಾಡನ್ನು ಪಡುತ್ತಿದ್ದೇನೆಂದು ಯೋಚಿಸಿದಾಗ '**ಆಸ್ರವಾನುಪ್ರೇಕ್ಷೆ**'ಯಾಗುವುದು.

(ೠ) ಕರ್ಮವನ್ನು ಕರೆದು ಹಸೆಮಣೆ ಹಾಕುತ್ತಿರುವ ಕಷಾಯಾದಿಗಳನ್ನು ನಿಗ್ರಹಿಸಿದರೆ ಆಸ್ರವ ಪ್ರವಾಹ ತಾನಾಗೆ ನಿಂತು ಹೋಗುವುದೆಂದು ಯೋಚಿಸಿದರೆ '**ಸಂವರಾನುಪ್ರೇಕ್ಷೆ**' ಯಾಗುವುದು.

(ಎ) ಇದುವರೆಗಾಗಲೆ ಆತ್ಮನಲ್ಲಿ ಸುಖ್ಯ ಬೆಳೆಸಿಕೊಂಡು ತಳವೂರಿರುವ ಕರ್ಮಪುದ್ಗಲವನ್ನು ಜಾಗಬಿಡಿಸುವ ಉಪಾಯವನ್ನು ಯೋಚಿಸುವುದಕ್ಕೆ '**ನಿರ್ಜರಾನುಪ್ರೇಕ್ಷೆ**'ಯೆನ್ನುವರು.

(ಏ) ಲೋಕಸ್ವರೂಪವನ್ನು ಚಿಂತಿಸುವುದಕ್ಕೆ '**ಲೋಕಾನುಪ್ರೇಕ್ಷೆ**'ಯೆಂದು ಹೆಸರು.

(ಐ) ಜೀವಿಗಳಲ್ಲಿ ಮಾನವಜನ್ಮ ದುರ್ಲಭವಾದುದು, ಮಾನವರಲ್ಲಿ ಸದ್ಧರ್ಮಪ್ರಾಪ್ತಿ ಇನ್ನೂ ದುರ್ಲಭವಾದುದು. ರತ್ನತ್ರಯ ರೂಪವಾದ ಬೋಧಿ(ಜ್ಞಾನ)ಯನ್ನು ಪಡೆಯುವುದು ಪರಮ ದುರ್ಲಭವೆಂದು ಚಿಂತಿಸುವುದಕ್ಕೆ '**ಬೋಧಿದುರ್ಲಭಾನುಪ್ರೇಕ್ಷೆ**'ಯೆಂದು ಹೆಸರು. ಮಾನವನಾಗಿ ಸಜ್ಜಾತಿಯಲ್ಲಿ ಜನಿಸಿ, ಸದ್ಗೃಹಸ್ಥನೆನಿಸಿ, ಯತಿಯಾಗಿ, ದೇವೇಂದ್ರನಾಗಿ ಮರಳಿ ಚಕ್ರವರ್ತಿಯಾಗಿ ಜನಿಸಿ, ಅನಂತರ ಅರಹಂತನಾಗಿ ನಿರ್ವಾಣಪಡೆಯುವುದು ಎಂಥ ಭಾಗ್ಯ! ಈ ಭಾಗ್ಯ ಸರ್ವೇಸಾಮಾನ್ಯವಾದುದೇ ಎಂದು ಚಿಂತಿಸಬೇಕು.[೧]

(ಒ) ಜಿನವಾಣಿಯಿಂದ ಲಭ್ಯವಾದ ಜಿನಧರ್ಮ ದಶಮುಖಿಯಾಗಿದೆ. (ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಅಕಿಂಚನ್ಯ, ಬ್ರಹ್ಮಚರ್ಯ).[೨] ಇದನ್ನು ಪರಿಪಾಲಿಸಿದರೆ ಖಂಡಿತ ಸುಖವಾಗುವುದು ಎಂದು ಚಿಂತಿಸಿದರೆ '**ಧರ್ಮಾನುಪ್ರೇಕ್ಷೆ**' ಯಾಗುವುದು.

(೪) **ಷೋಡಶಭಾವನೆಗಳು** (ಕಾರಣ ಭಾವನೆಗಳು): ಈ ಹದಿನಾರು ಭಾವನೆಗಳು ತೀರ್ಥಂಕರ ಪದಪ್ರಾಪ್ತಿಗೆ ಕಾರಣವಾಗಿರುವುದರಿಂದ ಇವಕ್ಕೆ '**ಕಾರಣಭಾವನೆ**'ಯೆನ್ನುವರು. ಈ ಭಾವನೆಗಳನ್ನು ಮತ್ತೆ ಮತ್ತೆ ಚಿಂತಿಸಿದುದರಿಂದಲೇ ಶ್ರೇಣಿಕ (ಸಾಮ್ರಾಟ್ ಬಿಂಬಸಾರ) ಭವಿಷ್ಯತ್‌ಕಾಲದ ಪ್ರಥಮ ತೀರ್ಥೇಶನಾಗಿ (ಮಹಾಪದ್ಮ) ಬರುವನೆಂದು ಜೈನಪುರಾಣ ಭವಿಷ್ಯ ನುಡಿದಿದೆ.

(೧) **ದರ್ಶನವಿಶುದ್ಧಿ**, (೨) **ವಿನಯಸಂಪನ್ನತೆ**, (೩) **ಶೀಲವ್ರತೇಷ್ವನತಿಚಾರ**, (ಅಹಿಂಸಾದಿವ್ರತಗಳಲ್ಲೂ ಶೀಲಗಳಲ್ಲೂ ದೋಷಬರದಂತೆ ಭಾವಿಸುವುದು), (೪) **ಅಭೀಕ್ಷ್ಣ ಜ್ಞಾನೋಪಯೋಗ** (ಪ್ರತಿ ಕ್ಷಣದಲ್ಲೂ ಸಮ್ಯಗ್ದರ್ಶನದ ಮಹತ್ವವನ್ನು ಪರಿಭಾವಿಸುವುದು),

---

೧. ಸಜ್ಜಾತಿ, ಸದ್ಗೃಹಸ್ಥತ್ವ, ಸನ್ಯಾಸ, ಸುರೇಂದ್ರಪದವಿ, ಚಕ್ರವರ್ತಿಪದವಿ, ಅರಹಂತಪದವಿ, ನಿರ್ವಾಣ ಇವನ್ನು ಸಪ್ತಪರಮಸ್ಥಾನಗಳೆನ್ನುವರು.

೨. ದಶಧರ್ಮಗಳು: ನಿಶ್ಚಯವಾಗಿ ನೋಡಿದಾಗ ಭವಸಾಗರದಿಂದ ಜೀವಿಯನ್ನು ಯಾವುದು ಉದ್ಧರಿಸಬಲ್ಲದೋ ಅದೇ ಧರ್ಮ ಅಂದರೆ ನಿಜಶುದ್ಧಾತ್ಮಭಾವನೆಯೇ ಧರ್ಮ. ಇದಕ್ಕೆ ಸಾಧಕವಾಗಬಹುದಾದ ಶುಭಭಾವನೆಯೂ ಶುಭಪರಿಣಾಮವೂ ವ್ಯವಹಾರನಯದಿಂದ ಧರ್ಮವೆನಿಸುವುದು. ದಶಧರ್ಮಗಳಲ್ಲಿ ಒಂದೊಂದನ್ನು ಉತ್ತಮೋತ್ತಮವಾಗಿ ಪಾಲಿಸಬೇಕಾಗಿರುವುದರಿಂದ ಪ್ರತಿಯೊಂದರ ಹಿಂದೆಯೂ 'ಉತ್ತಮ' ಎಂಬ ಶಬ್ದವನ್ನು ಬಳಸುವರು. (೧) ಉತ್ತಮ ಕ್ಷಮೆ (ಪ್ರತೀಕಾರಬುದ್ಧಿಯನ್ನು ಬಿಡುವುದು), (೨) ಉತ್ತಮ ಮಾರ್ದವ (ನಿರಭಿಮಾನತೆ), (೩) ಉತ್ತಮಾರ್ಜವ (ಮಾಯಾರಹಿತವಾಗಿರುವುದು), (೪) ಉತ್ತಮ ಶೌಚ (ನಿರ್ಲೋಭತೆ), (೫) ಉತ್ತಮ ಸತ್ಯ, (೬) ಉತ್ತಮ ಸಂಯಮ, (೭) ಉತ್ತಮ ತಪ, (೮) ಉತ್ತಮ ತ್ಯಾಗ, (೯) ಉತ್ತಮ ಅಕಿಂಚನ್ಯತ್ವ (ತನ್ನದೇನೂ ಇಲ್ಲವೆಂಬ ಭಾವನೆ), (೧೦) ಉತ್ತಮ ಬ್ರಹ್ಮಚರ್ಯ— ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ ದಿನವೂ ಒಂದೊಂದು ಅಂಗವಾಗಿ ಇವನ್ನು ಅಭ್ಯಾಸ ಮಾಡುವರು. ಈ ಪರ್ವಕ್ಕೆ 'ದಶಲಕ್ಷಣ ಪರ್ವ'ವೆನ್ನುವರು.

(೫) **ಸಂವೇಗ** (ಧರ್ಮಾನುರಾಗವನ್ನೂ ವೈರಾಗ್ಯವನ್ನೂ ಕುರಿತು ಆಲೋಚಿಸುವುದು), (೬) **ಶಕ್ತಿತಃ ತ್ಯಾಗ** (ಶಕ್ತಿಮೀರಿ ದಾನಮಾಡಬೇಕೆಂಬ ಹಂಬಲ), (೭) **ಶಕ್ತಿತಃ ತಪ** (ಕೈಲಾದಷ್ಟು ತಪವೆಸಗಬೇಕೆಂದು ಚಿಂತಿಸುವುದು, (೮) **ಸಾಧುಸಮಾಧಿ** (ಸಾಧುಗಳ ತಪಸ್ಸಿಗೆ ಉಪಸರ್ಗವಾದಾಗ ಅದನ್ನು ದೂರಮಾಡಬೇಕೆಂದು ಆಲೋಚಿಸುವುದು), (೯) **ವೈಯಾವೃತ್ಯಕರಣ** (ಸಜ್ಜನರ ಕಷ್ಟವನ್ನು ಪರಿಹರಿಸುವ ಹಂಬಲ), (೧೦) **ಅರ್ಹದ್ಭಕ್ತಿ** (ಮತ್ತೆ ಮತ್ತೆ ಜಿನೇಂದ್ರನ ಗುಣಗಾನ ಮಾಡುವುದು), (೧೧) **ಆಚಾರ್ಯಭಕ್ತಿ**, (೧೨) **ಉಪಾಧ್ಯಾಯ ಭಕ್ತಿ**, (೧೩) **ಅವಶ್ಯಕಾಪರಿಹಾಣಿ** (ಶ್ರಾವಕನಾಗಲಿ, ಮುನಿಯಾಗಲಿ ದಿನಚರಿಯನ್ನು ತಪ್ಪದೆ ಮಾಡುವುದು[೧]), (೧೪) **ಮಾರ್ಗಪ್ರಭಾವನಾ** (ಮೋಕ್ಷಮಾರ್ಗ ಹಬ್ಬಲೆಂದು ಹಂಬಲಿಸುವುದು, (೧೫) **ಪ್ರವಚನ ವಾತ್ಸಲ್ಯ** (೧೬) **ಪ್ರವಚನ ಭಕ್ತಿ**.

ಸಂವರವನ್ನು ಕೈಗೂಡಿಸಿಕೊಳ್ಳಲು ಶ್ರಾವಕರ ಯೋಜನೆಯನ್ನು ನೋಡಿದ್ದಾಯಿತು. ಇನ್ನು ಮುನಿಗಳಿಗಾಗೇ ಮೀಸಲಾಗಿರುವ ಯೋಜನೆಯ ಕಡೆ ತಿರುಗೋಣ. (೧) **ತ್ರಿಗುಪ್ತಿ**, (ಪಂಚ ಸಮಿತಿ), (೩) **ಪರೀಷಹ ಜಯ**, (೪) **ಪಂಚಾಚಾರ**, (೫) **ದ್ವಾದಶ ತಪಸ್ಸು** ಇವಿಷ್ಟನ್ನೂ ಯತಿಗಳು ಕೈಗೂಡಿಸಿಕೊಳ್ಳಬೇಕು.

ತ್ರಿಗುಪ್ತಿ: ಸಂಸಾರದ ಅಂಡಲೆತದಿಂದ ಆತ್ಮನನ್ನು ರಕ್ಷಿಸುವುದಕ್ಕೆ ಗುಪ್ತಿಯೆನ್ನುವರು. ಮನ, ವಚನ, ಕಾಯಗಳ ಪ್ರವೃತ್ತಿಯನ್ನು ತಡೆಯುವುದೇ ತ್ರಿಗುಪ್ತಿಯಾಗಿದೆ. ಈ ಪ್ರವೃತ್ತಿಗಳನ್ನು ತಡೆದೆವೆಂದರೆ ಕರ್ಮಾಸುರರನ್ನು ತಡೆದಂತಾಗುವುದು. ಇವಕ್ಕೆ ಕ್ರಮವಾಗಿ ಮನೋಗುಪ್ತಿ, ವಚನಗುಪ್ತಿ, ಕಾಯಗುಪ್ತಿ ಎಂದು ಕರೆಯುತ್ತಾರೆ.

ಪಂಚಸಮಿತಿ: ತನ್ನಿಂದ ಅನ್ಯ ಜೀವಿಗೆ ತೊಂದರೆಯಾಗದಂತೆ ಎಚ್ಚರವಾಗಿ ವ್ಯವಹರಿಸುವುದಕ್ಕೆ **'ಸಮಿತಿ'** ಎಂದು ಹೆಸರು. (೧) ಈರ್ಯಾಸಮಿತಿ—ಮುನಿ ನಡೆವಾಗ ದಾರಿಯನ್ನು ಚೆನ್ನಾಗಿ ನೋಡಿಕೊಂಡು ಒಂದು ಮಾರು ದೂರಕ್ಕೆ ದಿಟ್ಟಿಯಿಟ್ಟು ನಿಧಾನವಾಗಿ ಸಾಗುವುದಕ್ಕೆ **'ಈರ್ಯಾ ಸಮಿತಿ'** ಎನ್ನುವರು. (೨) ಅನ್ಯರಿಗೆ ನೋವಾಗದಂತೆ ಎಚ್ಚರವಾಗಿದ್ದು ಹಿತವಾಗಿ, ಮಿತವಾಗಿ, ಮೃದುವಾಗಿ ಮಾತಾಡುವುದಕ್ಕೆ **'ಭಾಷಾ ಸಮಿತಿ'** ಎನ್ನುವರು. (೩) ಶ್ರಾವಕರು ವಿಧಿಪೂರ್ವಕವಾಗಿ ಕೊಡುವ ಆಹಾರವನ್ನು ಹಿಗ್ಗದೆ, ಕುಗ್ಗದೆ, ರುಚಿ, ಅರುಚಿಯೆನ್ನದೆ ಸಮಚಿತ್ತದಿಂದ ಸ್ವೀಕರಿಸುವುದಕ್ಕೆ **'ಏಷಣಾ ಸಮಿತಿ'** ಎಂದು ಹೆಸರು. (೪) ನಡೆವಾಗ, ಕೂರುವಾಗ, ಏಳುವಾಗ, ಇಲ್ಲವೆ ಪುಸ್ತಕ, ಕಮಂಡಲಾದಿಗಳನ್ನು ಒಂದೆಡೆ ಇಡುವಾಗ ಪ್ರಾಣಿಹಿಂಸೆಯಾಗದಂತೆ ಎಚ್ಚರವಹಿಸುವುದೂ, ಪಿಂಚದಿಂದ ಸವರಿ ಶುಚಿಗೊಳಿಸುವುದೂ **'ಆದಾನ ನಿಕ್ಷೇಪ ಸಮಿತಿ'**ಯಾಗಿದೆ. (೫) ಮಲಮೂತ್ರ ವಿಸರ್ಜನೆ ಮಾಡುವಾಗ ತ್ರಸಸ್ಥಾವರ ಜೀವಿಗಳಿಲ್ಲದ ಗಟ್ಟಿ ನೆಲವನ್ನೇ ಆರಿಸಬೇಕು. ಅನಂತರ ಕಮಂಡಲದ ನೀರಿನಿಂದ ಶೌಚಕ್ರಿಯೆ ಮಾಡಿಕೊಳ್ಳಬೇಕು. ಇದಕ್ಕೆ **'ಪ್ರತಿಷ್ಠಾನ'** ಅಥವ **'ಉತ್ಸರ್ಗಸಮಿತಿ'**ಯೆನ್ನುವರು.

---

೧. ದೇವಪೂಜೆ, ಗುರುಸೇವೆ, ಶಾಸ್ತ್ರಪಠನ, ಸಂಯಮ, ತಪ, ಚತುರ್ವಿಧ ದಾನಗಳು ಗೃಹಸ್ಥರ **'ಷಟ್‌ಕರ್ಮಗಳು'**

ಪರೀಷಹಜಯ

ಸಾಧಕನು ಬಾಳಿನಲ್ಲಿ ಗುರಿ ಸಾಧಿಸಲು ಹೊರಟಾಗ ಅಡಚಣೆಯ ರೂಪದಲ್ಲಿ ಕಾಣಿಸಿಕೊಳ್ಳುವ ಸಂದರ್ಭ ಮತ್ತು ಸನ್ನಿವೇಶವನ್ನು ಪರೀಷಹಗಳೆನ್ನುವರು. ಒಟ್ಟು ಪರೀಷಹಗಳು ಇಪ್ಪತ್ತೆರಡಿವೆ. (೧) ಹಸಿವು, (೨) ನೀರಡಿಕೆ, (೩) ಶೀತ, (೪) ಉಷ್ಣ, (೫) ಸೊಳ್ಳೆ, ನೊಣಗಳ ಕಾಟ, (೬) ನಗ್ನತ್ವ, (೭) ನಿರುತ್ಸಾಹ ಅಥವ ಆಲಸ್ಯ (ಅರತಿ), (೮) ಸ್ತ್ರೀ ಆಕರ್ಷಣೆ, (೯) ಚರ್ಯೆ (ಸಂಚಾರ), (೧೦) ನಿಷದ್ಯೆ (ಆಸನದಿಂದಾಗುವ ತೊಂದರೆ), (೧೧) ಶಯ್ಯೆ, (೧೨) ಆಕ್ರೋಶ, (೧೩) ವಧೆ (ತಾಡನ ಪೀಡನ), (೧೪) ಯಾಚನೆ, (೧೫) ಅಲಾಭ, (೧೬) ರೋಗ, (೧೭) ತೃಣಸ್ಪರ್ಶ (ಮುಳ್ಳು, ಕಲ್ಲಿನ ಬಾಧೆ), (೧೮) ಮಲ, (೧೯) ಸತ್ಕಾರ ಪುರಸ್ಕಾರ, (೨೦) ಪ್ರಜ್ಞೆ (ವಿದ್ಯಾಗರ್ವ), (೨೧) ಅಜ್ಞಾನ (ಜ್ಞಾನ ಲಭಿಸದ್ದಕ್ಕೆ ವ್ಯಥೆ), (೨೨) ಅದರ್ಶನ (ಯಾರೂ ದರ್ಶನಕ್ಕೆ ಬರಲಿಲ್ಲವೆಂಬ ಚಿಂತೆ)—ಈ ಇಪ್ಪತ್ತೆರಡು ಪರೀಷಹಗಳನ್ನು ಮುನಿ ಜಯಿಸಬೇಕು.

ಚಾರಿತ್ರ[೧]: ಶುದ್ಧಾತ್ಮ ಭಾವನೆಯಲ್ಲಿ ತನ್ಮಯವಾಗುವುದೇ ನಿಜವಾದ ಚಾರಿತ್ರ. ಈ ಮಹಾತ್ಕಾರ್ಯಕ್ಕೆ ನೆರವಾಗುವುದೆಲ್ಲ ವ್ಯವಹಾರ ದೃಷ್ಟಿಯಲ್ಲಿ ಚಾರಿತ್ರವೆನಿಸುವುದು.

(೧) **ಸಾಮಾಯಿಕ**: ವ್ರತಧಾರಣೆ, ಸಮಿತಿ ಪಾಲನೆ, ಕಷಾಯ ನಿಗ್ರಹ, ಇಂದ್ರಿಯ ನಿಗ್ರಹ ಇವಕ್ಕೆ 'ಸಾಮಾಯಿಕ'ವೆನ್ನುವರು.

(೨) **ಛೇದೋಪಸ್ಥಾಪನೆ**: ಪ್ರಮಾದಗಳಾಗದಂತೆ ಎಚ್ಚರ ವಹಿಸುವುದು, ಆಗಿರುವ ಪ್ರಮಾದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು—ಇದಕ್ಕೆ 'ಛೇದೋಪಸ್ಥಾಪನೆ'ಯೆನ್ನುವರು.

(೩) **ಪರಿಹಾರ ವಿಶುದ್ಧಿ**: ಪಂಚಸಮಿತಿಗಳನ್ನೂ ತ್ರಿಗುಪ್ತಿಗಳನ್ನೂ ಪರಿಪಾಲಿಸಿ ದೋಷಮುಕ್ತನಾಗುವುದಕ್ಕೆ 'ಪರಿಹಾರವಿಶುದ್ಧಿ'ಯೆನ್ನುವರು.

(೪) ಸಂಜ್ವಲನ ಸೂಕ್ಷ್ಮಲೋಭ ಕಷಾಯೋದಯವುಳ್ಳ ಸಂಯಮಿಯ ಚಾರಿತ್ರಕ್ಕೆ **'ಸೂಕ್ಷ್ಮಸಾಂಪರಾಯ ಚಾರಿತ್ರ'**ವೆಂದು ಹೆಸರು.

(೫) **ಯಥಾಖ್ಯಾತ**: ೧೧ ಮತ್ತು ೧೨ನೇ ಗುಣಸ್ಥಾನದಲ್ಲಿರುವ ಸಂಯಮಿಗಳಲ್ಲಿಯೂ, ಸಯೋಗ ಕೇವಲಿ ಮತ್ತು ಅಯೋಗ ಕೇವಲಿಗಳಲ್ಲಿಯೂ ಉಂಟಾಗುವ ಯಥಾಸ್ಥಿತ ಆತ್ಮೋಪಲಬ್ಧಿರೂಪವಾದ ಚಾರಿತ್ರಕ್ಕೆ 'ಯಥಾಖ್ಯಾತ ಚಾರಿತ್ರ'ವೆನ್ನುವರು.

ದ್ವಾದಶ ತಪಸ್ಸು: ಇದರಲ್ಲಿ ಆರು ಬಾಹ್ಯ ತಪಸ್ಸುಗಳೂ, ಆರು ಅಂತರಂಗ ತಪಸ್ಸುಗಳೂ ಇವೆ.

ಬಾಹ್ಯ ತಪಸ್ಸು: (೧) ಅನಶನ (ಉಪವಾಸ ಮಾಡುವುದು), (೨) ಅವಮೋದರ (ಬೇಕಾದುದಕ್ಕಿಂತ ಕಡಮೆ ಆಹಾರ ತಿನ್ನುವುದು), (೩) ವೃತ್ತಿಸಂಖ್ಯಾನ (ಹೀಗೆ ದೊರೆತರೆ ಮಾತ್ರ ಆಹಾರ ಸ್ವೀಕರಿಸುವೆನೆಂದು ಮೊದಲೇ ನಿರ್ಧರಿಸಿಕೊಂಡು ಹೊರಡುವುದು), (೪) ರಸತ್ಯಾಗ, (೫) ಕಾಯಕ್ಲೇಶ (ಶೀತೋಷ್ಣಕ್ಕೆ ದೇಹವನ್ನೊಡ್ಡಿ ಕೃಶಗೊಳಿಸುವುದು,) (೬) ವಿವಕ್ತ ಶಯನಾಸನ (ಏಕಾಂತವಾಗಿ ಕೂರುವುದು ಮತ್ತು ಮಲಗುವುದು.)

---

೧. ಗೋ. ಸಾ., ಜೀ. ಕಾಂ., ಪ ೪೬೯-೪೭೪.

ಅಂತರಂಗ ತಪಸ್ಸು: (೧) ಪ್ರಾಯಶ್ಚಿತ್ತ (ತಪ್ಪನೊಪ್ಪಿಕೊಂಡು ಹಿರಿಯರಿಂದ ಕ್ಷಮೆ ಪಡೆದು, ವಿಧಿಸಿದ ಶಿಕ್ಷೆಯನ್ನು ಅನುಭವಿಸುವುದು), (೨) ವಿನಯ (ಹಿರಿಯ ಸಾಧಕರಿಗೆ ವಿನೀತನಾಗಿರುವುದು), (೩) ವೈಯಾವೃತ್ಯ (ಅಶಕ್ತರಾದ, ರೋಗಕ್ಕೆ ತುತ್ತಾದ ಸಾಧುಗಳ ಶುಶ್ರೂಷೆ ಮಾಡುವುದು), (೪) ಸ್ವಾಧ್ಯಾಯ (ಆಗಮಗಳನ್ನು ಓದುವುದು), (೫) ವ್ಯುತ್ಸರ್ಗ (ಶರೀರದ ಮೇಲೆ ಮಮತೆಯಿಡದಿರುವುದು), (೬) ಧ್ಯಾನ (ಧರ್ಮವನ್ನೂ ಮುಕ್ತಿಯನ್ನೂ ಕುರಿತು ಚಿಂತಿಸುವುದು.[೧])

ನಿರ್ಜರಾತತ್ತ್ವ[೨]

ಸಂವರತತ್ತ್ವಾನುಸಾರ, ಆತ್ಮಪ್ರದೇಶಕ್ಕೆ ಬರುವ ಕರ್ಮಗಳನ್ನು ತಡೆದಾದ ಮೇಲೆ ಸಾಧಕನಿಗೆ ಇನ್ನೊಂದು ಮಹತ್ಕಾರ್ಯ ಕಾದಿರುತ್ತದೆ. ಇದುವರೆಗಾಗಲೆ ಆತ್ಮಪ್ರದೇಶವನ್ನು ಹೊಕ್ಕು ದುರಾಕ್ರಮಣ ಮಾಡಿ ವಿಜೃಂಭಿಸುತ್ತಿರುವ ಕರ್ಮರಾಶಿಯನ್ನು ಅಲ್ಲಿಂದ ತೊಲಗಿಸದಿದ್ದರೆ ಸಾಧನೆ ಪೂರ್ಣವಾಗಲಾರದು. ಅವನ್ನು (ಕರ್ಮಗಳನ್ನು) ತೊಲಗಿಸುವ ಕ್ರಿಯೆಗೇನೆ 'ನಿರ್ಜರಾತತ್ತ್ವ'ವೆನ್ನುವರು. ತನ್ನ ಸ್ಥಿತಿ ಪೂರ್ತಿಯಾದ ಮೇಲೆ (ತನ್ನ ಕಾಲ ಮುಗಿದ ನಂತರ) ಕರ್ಮ ತಾನಾಗೇ ತೊಲಗಿಹೋಗುವುದಕ್ಕೆ **'ಸವಿಪಾಕನಿರ್ಜರೆ'** ಎಂದೂ, ಸಾಧಕ ತನ್ನ ತಪಸ್ಸಿನಿಂದ ಕರ್ಮಗಳನ್ನು ಬಲವಂತವಾಗಿ ತೊಲಗಿಸುವುದಕ್ಕೆ 'ಅವಿಪಾಕನಿರ್ಜರೆ'ಯೆಂದೂ ಹೆಸರು. ಈ ಎರಡು ಸಂದರ್ಭದಲ್ಲೂ ನಿರ್ಜರೆಗೆ ಕಾರಣವಾದ ಆತ್ಮನ ಪರಿಣಾಮಕ್ಕೆ (ಭಾವ) 'ಭಾವನಿರ್ಜರೆ'ಯೆಂದೂ, ಕರ್ಮಪುದ್ಗಲಗಳು ಆತ್ಮಪ್ರದೇಶದಿಂದ ಕಾಲ್ತೆಗೆಯುವುದಕ್ಕೆ 'ದ್ರವ್ಯನಿರ್ಜರೆ'ಯೆಂದೂ ಹೆಸರು.

ಜೈನದರ್ಶನದಲ್ಲಿ ಕರ್ಮರಹಸ್ಯ: "ಆತ್ಮವು ತನ್ನ ಪರಿಣಾಮಕ್ಕೆ ತಕ್ಕಂತೆ ಕರ್ಮವನ್ನು ಪ್ರಬಲ ನಿರ್ಬಲಗೊಳಿಸಬಹುದೆಂಬುದು ಗೊತ್ತಾಗುವುದು. ಒಮ್ಮೊಮ್ಮೆ ಜೀವಕ್ಕೆ ಕಟ್ಟಿದ ಕರ್ಮವು ಫಲ ಕೊಡದೆ ಹೋಗಬಹುದು. ಇನ್ನೊಮ್ಮೆ ಕರ್ಮ ಉದಯಿಸುವ ಕಾಲಕ್ಕಿಂತ ಪೂರ್ವದಲ್ಲಿಯೇ ಉದುರಿಹೋಗಬಹುದು. ಮತ್ತೊಮ್ಮೆ ಮುಂಚಿತವಾಗೆ ಪರಿಣಾಮ ಮಾಡಿದರೂ ಮಾಡೀತೆ. ಇದೆಲ್ಲ ಆತ್ಮನ ಪರಿಣಾಮದ ಮೇಲೆ ಅವಲಂಬಿಸಿದೆ. ಕಟ್ಟಿಕೊಂಡ ಕರ್ಮವನ್ನು ಭೋಗಿಸಿಯೇ ತೀರಬೇಕೆಂಬ ಕಟ್ಟು ಆತ್ಮನಿಗಿಲ್ಲ. ಜೀವನಲ್ಲಿ ಸಮ್ಯಗ್ಜ್ಞಾನ, ದರ್ಶನ, ಚಾರಿತ್ರಗಳು ಉಂಟಾದಲ್ಲಿ ಅನೇಕ ಕರ್ಮಗಳು ತನ್ನಿಂದ ತಾನೇ ಕಳಚಿಬೀಳುವುವು. ಕೇವಲಿಗಳ ಅಸಾತಾ ಕರ್ಮಪ್ರಕೃತಿಯು ಸಾತಾರೂಪದಲ್ಲಿ ಪರಿವರ್ತನ ಹೊಂದಿ ಬಿಟ್ಟು ಹೋಗುವುದು.[೩]"

ಹಿಂದೂದರ್ಶನದಲ್ಲಿ ಕರ್ಮರಹಸ್ಯ: ಯೋಗಿಯು ನೇರವಾಗಿ ಕೈವಲ್ಯವನ್ನು ಪಡೆದರೆ

೧. ಜಹ ಕಾಲೇಣ ತವೇಣ ಯ | ಭುತ್ತರಸಂ ಕಮ್ಮ ಪುಗ್ಗಲಂ ಜೇಣ ||
ಭಾವೇಣ ಸಡದಿ ಣೇಯಾ | ತಸ್ಸಡಣಂ ಚೇದಿ ಣಿಜ್ಜರಾದು ವಿಹಾ || —ದ್ರ., ವ್ಯ. ೩೬.

೨. 'ಪಂಚಾಚಾರ'ವನ್ನು 'ಆಚಾರ್ಯ ಪರಮೇಷ್ಠಿ' ಎಂಬಲ್ಲಿ ವಿವರಿಸಿದೆ.

೩. ಶ್ರೀ ಮಿರ್ಜಿ ಅಣ್ಣಾರಾಯರು, ಜೈ. ಧ., ಪು. ೩೬೯-೭೦.

ಅವನ ಹಿಂದಿನ ಕರ್ಮಗಳೆಲ್ಲವೂ ತಕ್ಷಣವೇ ನಾಶವಾಗುವುವೆ? ಕರ್ಮಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು.

(೧) **ಪ್ರಾರಬ್ಧ:** ಈ ಜನ್ಮದಲ್ಲಿಯೇ ವಿಪಾಕವನ್ನು ಪಡೆಯಲು ಇದರ ಕೆಲಸ ಪ್ರಾರಂಭವಾಗುವುದು.

(೨) **ಸಂಚಿತ:** ಮುಂದೆ ಫಲಕಾರಿಯಾಗಲು ಈಗ ಅಂತರ್ಗತವಾಗಿರುವ ಕರ್ಮ.

(೩) **ಕ್ರಿಯಾಮಾಣ:** ಈಗ ನಡೆಯುತ್ತಿರುವ ಕರ್ಮ. ಯೋಗಿಯ ಸಂಚಿತ ಕರ್ಮವು ದಗ್ಧಬೀಜದಂತೆ ಪುನಃ ಮೊಳೆಯುವುದಿಲ್ಲ. ಆಗ ನಡೆಯುತ್ತಿರುವ ಕರ್ಮವನ್ನು (ಕ್ರಿಯಾಮಾಣ) ಯೋಗಿಯು ತಾನು ಬದುಕಿರುವ ತನಕ ನಿಯಂತ್ರಿಸಬಹುದು. ಪ್ರಾರಬ್ಧಯಂತ್ರವು ತಿರುಗಲು ಪ್ರಾರಂಭಿಸಿದರೆ ಅದನ್ನು ನಿಲ್ಲಿಸಲು ಯಾವ ಶಕ್ತಿಗೂ ಸಾಧ್ಯವಿಲ್ಲ. ಇದರ ರಭಸವು ತನಗೆ ತಾನೇ ತಿರುಗಬೇಕು. 'ಸಂಪ್ರಜ್ಞಾತಸಮಾಧಿ[೧]'ಯನ್ನು ಪಡೆದ ಯೋಗಿಯು ಕರ್ಮವಿಪಾಕದ ಯೋಗವನ್ನು ಹೆಚ್ಚಿಸಲು ಶಕ್ತನಾಗಿರುವನೇ ವಿನಾ ಗತಿಯನ್ನು ನಿಲ್ಲಿಸಲು ಶಕ್ತನಲ್ಲ. ಆದರೆ ಕೈವಲ್ಯಕ್ಕೆ[೨] ಒಂದು ವಿಶೇಷ ಶಕ್ತಿಯುಂಟು. ಇದು ಪ್ರಾರಬ್ಧದ ಸಹಾಯಕಗಳಾದ ಅವಿದ್ಯೆ ಅಹಂಕಾರ ರಾಗ ಅಭಿನಿವೇಶ ಮೊದಲಾದುವುಗಳನ್ನು ಇಲ್ಲದಂತೆ ಮಾಡಿ, ಅದರ ಕಾರ್ಯರೂಪಕ್ಕೆ ತರುವ ಶಕ್ತಿಯನ್ನು ನಾಶಮಾಡುತ್ತದೆ. ಅವಿದ್ಯೆಯೇ ಮೊದಲಾದ ಸಹಾಯಕಗಳಿಲ್ಲದಿದ್ದರೆ ಪ್ರಾರಬ್ಧವು ಇದ್ದರೂ ಇಲ್ಲದಂತೆಯೇ[೩]".

ಮೋಕ್ಷತತ್ತ್ವ

ತನ್ನಲ್ಲಿ ತಂಗಿದ ಎಲ್ಲ ಕರ್ಮಗಳ ನಾಶಕ್ಕೆ ಕಾರಣವಾದ ಆತ್ಮನ ಪರಿಣಾಮಕ್ಕೆ 'ಭಾವಮೋಕ್ಷ'ವೆಂದು ಹೆಸರು. ಕರ್ಮಪುದ್ಗಲವೆಲ್ಲ ಆತ್ಮನನ್ನು ಬಿಟ್ಟುಹೋಗುವುದಕ್ಕೆ 'ದ್ರವ್ಯಮೋಕ್ಷ'ವೆಂದು ಹೆಸರು.

'ಸಂವರ'ದಿಂದ ಹೊಸಕರ್ಮಗಳ ಆಗಮನ ನಿಂತುಹೋಗಿ, ನಿರ್ಜರೆಯಿಂದ ಮೊದಲೇ ಇದ್ದ ಕರ್ಮಗಳ ನಿರ್ಗಮನವಾಗಿ ಆತ್ಮ ಸಂಪೂರ್ಣವಾಗಿ ಅನ್ಯಪುದ್ಗಲಗಳ ಸಂಸರ್ಗದಿಂದ

೧. ಏಕಾಗ್ರದಲ್ಲಿ ಉತ್ಪನ್ನವಾಗುವ ಯೋಗವು ವಸ್ತುಗಳ ಸ್ವರೂಪವನ್ನು ಪ್ರಕಾಶಿಸಿ, ಕ್ಲೇಶಗಳನ್ನು ನಾಶಮಾಡಿ, ಕರ್ಮಬಂಧಗಳನ್ನು ಸಡಿಲಿಸಿ, ನಿರುದ್ಧಾವಸ್ಥೆಯನ್ನು (ಈ ಅವಸ್ಥೆಯಲ್ಲಿ ಸಕಲವೃತ್ತಿಗಳು ನಿರುದ್ಧವಾಗಿ ಸಂಸ್ಕಾರ ಮಾತ್ರವಾಗಿರುತ್ತವೆ) ಹೊಂದುವಂತೆ ಮಾಡುತ್ತದೆ. ಈ ಅವಸ್ಥೆಗೆ 'ಸಂಪ್ರಜ್ಞಾತಸಮಾಧಿ' ಎಂದು ಹೆಸರು. ಸಂಪ್ರಜ್ಞಾತಸಮಾಧಿಯು ವಿತರ್ಕ, ವಿಚಾರ, ಆನಂದ, ಅಸ್ಮಿತಾ ಇವುಗಳಿಂದ ಕೂಡಿರುತ್ತದೆ. ಸಮಸ್ತವೃತ್ತಿಗಳು ನಿರುದ್ಧವಾದರೆ 'ಅಸಂಪ್ರಜ್ಞಾತ' ಸಮಾಧಿಯಾಗುವುದು—ಪ್ರ. ಕ. (೪೧-೩), ಪು. ೭೧.

೨. ಚಿತ್ತವು ರಜಸ್ತಮೋಮಲಗಳನ್ನು ತೊಲಗಿಸಿ ಕ್ಲೇಶಬೀಜಗಳನ್ನು ದಹಿಸಿದರೆ ಪುರುಷನ ವಿವೇಕಜ್ಞಾನವುಂಟಾಗಲು ಯಾವ ಅಡ್ಡಿಯೂ ಇರುವುದಿಲ್ಲ. ಆಗ ಚಿತ್ತವು ಪುರುಷನ ಶುದ್ಧಿ ಸಾರೂಪ್ಯವನ್ನು ತಾನೂ ಪಡೆಯುತ್ತದೆ. ಅನಂತರ ಪುರುಷನಲ್ಲಿ ಆರೋಪಿಸಲ್ಪಟ್ಟ ಸಮಸ್ತ ಅನುಭವಗಳು ಕೊನೆಗೊಂಡು ಪುರುಷನು ಕೇವಲ ಸ್ವರೂಪದಲ್ಲಿ ನಿಲ್ಲುತ್ತಾನೆ (ಸತ್ತ್ವ ಪುರುಷಯೋಃ ಶುದ್ಧಸಾಮ್ಯೇ ಕೈವಲ್ಯಮ್) ಇದೇ ಕೈವಲ್ಯ.—ಪ್ರ. ಕ. (೪೧-೩), ಪು. ೮೭.

೩. ಶ್ರೀ ಸ್ವಾಮಿ ಆದಿದೇವಾನಂದ, 'ಯೋಗರಹಸ್ಯ', ಪ್ರ. ಕ. (೪೧-೩), ಪು. ೮೭-೮೮.

ಪಾರಾಗಿ ತನ್ನ ಸಹಜಸ್ವರೂಪದಲ್ಲಿ ರಾರಾಜಿಸುವುದಕ್ಕೆ ಮೋಕ್ಷವೆನ್ನುವರು. "The effect of **'Samvara'** and **'Nirjara'** is the complete removal of the particles of matter adhering to and in union with the soul, which being accomplished the **'Jiva'** (Soul) is left as a pure spirit, whole, effulgent and worshipful, like pure, shining gold, separated from the impurities of alloy. This is **'Moksha'**, the seventh and last **'Tattva'**. The saved one now rises up to the top most part of the universe, called the **'Siddha sila'** and resides there for ever, possessed of all divine attributes—eternal life, omniscience and the like—and in the full enjoyment of unbounded, unabating bliss. This is **'Nirvana'**, the attainment to the ideal of perfection and joy."[೧]

ಜೀವ ಒಮ್ಮೆ ಮುಕ್ತಿಯನ್ನು ಪಡೆಯಿತೆಂದರೆ ಪರಮಾತ್ಮವಾಯಿತೆಂದೇ ಅರ್ಥ. "ಘಾತಿ ಕರ್ಮಗಳು ನಾಶವಾಯಿತೆಂದರೆ ಪರಮಪರಂಜ್ಯೋತಿರೂಪವಾದ ಕೇವಲಜ್ಞಾನ ಲಭಿಸುವುದು. ಒಂಭತ್ತು 'ಕೇವಲಲಬ್ಧಿ'ಗಳು ಪ್ರಾಪ್ತಿಯಾಗುವುವು [ಕ್ಷಾಯಿಕಸಮ್ಯಕ್ತ್ವ ಚಾರಿತ್ರ ಜ್ಞಾನ ದರ್ಶನ ದಾನ ಲಾಭ ಭೋಗ ಉಪಭೋಗ ವೀರ್ಯ] ಇದರಿಂದ ಅಂಥ ಚೇತನವನ್ನು **'ಪರಮಾತ್ಮ'**ನೆನ್ನುವರು. ಇಂದ್ರಿಯಾಪೇಕ್ಷೆಯಿಲ್ಲದ ಜ್ಞಾನದರ್ಶನಗಳಿಂದ ಯುಕ್ತನಾಗುವುದರಿಂದ **'ಕೇವಲೀ'** ಎನ್ನುವರು. ಕಾಯಯೋಗ ಯುಕ್ತನಾಗಿರುವುದರಿಂದ ಅಂಥವನನ್ನು **ಸಯೋಗಕೇವಲಿ** ಎಂದು ಕರೆಯುತ್ತಾರೆ. ಘಾತಿಕರ್ಮಗಳ ವಿಧ್ವಂಸಕನಾದುದರಿಂದ 'ಜಿನ'ನೆನಿಸುವನು.[೨]" ಈ ಅವಸ್ಥೆಯನ್ನು **'ಭಾವಮೋಕ್ಷ'**ವೆನ್ನಬಹುದು.

ಸಯೋಗಕೇವಲಿಗೆ ಸಂಪೂರ್ಣವಾಗಿ ಆಸ್ರವ ನಿಂತುಹೋಗಿರುತ್ತದೆ. ಇದರ ಜೊತೆಗೆ ಪರಮಸಂವರ ಪ್ರಾಪ್ತಿಯಾಗಿರುತ್ತದೆ. ಸದಾ ಶುದ್ಧಸ್ವರೂಪಾನಂದದಲ್ಲಿ ಮಗ್ನನಾಗುವುದರಿಂದ ಉಳಿದ ಕರ್ಮಗಳ (ಅಘಾತಿಕರ್ಮ) ನಿರ್ಜರೆಗೂ ಮಾರ್ಗವಾಗುವುದು. ಉಳಿದ ಕರ್ಮಗಳು ಒಮ್ಮೆಗೆ ಫಲಕೊಟ್ಟು ನಾಶಹೊಂದಬಹುದು; ಅಥವಾ 'ಕೇವಲಸಮುದ್ಘಾತ' ಕ್ರಿಯೆಯಿಂದ[೩] ಕರ್ಮಗಳು ನಾಶಹೊಂದುವುವು; ಇಲ್ಲವೆ ಆಯುಃಕರ್ಮ ಮುಗಿದಾಗ

೧. Sri C. R. Jain, '*The Jaina Theory of Karma*', W. I. J., p. 181.

೨. ಗೋ. ಸಾ., ಜೀ. ಕಾಂ., ಪ. ೬೩-೬೪.

೩. **ಕೇವಲಸಮುದ್ಘಾತ:** "ಘಾತಿಚತುಷ್ಟಯವನ್ನು ಧ್ವಂಸಮಾಡಿದ ಸಯೋಗಕೇವಲಿ 'ಪರಮಶುಕ್ಲಧ್ಯಾನ'ಕ್ಕೆ ಅಧಿಕಾರಿಯಾಗಿರುವನು. ಮನೋವಾಕ್ಕಾಯ ಯೋಗಗಳನ್ನು ತಡೆಯುವುದಕ್ಕೋಸ್ಕರ ಕೇವಲಿ ಜಿನನು ಸ್ವಾಭಾವಿಕವಾಗಿ ಸಮುದ್ಘಾತವಿಧಿಯನ್ನು ಪ್ರಕಟ ಮಾಡುವನು. ಆ ಜೀವನು ಕ್ರಮವಾಗಿ ನಾಲ್ಕು ಸಮಯಗಳಲ್ಲಿ **ದಂಡ, ಕವಾಟ,** ಪ್ರತರ, ಪೂರಣ ಎಂಬ ನಾಲ್ಕು ಅವಸ್ಥೆಗಳನ್ನು ಹೊಂದಿ ಲೋಕವನ್ನೆಲ್ಲ ವ್ಯಾಪಿಸುವನು. ಸರ್ವವ್ಯಾಪಕನೂ ಸಮಸ್ತಜೀವಿಗಳಿಗೆ ಹಿತಕರನೂ, ಸರ್ವಜ್ಞನೂ ಲೋಕಪೂರ್ಣನೂ ಆಗುವನು. ಆ ಸರ್ವಜ್ಞನು ಲೋಕಪೂರಣವನ್ನು ಮಾಡಿ ಮತ್ತೆ ಕ್ರಮವಾಗಿ ಹೋದಮಾರ್ಗದಲ್ಲಿ ಹಿಂದಿರುಗುವನು. ಆಯುಷ್ಯಸ್ಥಿತಿಯು ಅಂತರ್ಮುಹೂರ್ತವಿದ್ದು ಇತರ ಮೂರು ಅಘಾತಿಕರ್ಮಗಳ ಸ್ಥಿತಿಯು ಅದಕ್ಕಿಂತ

ನಾಶಹೊಂದುವುದಿದ್ದರೆ ಹಾಗೂ ಆಗುವುದುಂಟು. ಅಂತು ಉಳಿದ ಅಘಾತಿಕರ್ಮಗಳೆಲ್ಲ [ವೇದನೀಯ, ಆಯು, ನಾಮ, ಗೋತ್ರ] ನಾಶವಾಗಿ ಸಯೋಗಕೇವಲಿ ಭಗವಾನನು **'ಅಯೋಗ ಕೇವಲಿ'**ಯೆನಿಸಿ ಅನಂತರ ಮನುಷ್ಯಪರ್ಯಾಯವನ್ನು ತೊರೆದು ಪರಿಶುದ್ಧಚೇತನ ಸಿದ್ಧಲೋಕಕ್ಕೆ ಲಂಘಿಸುವುದು[೧]. ಸಿದ್ಧನಾದನೆಂದರೆ 'ದ್ರವ್ಯಮೋಕ್ಷ' ಲಭಿಸಿದಂತೆ.

ನವಪದಾರ್ಥಗಳು

ಸಪ್ತತತ್ತ್ವಗಳೊಡನೆ 'ಪಾಪ' ಮತ್ತು 'ಪುಣ್ಯ'ವನ್ನು ಸೇರಿಸಿ **'ನವಪದಾರ್ಥ'**ವೆನ್ನುವರು. "ಸದ್ವಿಷಯಕವಾದ ಆತ್ಮಪರಿಣಾಮಕ್ಕೆ 'ಶುಭೋಪಯೋಗ'ವೆಂದೂ ಅಸದ್ವಿಷಯಕವಾದ ಆತ್ಮಪರಿಣಾಮಕ್ಕೆ 'ಅಶುಭೋಪಯೋಗ'ವೆಂದೂ ಹೆಸರು. ಶುಭೋಪಯೋಗದಿಂದ 'ಪುಣ್ಯ'ವೂ ಅಶುಭೋಪಯೋಗದಿಂದ 'ಪಾಪ'ವೂ ಆತ್ಮನಲ್ಲಿ ಬಂದು ಸೇರುತ್ತದೆ. ಒಬ್ಬ ಆತ್ಮನೇ ಬೇರೆ ಬೇರೆ ಸಮಯಗಳಲ್ಲಿ ಶುಭಾಶುಭೋಪಯೋಗಯುಕ್ತನಾಗಿರಬಹುದು. ಶುಭೋಪಯೋಗಯುಕ್ತರಾದ ಜೀವಾತ್ಮರು ಪುಣ್ಯಜೀವಿಗಳೆನಿಸುವರು. ಅಶುಭೋಪಯೋಗ ಯುಕ್ತರಾದ ಜೀವಾತ್ಮರು ಪಾಪಜೀವಿಗಳೆನಿಸುವರು.[೨]"

ಶುಭೋಪಯೋಗದಿಂದ[೩] ಸ್ವರ್ಗಾದಿಸುಖವೂ, ಅಶುಭೋಪಯೋಗದಿಂದ[೪] ನರಕಾದಿ

ಹೆಚ್ಚಾಗಿದ್ದರೆ ಕೇವಲಿಯು ಕ್ರಮವಾಗಿ ಒಂದೊಂದು ಸಮಯದಲ್ಲಿ ದಂಡ, ಕವಾಟ, ಪ್ರತರ, ಲೋಕ ಪೂರಣಗಳೆಂಬ ಯೋಗವನ್ನು ಮಾಡಿ ಲೋಕವ್ಯಾಪಕನಾಗಿ ಪುನಃ ಲೋಕಪೂರಣದಿಂದ ಪ್ರತರ, ಕವಾಟ, ದಂಡ ಈ ಅವಸ್ಥೆಗಳಿಗೆ ಉಪಸಂಹರಿಸಿಕೊಳ್ಳುವನು. ಇದಕ್ಕೆ ಕೇವಲಸಮುದ್ಘಾತವೆಂದು ಹೆಸರು"—ಭಗವಾನ್ ಜಿನಸೇನರು, ಪೂ. ಪು., XXI, ೧೮೮-೧೯೨. **'ಸಮುದ್ಘಾತ'** ಎಂದರೆ ಮೂಲಶರೀರವನ್ನು ಬಿಡದೆ ಆತ್ಮಪ್ರದೇಶವು ಶರೀರದ ಹೊರಗೂ ಪಸರಿಸುವುದು.

೧. ಕೇವಲಸಮುದ್ಘಾತ ಯೋಗಲೀಲೆಯನ್ನು ಕಣ್ಣಿಗೆ ಕಟ್ಟುವಂತೆ ರತ್ನಾಕರ (ಭ. ವೈ. ೭೪ನೇ ಸಂ., ಪ. ೨೭-೪೨) ಚಿತ್ರಿಸಿರುವನು.

೨. ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ದ್ರ. ಸಂ., ಪು. ೭೧.

೩. ಶುಭೋಪಯೋಗದಿಂದ ಪ್ರಾಪ್ತಿಯಾಗುವ **'ಪುಣ್ಯಕರ್ಮಗಳು'**: (೧) ಸಾತಾವೇದನೀಯ, (೨) ತಿರ್ಯಗಾಯುಷ್ಯ, (೩) ಮನುಷ್ಯಾಯುಷ್ಯ, (೪) ದೇವಾಯುಷ್ಯ, (೫) ಮನುಷ್ಯಗತಿ, (೬) ಮನುಷ್ಯಗತಿ ಪ್ರಾಯೋಗ್ಯಾನುಪೂರ್ವ್ಯ, (೭) ದೇವಗತಿ, (೮) ದೇವಗತಿಪ್ರಾಯೋಗ್ಯಾನುಪೂರ್ವ್ಯ, (೯) ಪಂಚೇಂದ್ರಿಯ ಜಾತಿ, ಔದಾರಿಕ, ವೈಕ್ರಿಯಕ, ಆಹಾರಕ, ತೈಜಸ, ಕಾರ್ಮಣ ಶರೀರಗಳೈದು (೯+೫). ಇವುಗಳ ಬಂಧನ ಮತ್ತು ಸಂಘಾತಗಳೈದೈದು (೧೪+೧೦=೨೪), ಔದಾರಿಕ ಆಹಾರಕ ಮತ್ತು ವೈಕ್ರಿಯಕಾಂಗೋಪಾಂಗಗಳು (೨೪+೩=೨೭), ಪ್ರಶಸ್ತವರ್ಣಗಳೈದು, ಪ್ರಶಸ್ತರಸಗಳೈದು (೨೭+೫+೫=೩೭), (೩೮) ಸುಗಂಧ, ಪ್ರಶಸ್ತಸ್ಪರ್ಶಗಳೆಂಟು (೩೮+೮=೪೬), (೪೭) ಸಮಚತುರಸ್ರ ಸಂಸ್ಥಾನ, (೪೮) ವಜ್ರ ವೃಷಭನಾರಾಚ ಸಂಹನನ, (೪೯) ಅಗುರುಲಘು, (೫೦) ಪರಘಾತ, (೫೧) ಉಚ್ಛ್ವಾಸ, (೫೨) ಆತಪ, (೫೩) ಉದ್ಯೋತ, (೫೪) ಪ್ರಶಸ್ತಿವಿಹಾಯೋಗತಿ, (೫೫) ತ್ರಸ, (೫೬) ಬಾದರ, (೫೭) ಪರ್ಯಾಪ್ತಿ, (೫೮) ಪ್ರತ್ಯೇಕಶರೀರ, (೫೯) ಸ್ಥಿರ, (೬೦) ಶುಭ, (೬೧) ಸುಭಗ, (೬೨) ಸುಸ್ವರ, (೬೩) ಆದೇಯ, (೬೪) ಯಶಸ್ಕೀರ್ತಿ, (೬೫) ನಿರ್ಮಾಣ, (೬೬) ತೀರ್ಥಕರ, (೬೭) ಉಚ್ಚಗೋತ್ರ.

೪. ಅಶುಭೋಪಯೋಗದಿಂದ ಲಭ್ಯವಾಗುವ **'ಪಾಪಕರ್ಮಗಳು'**: 'ಜ್ಞಾನಾವರಣ' ೫, 'ದರ್ಶನಾವರಣ'

ದುಃಖವೂ ಪ್ರಾಪ್ತಿಯಾಗುವುದು. ಆದರಿಂದ ಶುಭಾಶುಭಯೋಗಗಳೆರಡೂ ಸಂಸಾರವೃಕ್ಷಕ್ಕೆ ತಾಯ್ಬೇರುಗಳಿದ್ದಂತೆ. ಇವೆರಡನ್ನೂ ತೊರೆದು ಶುದ್ಧೋಪಯೋಗ(ಆತ್ಮನ ಸಹಜಾನಂದಾವಸ್ಥೆ)ವೊಂದನ್ನೇ ಉಳ್ಳವರು ಮಾತ್ರ ಮುಕ್ತರಾಗುವರು. ಆದರೆ 'ಶುದ್ಧೋಪಯೋಗ' ಸಿದ್ಧಿಸುವ ತನಕ ಶುಭೋಪಯೋಗವೇ ಲೇಸು. ಎಂದಿಗೂ ಅಶುಭೋಪಯೋಗ ಲೇಸಲ್ಲ.

ಧ್ಯಾನ

ಜೀವಾದಿ ತತ್ವಗಳಲ್ಲಿ ಯಾವುದಾದರೊಂದು ಕಡೆ ಮನದ ಪರಿಣಾಮವನ್ನೆಲ್ಲ ಕೇಂದ್ರೀಕರಿಸುವುದಕ್ಕೆ ಧ್ಯಾನವೆನ್ನುವರು. ಸ್ಥಿರವಾದ ಪರಿಣಾಮಕ್ಕೆ ಧ್ಯಾನವೆಂದೂ ಚಂಚಲವಾದ ಪರಿಣಾಮಕ್ಕೆ ಅನುಪ್ರೇಕ್ಷೆಯೆಂದೂ ಹೆಸರು. ನಾನು ನನ್ನದು (ಅಹಂಕಾರ ಮಮಕಾರ) ಎಂಬ ಸಂಕಲ್ಪವಿಲ್ಲದೆ ಉದಾಸೀನನಾಗಿ ಧ್ಯಾನಿಸಲು ಸ್ವಸ್ವರೂಪದಲ್ಲಿರುವ ಸಮಸ್ತವಾದ ಜಗತ್ತತ್ವವೂ ಧ್ಯಾನಕ್ಕೆ ವಿಷಯವಾಗಿದೆ. ಇಷ್ಟಾನಿಷ್ಟ ವಸ್ತು ವಿಷಯಕವಾದ ಪರಿಣಾಮದಿಂದ ದುರ್ಧ್ಯಾನವುಂಟಾಗುವುದು. ವಸ್ತುವಿನಲ್ಲಿ ಇಷ್ಟಾನಿಷ್ಟ ಗುಣಗಳಿಲ್ಲ; ಅಜ್ಞಾನಿಯು ಕಲ್ಪಿಸಿಕೊಂಡು ರಾಗದ್ವೇಷ ಪರಿಣಾಮಗಳಿಂದ ಕರ್ಮಗಳನ್ನು ಬಂಧಿಸಿಕೊಳ್ಳುವನು.[೧]

ಉಪನಿಷತ್ತುಗಳಲ್ಲಿ ಯೋಗ:—"ಚಿತ್ತವೃತ್ತಿಗಳ ವೈವಿಧ್ಯತೆ, ಪ್ರಮಾತೃ-ಪ್ರಮೇಯಗಳ ಭೇದ, ಪರಸ್ಪರ ವಿರೋಧಿಯಾದ ಹಾರ್ದಿಕ-ಬೌದ್ಧಿಕ ಭಾವನೆಗಳ ತುಮುಲಯುದ್ಧ—ಇವೆಲ್ಲವೂ ಯೋಗಾಗ್ನಿಯಿಂದ ಶುದ್ಧವಾಗಿ ರೂಪೈಕ್ಯವನ್ನು ಪಡೆಯುತ್ತವೆ. ತನ್ನನ್ನು ಒಯ್ಯುತ್ತಿರುವ ಗುಣಪ್ರವಾಹಗಳಿಂದ ಕಲುಷಿತನಾಗಿ, ಚಿತ್ತಭ್ರಾಂತಿಯಿಂದ ಮೂಢನಾಗಿ, ಈಡೇರದ ಕಾಮಗಳಿಂದ ಹತನಾಗಿ ಸಂಸಾರಿಯು ಅಹಂಕಾರ-ಮಮಕಾರಗಳನ್ನು ಪಡೆದು ತನ್ನನ್ನು ತಾನೇ ಬಂಧಿಸಿಕೊಳ್ಳುತ್ತಾನೆ. ಇಂತಹ ಹುಚ್ಚಾಟಿಕೆಯಿಂದ ಬಿಡುಗಡೆ ಮಾಡಿಕೊಳ್ಳುವುದೇ 'ಪರಮಾಗತಿ'....ಮೈತ್ರೀ ಉಪನಿಷತ್ತಿನಲ್ಲಿ ಪ್ರಾಣಾಯಾಮ[೨], ಪ್ರತ್ಯಾಹಾರ[೩], ಧ್ಯಾನ[೪], ಧಾರಣ[೫], ತರ್ಕ, ಸಮಾಧಿ[೬] ಎಂಬ ಆರು ಅಂಗಗಳಿಂದ ಕೂಡಿದ ಯೋಗವು ಪ್ರತಿಪಾದಿಸಲ್ಪಟ್ಟಿದೆ. ಈ ಉಪನಿಷತ್ತಿನ ಪ್ರಕಾರ ಯೋಗಿಯು ಇಂದ್ರಿಯಗಳಿಂದ ಬಿಡುಗಡೆಯನ್ನು ಪಡೆದು ಆರು ತಿಂಗಳುಗಳಷ್ಟು ಮಾತ್ರ ಯೋಗಭ್ಯಾಸ ಮಾಡಿದರೆ ಅವನು ಯೋಗಸಿದ್ಧಿಯನ್ನು ಪಡೆಯುತ್ತಾನೆ....ಮನಸ್ಸನ್ನು ವಿಷಯಗಳಿಂದ ಸೆಳೆದು ಆತ್ಮದ ಕಡೆ ತಿರುಗಿಸುವುದೇ 'ಅಧ್ಯಾತ್ಮಯೋಗ'[೭]"

ಪಾತಂಜಲದರ್ಶನ:—"ಪಾತಂಜಲದರ್ಶನದಲ್ಲಿ ಪ್ರತಿಪಾದಿತವಾಗಿರುವ ಅಷ್ಟಾಂಗ ಯೋಗವು ಯಾವುದೊಂದು ಆಧ್ಯಾತ್ಮಿಕ ಸಾಧನೆಗೂ ಅವಶ್ಯವಾಗಿರುತ್ತದೆ. ತಮ್ಮ ತಮ್ಮ ದರ್ಶನಗಳಲ್ಲಿ ಉದ್ದಿಷ್ಟವಾಗಿರುವ ತತ್ವವನ್ನು ಸಾಕ್ಷಾತ್ಕರಿಸಲು ಪ್ರತಿಯೊಬ್ಬನೂ ಬಯಸುತ್ತಾನೆ. ಆದರಿಂದ ಪತಂಜಲ ಮಹರ್ಷಿಯ ಯೋಗವು ಎಲ್ಲ ದರ್ಶನಗಳಿಗೂ ಉಪಯೋಗವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ....ಪ್ರಕೃತಿ, ಮಹತ್ತು, ಅಹಂಕಾರ, ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳು, ಮನಸ್ಸು, ಪಂಚತನ್ಮಾತ್ರಗಳು ಮತ್ತು ಭೂತಗಳು ಇವೆಲ್ಲವೂ ಭೌತದ್ರವ್ಯದ ಪ್ರಕಾಶಗಳು. ಮನಸ್ಸಿಗೂ ಮತ್ತು ಕಲ್ಲಿನ ಹೆಂಟೆಗೂ ಇಷ್ಟೇ ಭೇದ. ರಚನಾಪ್ರಕಾರ, ಒಂದು ಸ್ಥೂಲವಾಗಿದ್ದರೆ ಇನ್ನೊಂದು ಸೂಕ್ಷ್ಮವಾಗಿದೆ. ಮನಸ್ಸೂ ಕೂಡ ಭೌತಿಕವಾದುದರಿಂದ ಮನುಷ್ಯನನ್ನು ಬಂಧಿಸಲು ಶರೀರದಷ್ಟೇ ಬಲವತ್ತರವಾಗಿದೆ. ಯೋಗಿಯಾದವನು ಚೈತನ್ಯಕ್ಕೆ ವಿರುದ್ಧವಾದ ವಸ್ತುಗಳನ್ನೆಲ್ಲ ತೊಲಗಿಸಬೇಕು. ಈಶ್ವರ ಮತ್ತು ಜೀವರು ಮಾತ್ರ ಅಪ್ರಾಕೃತ ವಸ್ತುಗಳು.

೯, 'ಮೋಹನೀಯ' ೨೬, 'ಅಂತರಾಯ' ೫, (೫+೯+೨೬+೫=೪೫), (೪೬) ನರಕಗತಿ, (೪೭) ತಿರ್ಯಗ್ಗತಿ, (೪೮) ಏಕದ್ವಿತ್ರಿಚತುರಿಂದ್ರಿಯ (೪೭+೪), 'ಸಂಸ್ಥಾನಗಳು' ೫ 'ಸಂಹನನಗಳು' ೫ (೫೧+೫+೫), ಅಪ್ರಶಸ್ತವರ್ಣ ರಸ ಗಂಧಸ್ಪರ್ಶಗಳು (೬೧+೪), ನರಕತಿರ್ಯಕ್‌ಗತ್ಯಾನುಪೂರ್ವ್ಯಗಳು (೬೫+೨) (೬೮) ಉಪಘಾತ, (೬೯) ಅಪ್ರಶಸ್ತವಿಹಾಯೋಗತಿ, (೭೦) ಸ್ಥಾವರ, (೭೧) ಸೂಕ್ಷ್ಮ, (೭೨) ಅಪರ್ಯಾಪ್ತಿ, (೭೩) ಸಾಧಾರಣಶರೀರ, (೭೪) ಅಶುಭ, (೭೫) ದುರ್ಭಗ, (೭೬) ಅಸ್ಥಿರ, (೭೭) ದುಃಸ್ವರ, (೭೮) ಅನಾಧೇಯ, (೭೯) ಅಸಾತಾವೇದನೀಯ, (೮೦) ನರಕಾಯುಷ್ಯ, (೮೧) ನೀಚಗೋತ್ರ.

ಪುಣ್ಯಕರ್ಮ ೬೭ + ಪಾಪ ಕರ್ಮ ೮೧ = ಒಟ್ಟು ೧೪೮ ಕರ್ಮಪ್ರಕೃತಿಗಳು.

—ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ದ್ರ. ಸಂ., ಪು. ೭೧-೭೨ ಅಥವಾ ಜೈ. ಧ. ಪ್ರ., ಪು. ೯೧-೯೨ (ಸಂ. ಅನಂತರಾವ ಮಂಟಗಣೀಕರ ಮಾಸ್ತರ್.)

೧. ಭಗವಾನ್ ಜಿನಸೇನಾಚಾರ್ಯರು, ಪೂ. ಪು., XXI-೯, ೧೦.

೨. ಪ್ರಾಣಾಯಾಮ:—ಯೋಗಶಾಸ್ತ್ರದಲ್ಲಿ ರೇಚಕ, ಪೂರಕ, ಕುಂಭಕಗಳೆಂಬ ಪ್ರಾಣಾಯಾಮವನ್ನು ತಿಳಿಸಿರುತ್ತದೆ. ಅವುಗಳು ಸಾಮಾನ್ಯ ಜನರಿಗೆ ಮಾತ್ರ ಅನ್ವಯಿಸುವಂತಿದೆ. ವಿವೇಕಿಗಳಿಗೆ ಮಾತ್ರ ಅನಾತ್ಮವೆಲ್ಲವನ್ನೂ ತಮ್ಮ ಸ್ವರೂಪದಿಂದ ಹೊರಗಟ್ಟುವುದೇ ರೇಚಕವು, 'ನಾನಾಬ್ರಹ್ಮ'ವೆಂದರಿಯುತ್ತಿರುವುದೇ ಪೂರಕವು, ಅದನ್ನು ಘಟ್ಟಿಗೊಳಿಸುವುದೇ ಕುಂಭಕವೂ ಆಗಿರುತ್ತದೆ. ಇದೇ ನಿಜವಾದ ಪ್ರಾಣಾಯಾಮವು (ಚಿತ್ತಾದಿ ಸರ್ವಭಾವೇಷು ಬ್ರಹ್ಮತ್ವೇ ನೈವ ಭಾವನಾತ್ | ನಿರೋಧಃ ಸರ್ವವೃತ್ತೀನಾಂ ಪ್ರಾಣಾಯಾಮಃ ಸ ಉಚ್ಯತೇ || ೧೧೮ ||)—ಶ್ರೀ ಮಚ್ಛಂಕರಾಚಾರ್ಯರು, ಅ. ಅ., ಸಂ. ಶ್ರೀ ಹೊಸಕೆರೆ ಅನಂತಮೂರ್ತಿ.

೩. ಪ್ರತ್ಯಾಹಾರ:—ಯೋಗಶಾಸ್ತ್ರದಲ್ಲಿ ತಿಳಿಸಿರುವಂತೆ ವಿಷಯಗಳಿಂದ ಇಂದ್ರಿಯಗಳನ್ನು ಹಿಂತಿರುಗಿಸುವುದೆಂಬ ಪ್ರತ್ಯಾಹಾರವು ನಮಗೆ ಅಷ್ಟು ಮುಖ್ಯವಲ್ಲ. ಆತ್ಮವಸ್ತುವೇ ನಮ್ಮ ಅಜ್ಞಾನಾವಸ್ಥೆಯಲ್ಲಿ ವಿಷಯಗಳ ರೂಪದಲ್ಲಿ ತೋರಿಕೊಳ್ಳುವುದೆಂಬ ತಿಳಿವಳಿಕೆಯೇ ಪ್ರತ್ಯಾಹಾರವೆನಿಸಿಕೊಳ್ಳುತ್ತದೆ–ಅ. ಅ., ಪು. ೫೯.

೪. ಧ್ಯಾನ:—ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳನ್ನು ಅನುಭವಿಸಿ ಮೈಸೋಲುವಂತೆ ಮನಸ್ಸೂ ಕೂಡ ಇಂದ್ರಿಯಗಳಿಗಿಂತಲೂ ಹೆಚ್ಚಿನ ವಿಷಯಗಳನ್ನು ಅನುಭವಿಸುತ್ತ ಗ್ಲಾನಿಗೊಳ್ಳುತ್ತದೆ. ಮನಸ್ಸು ಅನೇಕ ವಿಷಯಗಳಲ್ಲಿ ಓಡಾಡುವುದನ್ನು ಬಿಟ್ಟು ಒಂದೇ ಕಡೆಯಲ್ಲಿ ನೆಲೆನಿಂತರೆ ಸುಖವಾಗುತ್ತದೆ. ಧ್ಯಾನದಲ್ಲಿ ಪರಮಾನಂದರೂಪನಾದ ಪರಮಾತ್ಮನೊಬ್ಬನಲ್ಲಿಯೇ ಮನಸ್ಸನ್ನು ನಿಲ್ಲಿಸುವುದರಿಂದ ಹೆಚ್ಚಿನ ಆನಂದವಾಗುತ್ತದೆ.–ಅ. ಅ., ಪು. ೩೦.

೫. ಧಾರಣ:-ವಿಷಯಗಳ ಸ್ವರೂಪದಿಂದ ಮನಸ್ಸನ್ನು ಹಿಮ್ಮೆಟ್ಟಿಸುವುದೆಂಬ ಪ್ರತ್ಯಾಹಾರವು ಮೈಗೂಡಿದ ಮೇಲೆ ಧಾರಣೆ ಎಂಬುದನ್ನು ಆಶ್ರಯಿಸಬೇಕು. 'ಧಾರಣೆ'ಯೆಂದರೆ ಮನಸ್ಸು ಹರಿದುಹೋದ ಕಡೆಯಲ್ಲೆಲ್ಲ 'ಬ್ರಹ್ಮ'ವೆಂಬುದಾಗಿ ಭಾವಿಸುವುದೇ ಆಗಿದೆ-ಅ. ಅ, ಪು. ೩೦.

೬. ಸಮಾಧಿ:—ಯಾವ ವಿಷಯವನ್ನೂ ಆಲೋಚಿಸದೆ 'ನಾನು ಬ್ರಹ್ಮ'ವೆಂದೊಂದು ಚಿಂತೆಯಲ್ಲಿ ಮಾತ್ರ ಮುಳುಗಿರಬೇಕೆಂದು ಹಿಂದೆಯೇ ತಿಳಿಸಿರುತ್ತದೆ. ಇದೇ ಧ್ಯಾನವೇ 'ನಾನು ಬ್ರಹ್ಮವೊಂದನ್ನೇ ಚಿಂತಿಸುತ್ತಿದ್ದೇನೆ' ಎಂಬುದನ್ನೂ ಕೂಡ ಮರೆಸುವಷ್ಟು ಬಲಿತರೆ ಸಮಾಧಿ ಎನಿಸಿಕೊಳ್ಳುತ್ತದೆ—ಅ. ಅ., ಪು. ೩೦.

೭. ಶ್ರೀ ಸ್ವಾಮೀ ಆದಿದೇವಾನಂದ, 'ಯೋಗರಹಸ್ಯ', ಪ್ರ. ಕ. (೪೧-೩) ಪು. ೬೭-೬೮.

ಯೋಗ ಶಬ್ದವು ಯುಜ್ ಧಾತುವಿನಿಂದ ಬಂದಿದೆ. ಯೋಗವೆಂದರೆ ಸಮಾಧಿಯೆಂದರ್ಥ. ಸಮಾಧಿಯೆಂದರೆ ಚಿತ್ತೈಕಾಗ್ರತೆ.[೧] ಈ ದರ್ಶನದಲ್ಲಿ ಇನ್ನು ಯಾವ ಬೇರೆ ಅರ್ಥವನ್ನು ಕಲ್ಪಿಸಿದರೂ ತಪ್ಪಾಗುತ್ತದೆ.[೨]

ಭಗವದ್ಗೀತೆಯಲ್ಲಿ ಯೋಗ ರಹಸ್ಯ

ಭರತ ಖಂಡದ ನಾನಾ ದರ್ಶನಗಳನ್ನು ಸಮನ್ವಯಗೊಳಿಸಿದ ಪುಣ್ಯಪುರುಷನಾದ ಶ್ರೀಕೃಷ್ಣ ಭಗವಾನ್, ಯೋಗ ಕುಶಲತೆಯನ್ನು ಸರ್ವಾಂಗಸುಂದರವಾಗಿ ನಿರೂಪಿಸಿರುವನು. "'ಎಲೈ ಧನಂಜಯನೆ, ಯೋಗದಲ್ಲಿದ್ದುಕೊಂಡು ಸಂಗವನ್ನು ಬಿಟ್ಟು ಸಿದ್ಧಿ-ಅಸಿದ್ಧಿ ಇವೆರಡರಲ್ಲಿಯೂ ಸಮನಾಗಿದ್ದುಕೊಂಡು ಕರ್ಮಗಳನ್ನು ಮಾಡು. **ಸಮತ್ವವು ಯೋಗವೆನಿಸುವುದು.**' 'ಬುದ್ಧಿಯಿಂದ ಕೂಡಿದವನು ಸುಕೃತ ದುಷ್ಕೃತಗಳೆರಡನ್ನೂ ಇಲ್ಲಿ ಬಿಟ್ಟುಬಿಡುತ್ತಾನೆ. ಆದ್ದರಿಂದ ಯೋಗಕ್ಕೆ ಹೊಂದಿಸಿಕೋ.' **'ಯೋಗವು ಕರ್ಮಗಳಲ್ಲಿ ಕೌಶಲವು.'** 'ಯಾವಾಗ ನಿನ್ನ ಬುದ್ಧಿಯು ಮೋಹ ಕಲಿಲವನ್ನು ದಾಟುವುದೋ ಆಗ ಮುಂದೆ ಕೇಳಬೇಕಾದುದರ ವಿಷಯದಲ್ಲಿಯೂ ಹಿಂದೆ ಕೇಳಿದ್ದರ ವಿಷಯದಲ್ಲಿಯೂ ನಿರ್ವೇದವನ್ನು ಪಡೆಯುವೆ.'

೧. "ಚಿತ್ತಕ್ಕೆ ಐದು ಭೂಮಿಗಳಿವೆ. ಇವುಗಳಲ್ಲಿ ಮೊದಲನೆಯದು ಕ್ಷಿಪ್ತ. ಕ್ಷಿಪ್ತವೆಂದರೆ ಚಂಚಲತೆ. ಇದು ಸಂಸಾರಿಗಳನ್ನೆಲ್ಲ ವ್ಯಾಪಿಸಿರುತ್ತದೆ. ಈ ಅವಸ್ಥೆಯಲ್ಲಿ ರಜೋಗುಣವು ಮನಸ್ಸನ್ನು ಆಯಾ ವಿಷಯಗಳಲ್ಲಿ ಸದಾ ಎಸೆಯುತ್ತಿರುತ್ತದೆ. ಎರಡನೆಯ ಅವಸ್ಥೆಯು ಮೂಢ; ತಮೋಗುಣ ಪ್ರಧಾನವಾದ ಈ ಅವಸ್ಥೆಯು ನಿದ್ರಾವಸ್ಥೆಯಿಂದ ತುಂಬಿರುತ್ತದೆ. ಮೂರನೆಯದು ವಿಕ್ಷಿಪ್ತ; ಈ ಅವಸ್ಥೆಯಲ್ಲಿ ಮನಸ್ಸು ಚಂಚಲವಾಗಿದ್ದರೂ ಆಗಾಗ ಸ್ಥಿರತೆಯನ್ನು ಹೊಂದುತ್ತದ. ನಾಲ್ಕನೆಯದು ಏಕಾಗ್ರ; ಈ ಅವಸ್ಥೆಯಲ್ಲಿ ಮನಸ್ಸು ಒಂದೇ ವಿಷಯವನ್ನು ಕುರಿತು ಏಕಾಗ್ರತೆಯನ್ನು ಪಡೆಯಬಹುದು. ಐದನೆಯದು ನಿರುದ್ಧ; ಈ ಅವಸ್ಥೆಯಲ್ಲಿ ಸಕಲವೃತ್ತಿಗಳೂ ನಿರುದ್ಧವಾಗಿ ಸಂಸ್ಕಾರಮಾತ್ರವಾಗಿರುತ್ತವೆ. ಕ್ಷಿಪ್ತ-ವಿಕ್ಷಿಪ್ತ-ಮೂಢಗಳಲ್ಲಿ ಯೋಗ ಅಥವಾ ಚಿತ್ತೈಕಾಗ್ರತೆಯು ಸಾಧ್ಯವಾಗುವುದಿಲ್ಲ. ಏಕಾಗ್ರದಲ್ಲಿ ಉತ್ಪನ್ನವಾಗುವ ಯೋಗವು ವಸ್ತುಗಳ ಸ್ವರೂಪವನ್ನು ಪ್ರಕಾಶಿಸಿ, ಕ್ಲೇಶಗಳನ್ನು ನಾಶಮಾಡಿ, ಕರ್ಮಬಂಧನಗಳನ್ನು ಸಡಿಲಿಸಿ, ನಿರುದ್ಧಾವಸ್ಥೆಯನ್ನು ಹೊಂದುವಂತೆ ಮಾಡುತ್ತದೆ. ಈ ಅವಸ್ಥೆಗೆ **'ಸಂಪ್ರಜ್ಞಾತ ಸಮಾಧಿ'** ಎಂದು ಹೆಸರು. ಸಂಪ್ರಜ್ಞಾತ ಸಮಾಧಿಯು ವಿತರ್ಕ, ವಿಚಾರ, ಆನಂದ, ಅಸ್ಮಿತಾ ಇವುಗಳಿಂದ ಕೂಡಿರುತ್ತದೆ. ಸಮಸ್ತ ವೃತ್ತಿಗಳೂ ನಿರುದ್ಧವಾದರೆ 'ಅಸಂಪ್ರಜ್ಞಾತ ಸಮಾಧಿ'ಯಾಗುವುದು. ಚಿತ್ತಕ್ಕೆ ಪ್ರಖ್ಯ (ಪ್ರಕಾಶ), ಪವೃತ್ತಿ, ಸ್ಥಿತಿ ಎಂಬ ಮೂರು ಗುಣಗಳಿವೆ. ಚಿತ್ತದ ಸತ್ವಗುಣವು ಪ್ರಖ್ಯಾರೂಪದಲ್ಲಿದೆ; ಆದರೆ ಸತ್ವವು ರಜಸ್ತಮೋಗುಣಗಳೊಡನೆ ಸೇರಿರುವಾಗ ಐಶ್ವರ್ಯ ವಿಷಯಗಳಿಂದ ಆಕರ್ಷಿಸಲ್ಪಡುತ್ತದೆ; ಇದು ಚಿತ್ತದ ವಿಕ್ಷಿಪ್ತಾವಸ್ಥೆ. ಹಾಗೆಯೇ ಸತ್ವವು ತಮಸ್ಸಿನೊಂದಿಗೆ ಸೇರಿರುವಾಗ ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಇವುಗಳ ಕಡೆಗೆ ಹೋಗುತ್ತದೆ. ಇದು ಚಿತ್ತದ ಕ್ಷಿಪ್ತ ಮೂಢಾವಸ್ಥೆಗಳು. ಅದೇ ಸತ್ವವು ಮೋಹಾವರಣವು ಕ್ಷೀಣವಾಗಿರುವಾಗ, ರಜೋಮಾತ್ರದಿಂದ ಆವರಿಸಲ್ಪಟ್ಟು ಸರ್ವತಃ ಪ್ರಕಾಶಿಸುತ್ತ ಧರ್ಮ ಜ್ಞಾನ ವೈರಾಗ್ಯೈಶ್ವರ್ಯಗಳ ಕಡೆಗೆ ಹೋಗುತ್ತದೆ. ಕೊನೆಗೆ ಚಿತ್ತವು ರಜೋಲೇಶವನ್ನೂ ಕಳೆದುಕೊಂಡಿರುವಾಗ ಸ್ವರೂಪ ಪ್ರತಿಷ್ಠೆಯನ್ನು ಹೊಂದಿ ಪ್ರಕೃತಿಪುರುಷರ ಭೇದವನ್ನೂ ಅರಿತುಕೊಂಡು ಧರ್ಮಮೇಘವೆಂಬ ಧ್ಯಾನದ ಕಡೆ ಹೋಗುತ್ತದೆ—'ಯೋಗರಹಸ್ಯ', ಪ್ರ. ಕ., (೪೧-೩) ಪು. ೭೦.

೨. 'ಯೋಗರಹಸ್ಯ', ಪ್ರ. ಕ., (೪೧-೪), ಪು. ೭೧.

'ಶ್ರುತಿ ವಿಪ್ರತಿಪನ್ನವಾಗಿರುವ ನಿನ್ನ ಬುದ್ಧಿಯು ಯಾವಾಗ ಸಮಾಧಿಯಲ್ಲಿ ನಿಶ್ಚಲವಾಗಿ ಅಲುಗಾಡದೆ ನಿಂತುಕೊಳ್ಳುವುದೋ ಆಗ ಯೋಗವನ್ನು ಪಡೆಯುವೆ.'[೧]" "ಸಂಕಲ್ಪ ಪ್ರಭವಗಳಾದ ಕಾಮಗಳನ್ನು ಒಂದೂ ಉಳಿಯದಂತೆ ಎಲ್ಲವನ್ನೂ ಬಿಟ್ಟು ಮನಸ್ಸಿನಿಂದಲೇ ಇಂದ್ರಿಯ ಗ್ರಾಮವನ್ನು ಎಲ್ಲಾ ಕಡೆಯಿಂದ ನಿಯಮಕ್ಕೆ ತಂದುಕೊಂಡು ಧೃತಿಯಿಂದ ಹಿಡಿದ ಬುದ್ಧಿಯಿಂದ ಮೆಲ್ಲಮೆಲ್ಲನೆ ಹಿಂದಿರುಗಬೇಕು. ಮನಸ್ಸನ್ನು ಆತ್ಮಸಂಸ್ಥವಾಗಿ ಮಾಡಿಕೊಂಡು ಏನನ್ನೂಚಿಂತಿಸದೆ ಇರಬೇಕು.[೨]"

ಜೈನದರ್ಶನದಲ್ಲಿ ಧ್ಯಾನದ ಸ್ವರೂಪ[೩]

ಆಧ್ಯಾತ್ಮಜ್ಞಾನಿಯಾದ ಮುನಿಯು ತನ್ನ ಜ್ಞಾನದೃಷ್ಟಿಯನ್ನು ಬಾಹ್ಯ ಪದಾರ್ಥಗಳ ಸಮೂಹದಿಂದ ತಪ್ಪಿಸಿ ಆತ್ಮನ ಕಡೆ ತಿರುಗಿಸಿ ತನ್ನ ಸ್ಮರಣೆಯನ್ನು ಆತ್ಮನಲ್ಲಿ ಸ್ಥಿರವಾಗಿರಿಸಿ ಧ್ಯಾನ ಮಾಡಬೇಕು.

ಧರ್ಮಧ್ಯಾನ:—ಒಂದೇ ವಸ್ತುವಿನಲ್ಲಿ ಸ್ಥಿರವೂ ಪ್ರಶಸ್ತವೂ ಆದ ಏಕಾಗ್ರ ಪರಿಣಾಮವೇ ಮುಕ್ತಿಗೆ ಸಾಧನವಾದ ಧ್ಯಾನವಾಗಿದೆ. ಧರ್ಮದಿಂದ ಚ್ಯುತನಾಗದಿರುವ ಪರಿಣಾಮಕ್ಕೆ 'ಧರ್ಮಧ್ಯಾನ'ವೆಂದು ಹೆಸರು. ಉತ್ಪತ್ತಿ, ನಾಶ, ಸ್ಥಿರತ್ವ ಈ ಮೂರರಿಂದ ಕೂಡಿದ ವಸ್ತುವಿನ ನಿಜವಾದ ಸ್ವರೂಪಕ್ಕೆ 'ಧರ್ಮ'ವೆಂದು ಹೆಸರು. ಈ ಧರ್ಮಧ್ಯಾನವು ಆಜ್ಞಾವಿಚಯ, ಅಪಾಯವಿಚಯ, ಸಂಸ್ಥಾನವಿಚಯ, ವಿಪಾಕವಿಚಯವೆಂದು ನಾಲ್ಕು ಬಗೆಯಾಗಿದೆ. ಜಿನೇಂದ್ರವಾಣಿ ಪ್ರಮಾಣವೆಂದು ನಂಬಿ ಧರ್ಮಾಸ್ತಿಕಾಯ ಮೊದಲಾದ ಪದಾರ್ಥಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆ ಧ್ಯಾನ ಮಾಡಿದರೆ 'ಆಜ್ಞಾವಿಚಯ' ಧ್ಯಾನವಾಗುವುದು. ಜನ್ಮಜರಾ ಮರಣ ಅಥವ ರಾಗ, ದ್ವೇಷ, ಮೋಹಗಳಿಂದ ಕೂಡಿದ ಭವಸಾಗರ, ಅಪಾಯದಾಗರವೆಂದು ಚಿಂತಿಸಿದರೆ 'ಅಪಾಯವಿಚಯ' ಧ್ಯಾನವಾಗುವುದು. ಶುಭಾಶುಭ ಕರ್ಮಗಳ ಪರಿಪಾಕದಿಂ

೧. "....'ಇದು ಮೇಮತತ್ ಸಿದ್ಧ್ಯ ಸಿದ್ಧ್ಯೋಃ ಸಮತ್ವಂ ಯೋಗಃ ಉಚ್ಯತೇ,' '....ಸ್ವಧರ್ಮಾಖ್ಯೇಷು ಕರ್ಮಸು ವರ್ತಮಾನಸ್ಯ ಯಾ ಸಿದ್ಧ್ಯ ಸಿದ್ಧ್ಯೋಃ ಸಮತ್ವ ಬುದ್ಧಿಃ ಈಶ್ವರಾರ್ಪಿತ ಚೇತಸ್ತಯಾ ತತ್ ಕೌಶಲಂ ಕುಶಲಭಾವಃ | ತದ್ ಹಿ ಕೌಶಲಂ ಯದ್ ಬನ್ಧ ಸ್ವಭಾವಾನ್ಯಪಿ ಕರ್ಮಾಣಿ ಸಮತ್ವ ಬುದ್ಧ್ಯಾ ಸ್ವಭಾವಾತ್ ನಿವರ್ತಂತೇ | ತಸ್ಮಾತ್ ಸಮತ್ವ ಬುದ್ಧಿಯುಕ್ತಃ ಭವ ತ್ವಮ್ ||' '....ತದಾ ಶ್ರೋತವ್ಯಂ ಶ್ರುತಿಂ ಚತೇನಿಷ್ಫಲಂ ಪ್ರತಿಭಾತಿ ಇತ್ಯಭಿಪ್ರಾಯಃ |' '....ಅಚಲಾ ತತ್ರಾಪಿ ವಿಕಲ್ಪ ವರ್ಜಿತಾ ಇತ್ಯೇತತ್ | ಬುದ್ಧಿಃ ಅನ್ತಃಕರಣಮ್ ತದಾ ತಸ್ಮಿನ್ ಕಾಲೇ ಯೋಗಮ್ ಅವಾಪ್ಸ್ಯಸಿ ವಿವೇಕ ಪ್ರಜ್ಞಾಂ ಸಮಾಧಿಂ ಪ್ರಾಪ್ಸ್ಯಸಿ'"–ಶಂ. ಭಾ., ಭ. ಗೀ.(ಸಂ. ಶ್ರೀ ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ) II ೪೮, ೫೦, ೫೨, ೫೩.

೨. ....ಆತ್ಮ ಸಂಸ್ಥಮ್ ಆತ್ಮನಿ ಸಂಸ್ಥಿತಮ್ .'ಆತ್ಮೈವ ಸರ್ವಂ ನ ತತೋಽನ್ಯತ್ ಕಿಂಚಿತಸ್ತಿ' ಇತ್ಯೇವಮ್ ಆತ್ಮಸಂಸ್ಥಮ್ ಮನಃಕೃತ್ವಾ ನ ಕಿಂಚಿದಪಿ ಚಿತ್ತಯೇತ್ | ವಿಷ ಯೋಗಸ್ಯಪರಮೋಽವಧಿಃ | –ಶಂ. ಭಾ., ಭ. ಗೀ. VI ೨೪-೨೫.

೩. ಜೈನ ದರ್ಶನದಲ್ಲಿ ಆತ್ಮೋನ್ನತಿಗೆ ಸಾಧಕವಾದ ಧ್ಯಾನವನ್ನು ಧರ್ಮಧ್ಯಾನ (ಸವಿಕಲ್ಪ ಸಮಾಧಿ) ಮತ್ತು ಶುಕ್ಲಧ್ಯಾನ(ನಿರ್ವಿಕಲ್ಪ ಸಮಾಧಿ)ವೆಂದು ವಿಭಾಗಿಸಿಕೊಂಡಿರುವರು. ಆತ್ಮಘಾತಕವಾದ ಧ್ಯಾನವನ್ನು ಆರ್ತ ಮತ್ತು ರೌದ್ರ ಧ್ಯಾನಗಳೆಂದು ಕರೆದಿರುವರು.

ದುಂಟಾದ ಭವವನ್ನೂ ಅದರ ವೈವಿಧ್ಯತೆಯನ್ನೂ ಚಿಂತಿಸಿದಾಗ 'ವಿಪಾಕವಿಚಯ' ಧ್ಯಾನವಾಗುವುದು. ಲೋಕಾಕಾರವನ್ನು ಚಿಂತಿಸುವಾಗ 'ಸಂಸ್ಥಾನವಿಚಯ' ಧರ್ಮ ಧ್ಯಾನವಾಗುವುದು. ಪ್ರಸನ್ನವಾದ ಮುಖಭಾವವೂ, ಸೌಮ್ಯದೃಷ್ಟಿಯೂ, ಧರ್ಮ ಧ್ಯಾನದ ಬಾಹ್ಯ ಚಿಹ್ನೆಗಳಾಗಿವೆ.[೧] ಧರ್ಮ ಧ್ಯಾನವನ್ನು ಪದಸ್ಥ, ಪಿಂಡಸ್ಥ, ರೂಪಸ್ಥ, ರೂಪಾತೀತವೆಂದೂ ವಿಭಾಗಿಸುವರು.

ಶುಕ್ಲಧ್ಯಾನ:—ಶುಕ್ಲಧ್ಯಾನವು ಮುಕ್ತಿಗೆ ಸಾಧನವಾದುದು. ಆ ಧ್ಯಾನವು ಪರಮಾಗಮದಲ್ಲಿ 'ಶುಕ್ಲ'ವೆಂದೂ 'ಪರಮಶುಕ್ಲ'ವೆಂದೂ ಎರಡು ತೆರವಾಗಿದೆ. ಮೊದಲನೆಯದು 'ಛದ್ಮಸ್ಥ[೨]'ರಿಗೂ ಎರಡನೆ ಧ್ಯಾನವು ಕೇವಲಿಗಳಿಗೂ ಉಂಟಾಗುವುದು.

ಶುಕ್ಲಧ್ಯಾನವನ್ನೂ ಧರ್ಮಧ್ಯಾನದಂತೆ ನಾಲ್ಕು ವಿಭಾಗ ಮಾಡಿರುವರು. 'ಪೃಥಕ್ತ್ವವಿತರ್ಕ ವಿಚಾರ,' 'ಏಕತ್ವವಿತರ್ಕ ವಿಚಾರ' (ಇವೆರಡೂ ಛದ್ಮಸ್ಥರ ಧ್ಯಾನ), 'ಸೂಕ್ಷ್ಮಕ್ರಿಯಾ ಪ್ರತಿಪಾತಿ' ಮತ್ತು 'ವ್ಯುಪರತಕ್ರಿಯಾನಿವರ್ತಿ'(ಕೊನೆಯೆರಡು ಬಗೆ ಧ್ಯಾನಗಳೂ ಕೇವಲಿಗಳಿಗೆ ಮಾತ್ರವುಂಟಾಗುವುವು)ಗಳೆಂದು ನಾಲ್ಕು ಬಗೆ. ಇದರಲ್ಲಿ ಮೊದಲನೆಯದು ಮನ, ವಚನ, ಕಾಯಗಳ ಮೂರು ಯೋಗದಿಂದ ಉಂಟಾಗುತ್ತದೆ. ಎರಡನೆಯದು ಕೇವಲ ಒಂದೇ ಯೋಗವಿದ್ದರೆ ಉಂಟಾಗುತ್ತದೆ. ಮೂರನೆಯದು ಕಾಯಯೋಗವೊಂದಿದ್ದರೆ ಆಗುತ್ತದೆ (ಸಯೋಗ ಕೇವಲಿಗೆ ಆಗುವ ಧ್ಯಾನ), ನಾಲ್ಕನೆಯದು ಯೋಗರಹಿತನಾದ ಅಯೋಗ ಕೇವಲಿಗೆ ಮಾತ್ರ ಉಂಟಾಗುವುದು.[೩] ತನ್ನ ಶುದ್ಧ ಸ್ವರೂಪದಲ್ಲೇ ಮುಳುಗಿಹೋಗುವ ಧ್ಯಾನಾವಸ್ಥೆಗೆ ಪರಮಧ್ಯಾನ, ದಿವ್ಯಕಳೆ, ಪರಮಹಂಸ ಸ್ವರೂಪ, ಪರಬ್ರಹ್ಮಸ್ವರೂಪ, ಶುದ್ಧಾತ್ಮಾನುಭೂತಿ, ಪರಮಸಮಾಧಿ ಮುಂತಾದ ಹೆಸರುಗಳಿವೆ.

ಅಶುಭಧ್ಯಾನ[೪]:—ಅಶುಭ ಪರಿಣಾಮದಿಂದ ಅಶುಭ ಸಂಕಲ್ಪದಿಂದ ಮೊಳೆವ ಧ್ಯಾನಕ್ಕೆ ಅಶುಭಧ್ಯಾನವೆನ್ನುವರು. ಇದನ್ನು ಆರ್ತಧ್ಯಾನ, ರೌದ್ರಧ್ಯಾನವೆಂದು ವಿಭಾಗಿಸಿರುವರು.

ಆರ್ತಧ್ಯಾನ:—ಇದು ಮತ್ತೆ ನಾಲ್ಕು ವಿಭಾಗವಾಗಿದೆ. (೧) ಅನಿಷ್ಟ ಸಂಯೋಗಜ (ಬರಬಾರದ್ದು ಬಂದಾಗ ನೋಯುವುದು), (೨) ಇಷ್ಟವಿಯೋಗಜ (ಪ್ರೀತಿಪಾತ್ರವಾದುದು ಕಳೆದುಹೋದಾಗ ಆಗುವ ಸಂಕಟ), (೩) ರೋಗಜನಿತ (ರೋಗಕ್ಕೆ ತುತ್ತಾದಾಗ ಚಿಂತಿಸುವುದು); (೪) ನಿದಾನಜನಿತ (ಅದುಬೇಕು ಇದುಬೇಕು ಎಂದು ಹಗಲು ಕನಸು ಕಾಣುವುದು). ಈ ಸಂದರ್ಭಗಳಲ್ಲಿ ಪಾಪಕರ್ಮಗಳ ಬಂಧವಾಗಿ ಜೀವಿ ತನ್ನ ಅಧೋಗತಿಗೆ ತಾನೇ ದಾರಿ ಮಾಡಿಕೊಳ್ಳುವನು. ಈ ಧ್ಯಾನದಿಂದ ತಿರ್ಯಗ್ಗತಿಗೆ ಗುದ್ದಲಿಪೂಜೆಯೆಸಗಿದಂತಾಗುವುದು.

---

೧. ಭಗವಾನ್ ಜಿನಸೇನಾಚಾರ್ಯರು, ಪೂ. ಪು., XXI-೧೫೦-೧೫೮ (ಸಂ. ಎ. ಶಾಂತಿರಾಜ ಶಾಸ್ತ್ರಿಗಳು).

೨. ೮ನೇ ಗುಣಸ್ಥಾನ(ಅಪೂರ್ವಕರಣ)ದಿಂದ ೧೨ನೇ ಗುಣಸ್ಥಾನಗಳೊಳಗಿರುವ ಸಾಧಕರಿಗೆ ಛದ್ಮಸ್ಥರೆಂದು ಹೆಸರು.

೩. ಪೂ. ಪು., XXI-೧೮೭-೮೮.

೪. ರ. ಕ. ಶ್ರಾ., ಪು. ೫೧೩ (ಸಂ. ಶ್ರೀ ಮಿರ್ಜಿ ಅಣ್ಣಾರಾಯರು).

೫. ದ್ರ. ಸಂ., ಪು. ೮೬-೮೭ ಮತ್ತು ರ. ಕ. ಶ್ರಾ., ಪು. ೪೯೯-೪೪೨.

ರೌದ್ರಧ್ಯಾನ:—ಇದರಲ್ಲೂ ನಾಲ್ಕು ಬಗೆಯಿವೆ. (೧) ಹಿಂಸಾನಂದ—ಅನ್ಯ ಜೀವಿಗಳಿಗೆ ನೋವಿತ್ತು ಹರ್ಷಿಸುವುದು; (೨) ಮೃಷಾನಂದ—ಸುಳ್ಳು ಹೇಳಿ ತನ್ನ ಬುದ್ಧಿವಂತಿಕೆಗೆ ತಾನೇ ಮೆಚ್ಚಿಕೊಳ್ಳುವುದು; (೩) ಸ್ತೇಯಾನಂದ—ಕದ್ದು ಆನಂದ ಪಡುವುದು; (೪) ಸಂರಕ್ಷಣಾನಂದ—ಪ್ರಾಣಿಗಳನ್ನು ಬಂಧನದಲ್ಲಿಟ್ಟು ಸಂರಕ್ಷಿಸಿ ನಲಿಯುವುದು. ರೌದ್ರಧ್ಯಾನದಿಂದ ನರಕದ ಹೆಬ್ಬಾಗಿಲನ್ನು ಜೀವಿ ಕೈಯಾರೆ ತಾನೇ ತೆರೆದಂತಾಗುವುದು!

ಗುಣಸ್ಥಾನಗಳು ಮತ್ತು ಆತ್ಮವಿಕಾಸ

ಒಟ್ಟು ಗುಣಸ್ಥಾನಗಳ ಸಂಖ್ಯೆ ಹದಿನಾಲ್ಕು.[೧] ಜೀವ ತನ್ನ ಸ್ವಸ್ವರೂಪದಲ್ಲಿ ನೆಲೆಗೊಳ್ಳಬೇಕಾದರೆ ತನ್ನನ್ನಾವರಿಸಿಕೊಂಡು ಹರಿದುಮುಕ್ಕುತ್ತಿರುವ ಅನ್ಯಪುದ್ಗಲಗಳಿಂದ ಪಾರಾಗಬೇಕು. ಹದಿನಾಲ್ಕು ಗುಣಸ್ಥಾನಗಳಲ್ಲೂ ನಡೆವ ಆತ್ಮದ ಹಾಗೂ ಕರ್ಮಗಳ ಹಣಾಹಣಿಯ ಹೋರಾಟ, ದರ್ಶನ ಜ್ಞಾನ ಚಾರಿತ್ರಗಳು ಸಮಪಾಕವಾಗಿ ಸಾಮರಸ್ಯವನ್ನು ಪಡೆವ ದಿವ್ಯದೃಶ್ಯವಾಗಿದೆ.

ಮೋಹ ಮತ್ತು ಯೋಗ[೩] ಇವುಗಳ ನಿಮಿತ್ತದಿಂದ ಸಮ್ಯಗ್ದರ್ಶನಜ್ಞಾನ ಚಾರಿತ್ರರೂಪಿ ಆತ್ಮದ ಗುಣಗಳ ತಾರತಮ್ಯರೂಪಿ ಅವಸ್ಥೆಗೆ ಗುಣಸ್ಥಾನವೆನ್ನುವರು. ಮೋಹ ಮತ್ತು ಯೋಗಗಳ ವಿನ್ಯಾಸಕ್ಕನುಗುಣವಾಗಿ ಗುಣಸ್ಥಾನಗಳೇರ್ಪಡುವುವು. ಮೊದಲನೆ ನಾಲ್ಕು ಗುಣಸ್ಥಾನಗಳಿಗೆ ದರ್ಶನ ಮೋಹನೀಯದ ಏರಿಳಿತ ಕಾರಣವಾದರೆ ಮುಂದಿನೆಂಟು ಗುಣಸ್ಥಾನಗಳಿಗೆ ಚಾರಿತ್ರಮೋಹನೀಯದ ಏರಿಳಿತ ನಿಮಿತ್ತವಾಗಿದೆ. ಯೋಗದ ನಿಮಿತ್ತದಿಂದ ಹದಿಮೂರು ಮತ್ತು ಹದಿನಾಲ್ಕನೆ ಗುಣಸ್ಥಾನಗಳೇರ್ಪಡುವುವು.

(ಮಿಥ್ಯಾದೃಷ್ಟಿ) ಮೊದಲನೆ ಗುಣಸ್ಥಾನವು ದರ್ಶನಮೋಹನೀಯ ಕರ್ಮೋದಯದಿಂದ ಪ್ರಾಪ್ತವಾಗುವುದು. ಇಲ್ಲಿರುವ ಜೀವಿಗೆ ನಿಜವಾದ ಧರ್ಮದ ಕಡೆ ಶ್ರದ್ಧೆಯುಂಟಾಗುವುದಿಲ್ಲ. ನಾಲ್ಕನೆ ಗುಣಸ್ಥಾನದಲ್ಲಿ ಪ್ರಥಮ ಉಪಶಮ ಸಮ್ಯಕ್ತ್ವದ ಅವಸ್ಥೆಯಲ್ಲಿ ಯಾವುದಾದರೊಂದು ಅನಂತಾನುಬಂಧಿ ಕಷಾಯ ಉದಯಿಸಿ ಜೀವಿಯ ಸಮ್ಯಕ್ತ್ವವನ್ನು ನಾಶಮಾಡುವುದು.[೪] ಆಗ ಅವನು ಅನಿವಾರ್ಯವಾಗಿ ಕೆಳಗಿಳಿಯುವನು. ಈ ಅವಸ್ಥೆಗೆ 'ಸಾಸಾದನ ಗುಣ

---

೧. ವಿವರಣೆ ಬೇಕಾದವರು ಗೋ. ಸಾ., ಪು. ೪-೩೦ ನೋಡಬಹುದು (ಪ. ೮-೬೯.)

೨. (೧) ಮಿಥ್ಯಾದೃಷ್ಟಿ, (೨) ಸಾಸಾದನ, (೩) ಮಿಶ್ರ (ಸಮ್ಯಗ್‌ಮಿಥ್ಯಾದೃಷ್ಟಿ), (೪) ಅವಿರತ ಸಮ್ಯಗ್‌ದೃಷ್ಟಿ, (೫) ದೇಶವಿರತ, (೬) ಪ್ರಮತ್ತವಿರತ, (೭) ಅಪ್ರಮತ್ತವಿರತ, (೮) ಅಪೂರ್ವಕರಣ, (೯) ಅನಿವೃತ್ತಿಕರಣ, (೧೦) ಸೂಕ್ಷ್ಮಸಾಂಪರಾಯ, (೧೧) ಉಪಶಾಂತಮೋಹ, (೧೨) ಕ್ಷೀಣಮೋಹ, (೧೩) ಸಯೋಗಕೇವಲಿ, (೧೪) ಅಯೋಗಕೇವಲಿ.

೩. ಪುದ್ಗಲವಿಪಾಕಿ ಶರೀರ ಹಾಗೂ ಅಂಗೋಪಾಂಗವೆಂಬ ನಾಮಕರ್ಮದ ಉದಯದಿಂದ ಮತ್ತು ಮನೋವರ್ಗಣ, ವಚನವರ್ಗಣ, ಕಾಯವರ್ಗಣ ಇವುಗಳ ಅವಲಂಬನದಿಂದ ಕರ್ಮನೋಕರ್ಮ ಗ್ರಹಣ ಮಾಡುವ ಜೀವಿಯ ಶಕ್ತಿ ವಿಶೇಷಕ್ಕೆ ಭಾವಯೋಗ ಎನ್ನುವರು. ಇದೇ ಭಾವಯೋಗದ ನಿಮಿತ್ತದಿಂದ ಆತ್ಮಪ್ರದೇಶವು ಚಂಚಲವಾದರೆ ಅದಕ್ಕೆ ದ್ರವ್ಯಯೋಗ ಎನ್ನುವರು—ಜೈ. ಧ. ಪ್ರ., ಪು. ೧೩೭.

೪. ಸಮ್ಯಕ್ತ್ವದಲ್ಲಿ ಮೂರು ಭೇದಗಳು. ಉಪಶಮ, ಕ್ಷಾಯಿಕ ಮತ್ತು ಕ್ಷಾಯೋಪಶಮಿಕ. ದರ್ಶನಮೋಹ

ಸ್ಥಾನ'ವೆನ್ನುವರು. ಸಮ್ಯಗ್ ಮಿಥ್ಯಾತ್ವ ಪ್ರಕೃತಿಗಳುದಯದಿಂದ ಕೆಳಗಿಳಿದರೆ ಪ್ರಾಪ್ತವಾಗುವ ಅವಸ್ಥೆಗೆ 'ಮಿಶ್ರಗುಣಸ್ಥಾನ'ವೆನ್ನುವರು. ಇಲ್ಲಿಯ ಪರಿಣಾಮವನ್ನು ಮಿಥ್ಯಾತ್ವವೆಂದು ಹೇಳಲಿಕ್ಕೂ ಬಾರದು, ಅಂತೆ ಸಮ್ಯಕ್ತ್ವವೆಂದೂ ಹೇಳಲಿಕ್ಕೆ ಬಾರದು. ಅಂತು ಬೆಲ್ಲದಲ್ಲಿ ಮೊಸರು ಕಲೆಸಿದಂತೆ ಒಂದು ರೀತಿಯ ಮಿಶ್ರಪರಿಣಾಮವಿರುತ್ತದೆ. ಸಾಸಾದನ ಮತ್ತು ಮಿಶ್ರಗುಣಸ್ಥಾನಗಳು ಏರುವ ಜೀವಿಗಲ್ಲ ಆದರೆ ಇವು ಇಳಿಯುವ ಜೀವಿಗೆ ಮಾತ್ರ. (ಅವಿರತ ಸಮ್ಯಗ್ ದೃಷ್ಟಿ) ನಾಲ್ಕನೆ ಗುಣಸ್ಥಾನದಿಂದ ಜೀವಿಯ ಚೇತನ ಊರ್ಧ್ವಮುಖಿಯಾಗುವುದು. ಈ ಗುಣಸ್ಥಾನವರ್ತಿಜೀವ ಜಿನವಾಣಿಯನ್ನು ನಂಬಿದರೂ ಅದರಂತೆ ಆಚರಿಸುವ ದೃಢನಿರ್ಧಾರ ಮಾಡುವುದಿಲ್ಲ. (ದೇಶವಿರತಿ) ಐದನೇ ಗುಣಸ್ಥಾನದಿಂದ ವ್ರತ ನಿಯಮಗಳನ್ನು ಪಾಲಿಸಲು ಪ್ರಾರಂಭವಾಗುವುದು. ಆದರೆ ಆ ಸ್ಥಾನದಲ್ಲಿದ್ದುಕೊಂಡು ಮಹಾವ್ರತಿಯಾಗಲಾರರು.[೧] ಅಣುವ್ರತಗಳನ್ನು ಚೆನ್ನಾಗಿ ಪರಿಪಾಲಿಸಬಹುದು.

'ಸಾಧು'ವೆನಿಸಬೇಕಾದರೆ ಆರನೇ ಗುಣಸ್ಥಾನಕ್ಕಾದರೂ 'ಪ್ರಮತ್ತವಿರತ' ಏರಿ ಬರಬೇಕು. ಇಲ್ಲಿ ಮಹಾವ್ರತಧಾರಿಯಾಗಬಹುದು.[೨] ಏಳನೇ ಗುಣಸ್ಥಾನದಲ್ಲಿ (ಅಪ್ರಮತ್ತವಿರತ) ಸಾಧು ತನ್ನ ಸಂಯಮವನ್ನು ಸೊಗಸಾಗಿ ಪಾಲಿಸಿ ಭೇದವಿಜ್ಞಾನಿಯಾಗಿ ಶ್ರೇಣಿಯನ್ನಡರಲು ಉದ್ಯುಕ್ತನಾಗುವನು.[೩]

ನೀಯದ ಮೂರು ಪ್ರಕೃತಿಗಳು ಅನಂತಾನುಬಂಧಿಯ ನಾಲ್ಕು ಪ್ರಕೃತಿಗಳು ಉಪಶಮವಾದಾಗ 'ಉಪಶಮ ಸಮ್ಯಕ್ತ್ವ', ಈ ಏಳು ಪ್ರಕೃತಿಗಳು ಕ್ಷಯವಾದಾಗ 'ಕ್ಷಾಯಿಕಸಮ್ಯಕ್ತ್ವ', ಆರು ಪ್ರಕೃತಿಗಳ ಅನುದಯ ಮತ್ತು ಸಮ್ಯಕ್ತ್ವ ಪ್ರಕೃತಿ ನಾಮಕ ಮಿಥ್ಯಾತ್ವದ ಉದಯದಿಂದ 'ಕ್ಷಾಯೋಪಶಮಿಕಸಮ್ಯಕ್ತ್ವ'. ಉಪಶಮ ಸಮ್ಯಕ್ತ್ವದಲ್ಲಿ ಪ್ರಥಮೋಪಶಮ ಸಮ್ಯಕ್ತ್ವ ಮತ್ತು ದ್ವಿತೀಯೋಪಶಮ ಸಮ್ಯಕ್ತ್ವವೆಂದು ಎರಡು ಬಗೆ. ಅನಾದಿಮಿಥ್ಯಾದೃಷ್ಟಿಯ ಐದು ಹಾಗೂ ಸಾದಿಮಿಥ್ಯಾದೃಷ್ಟಿಯ ಏಳು ಪ್ರಕೃತಿಗಳ ಉಪಶಮದಿಂದ ಯಾವುದಾಗುವುದೋ ಅದಕ್ಕೆ 'ಪ್ರಥಮೋಪಶಮ ಸಮ್ಯಕ್ತ್ವ' ಎನ್ನುವರು. ಏಳನೆಯ ಗುಣಸ್ಥಾನದಲ್ಲಿ ಕ್ಷಾಯೋಪಶಮಿಕ ಸಮ್ಯಗ್ ದೃಷ್ಟಿ ಜೀವವು ಶ್ರೇಣಿಯನ್ನು ಹತ್ತುವ ಸನ್ಮುಖ ಅವಸ್ಥೆಯಲ್ಲಿರುವಾಗ ಅನಂತಾನುಬಂಧಿ ಚತುಷ್ಟಯದ ವಿಸಂಯೋಜನ (ಅಪ್ರತ್ಯಾಖ್ಯಾನಾದಿರೂಪ) ಮಾಡಿ, ಮತ್ತು ದರ್ಶನಮೋಹನಿಯದ ಮೂರು ಪ್ರಕೃತಿಗಳ ಉಪಶಮ ಮಾಡಿ ಯಾವುದು ಸಮ್ಯಕ್ತ್ವವನ್ನು ಮಾಡಿಕೊಳ್ಳುವುದೋ ಅದಕ್ಕೆ 'ದ್ವಿತೀಯೋಪಶಮ ಸಮ್ಯಕ್ತ್ವ', ಎನ್ನುವರು—ಜೈ. ಧ. ಪ್ರ., ಪು. ೧೬೯-೭೧.

೧. ಇಲ್ಲಿ (ದೇಶವಿರತಿಗುಣಸ್ಥಾನ) ಪ್ರತ್ಯಾಖ್ಯಾನಾವರಣ ಕಷಾಯೋದಯವಿರುವುದರಿಂದ ಮಹಾವ್ರತ ಕೈಗೂಡುವುದಿಲ್ಲ. ಅಪ್ರತ್ಯಾಖ್ಯಾನಾವರಣ ಕಷಾಯ ಇಲ್ಲಿ ಉದಯವಾಗುವುದಿಲ್ಲವಾದುದರಿಂದ ಅಣುವ್ರತಧಾರಿಯಾಗಿ ಅದರಲ್ಲೇ ಪಕ್ವಾವಸ್ಥೆಗೇರಿ ಹನ್ನೊಂದನೇ ಪ್ರತಿಮಾಧಾರಿಯ ತನಕ ಸಾಧಕ ಉನ್ನತಿ ಪಡೆಯಬಹುದು. ಶ್ರಾವಕನೆಂದರೆ ಐದನೇ ಗುಣಸ್ಥಾನವರ್ತಿ ಚೇತನವೇ.

೨. ಆರನೇ ಗುಣಸ್ಥಾನದಲ್ಲಿ (ಪ್ರಮತ್ತವಿರತ) ಪ್ರತ್ಯಾಖ್ಯಾನಾವರಣ ಕಷಾಯ ಉಪಶಮವಾಗುವುದು. ಆದರಿಂದ ಸಂಯಮ ಪರಿಪಾಲನೆ ಸಾಧ್ಯವಾಗುವುದು. ಆದರೆ ಸಂಜ್ವಲನ ಮತ್ತು ನೋಕಷಾಯಗಳು ತಲೆಹಾಕಿ ಸಾಧಕನ ವ್ರತದಲ್ಲಿ ಪ್ರಮಾದಗಳುಂಟಾಗುವುವು.

೩. ಏಳನೇ ಗುಣಸ್ಥಾನದಲ್ಲಿ ಸಂಜ್ವಲನ ಮತ್ತು ನೋಕಷಾಯಗಳ ಉಲ್ಬಣತೆ ಬಹುಮಟ್ಟಿಗೆ ತಗ್ಗಿಹೋಗಿರುತ್ತದೆ. ಇಲ್ಲಿಂದ ಸಾಧಕರಲ್ಲಿ ಅವರವರ ತಪೋಶಕ್ತಿಗನುಗುಣವಾಗಿ ಎರಡು ಗುಂಪಾಗುವುದು. ಕೆಲವರು ಉಪಶಮ ಶ್ರೇಣಿಯಲ್ಲಿ ಸಾಗುವರು. ಕರ್ಮಗಳು ಉದಯಕ್ಕೆ ಬಾರದಂತೆ ದಿಗ್ಬಂಧನವೆಸಗಿ ಅವನ್ನು

ಎಂಟನೇ ಗುಣಸ್ಥಾನದಲ್ಲಿ (ಅಪೂರ್ವಕರಣ) ಶುಕ್ಲಧ್ಯಾನ ಅಂಕುರಾರ್ಪಣವಾಗುವುದು. ಉಪಶಮಶ್ರೇಣಿಯವರಿಗೆ ವ್ಯವಹಾರಶುಕ್ಲ ಲಭಿಸಿದರೆ ಕ್ಷಪಕಶ್ರೇಣಿಯವರಿಗೆ ನಿಶ್ಚಯಶುಕ್ಲ ಪ್ರಾಪ್ತಿಯಾಗುವುದು. ತಲೆಯಿಂದ ಹೆಜ್ಜೆಯತನಕ ಅಂತರಾತ್ಮ ಎಳನೇಸರ ಪುತ್ತಳಿಯಾಗಿ ತೋರಿ ಶಿಖೆಯಂತೆ ಅಲುಗಾಡುವುದಕ್ಕೆ ವ್ಯವಹಾರಶುಕ್ಲವೆಂದೂ ಅದು ಸ್ಥಿರಗೊಂಡು ಕೋರೈಸಿದಾಗ ನಿಶ್ಚಯಶುಕ್ಲವೆಂದೂ ಕರೆಯಬಹುದು. ೯ನೇ ಗುಣಸ್ಥಾನ(ಅನಿವೃತ್ತಿಕರಣ)ದಲ್ಲಿ ಆಗುವ ಪರಿಣಾಮವಿಶೇಷದಿಂದ ನಾನಾ ಕರ್ಮಗಳು ದಹಿಸಿಹೋಗುವುವು. ೧೦ನೇ ಗುಣಸ್ಥಾನ (ಸೂಕ್ಷ್ಮ ಸಾಂಪರಾಯ) ಅತ್ಯಂತ ಸೂಕ್ಷ್ಮಾವಸ್ಥೆಯನ್ನು ಪಡೆವ ಲೋಭ ಕಷಾಯಗಳ ಉದಯವನ್ನು ಅನುಭವಿಸುವ ಜೀವಕ್ಕೆ ಲಭಿಸುವುದು.[೧] ಇಲ್ಲಿಯತನಕ ಶ್ರೇಣ್ಯಾರೋಹಣ ಮಾಡಿಕೊಂಡು ಬಂದ ಸಾಧಕರು ಇಲ್ಲಿಂದ ಮುಂದಕ್ಕೆ ತಮ್ಮ ತಮ್ಮ ಶಕ್ತ್ಯನುಸಾರ ಕವಲೊಡೆಯಬೇಕಾಗುವುದು. ಕ್ಷಪಕಶ್ರೇಣಿಯಲ್ಲಿ ಬಂದ ಅಸಹಾಯಶೂರರು ೧೦ರಿಂದ ನೇರವಾಗಿ ೧೨ನೇ ಗುಣಸ್ಥಾನಕ್ಕೆ (ಕ್ಷೀಣಕಷಾಯ) ಲಂಘಿಸುವರು! ಉಪಶಮಶ್ರೇಣಿಯಲ್ಲಿ ಬಂದವರು ತೆವಳಿಕೊಂಡು ೧೧ನೇ ಗುಣಸ್ಥಾನಕ್ಕೆ (ಉಪಶಾಂತಕಷಾಯ) ಬರುವರು.[೨]

ಹನ್ನೆರಡನೆ ಗುಣಸ್ಥಾನ (ಕ್ಷೀಣಕಷಾಯ):—ಇಲ್ಲಿಗಡರಿದ ಮುನಿಯ ಪರಿಣಾಮ ಅತ್ಯಂತ ಶುಭ್ರವಾದುದು. ಮೋಹನೀಯ ಕರ್ಮಾಸುರ ಇವರಿಗೆ ಸೋತು ಪಲಾಯನವೆಸಗುವನು! ಇಲ್ಲಿಗೆ ಬಂದ ಚೇತನ ಮತ್ತೆಂದೂ ಕೆಳಗಿಳಿಯದು. ಏನಿದ್ದರೂ ಮುಂದಕ್ಕೆ ಹೋಗಿ ಜಿನೇಂದ್ರನಾಗಲೇಬೇಕು (ಕ್ಷಪಕಶ್ರೇಣಿಗೂ ಈ ಮಾತು ಅನ್ವಯಿಸುವುದು).

ಸಯೋಗಕೇವಲಿ ಗುಣಸ್ಥಾನಕ್ಕಡರಿದ ಚೇತನವನ್ನು ಜಿನೇಂದ್ರನೆನ್ನುವರು. ಘಾತಿಚತುಷ್ಟಯವನ್ನು ನಿಶ್ಶೇಷವಾಗುವಂತೆ ತೊತ್ತಳದುಳಿದು ಈ ಗುಣಸ್ಥಾನಕ್ಕೆ ಬರಬೇಕು. ಇಲ್ಲಿಗೆ ಬಂದಮೇಲೆ 'ಪರಮಾತ್ಮ'ನೇ! ಕೇವಲ ಜ್ಞಾನಪಡೆದಿರುವುದರಿಂದ ಇಲ್ಲಿರುವವರಿಗೆ ಕೇವಲಿ

ಉಪಶಮಗೊಳಿಸಿ ಸಾಗುವುದಕ್ಕೆ 'ಉಪಶಮ ಶ್ರೇಣಿ'ಯೆನ್ನುವರು. ಇಲ್ಲಿ ಚಾರಿತ್ರಮೋಹನೀಯದ ೨೧ ಪ್ರಕೃತಿಗಳನ್ನು ಉಪಶಮಗೊಳಿಸಿಕೊಂಡು ಸಾಗಬೇಕು. ಧೀರರಾದವರು ಈ ಪ್ರಕೃತಿಗಳನ್ನು ನಿರ್ಮೂಲ ಮಾಡಿಕೊಂಡು ಅಸಹಾಯಶೂರರಂತೆ ಮುನ್ನುಗ್ಗುವರು. ಇವರ ಮಾರ್ಗಕ್ಕೆ 'ಕ್ಷಪಕ'ಶ್ರೇಣಿಯೆನ್ನುವರು. ಉಪಶಮ, ಕ್ಷಪಕಶ್ರೇಣಿಗಳಲ್ಲಿ ಹೋಗುವವರನ್ನು 'ಸಾತಿಶಯ ಅಪ್ರಮತ್ತವಿರತ'ಯೆನ್ನುವರು. ಸಾಮಾನ್ಯ ಚೇತನಗಳು ೭ನೇ ಗುಣಸ್ಥಾನದಿಂದ ಮುಂದೆ ಹೋಗಲಾರದೆ, ಅಲ್ಲೂ ನಿಲ್ಲಲಾರದೆ ೬ನೇ ಗುಣಸ್ಥಾನಕ್ಕೆ ಹಿಂದಿರುಗಿ ಮತ್ತೆ ಹುಮ್ಮಸ್ಸಿನಿಂದ ಮುನ್ನುಗ್ಗಿ ಮತ್ತೆ ಇಳಿದು ಪೇಚಾಡುವುದನ್ನು 'ಸ್ವಸ್ಥಾನ ಅಪ್ರಮತ್ತವಿರತ'ರೆನ್ನುವರು.

೧. ಸೂಕ್ಷ್ಮಲೋಭ ಉದಯವಾಗುವುದರಿಂದ ಸಾಧಕನ ಯಥಾಖ್ಯಾತ ಚಾರಿತ್ರದಲ್ಲಿ ನ್ಯೂನತೆಯುಂಟಾಗುವುದು.

೨. ಹನ್ನೊಂದನೇ ಗುಣಸ್ಥಾನ ತುಂಬ ಕಡಿದಾದುದು. ಜ[illegible]ಂದ ತೆಪ್ಪಗಾಗಿದ್ದ ಕರ್ಮಗಳೆಲ್ಲ ಹಾಲುಕ್ಕಿದಂತೆ ಬುದಬುದನೆದ್ದು ಸಾಧಕನನ್ನು ತಲೆ ಕೆಳಗು[illegible]ಭವವೂ ಉಂಟು. ಕೆಲವು ವೇಳೆ ಇಚ್ಚಣಿಕೆಯಿಂದ ಸಾಧಕ ಕೆಳಗುರುಳಿ ಒಂದನೇ ಗುಣಸ್ಥಾನ[illegible]ದ್ದಾಡುವುದೂ ಉಂಟು. ಏನೇ ಇರಲಿ ಈ ಗುಣಸ್ಥಾನದಿಂದ ನೇರವಾಗಿ ಹನ್ನೆರಡನೇ ಗುಣಸ[illegible] ಯಾರೂ ಏರಲಾರರು. ಹನ್ನೆರಡಕ್ಕೆ ಬರಬೇಕಾದರೆ ಮತ್ತೆ ಹತ್ತಕ್ಕಿಳಿದು ಕ್ಷಪಕಶ್ರೇಣಿಯಲ್ಲೇ (ಕರ್ಮಗಳನ್ನು ಕ್ಷಯಿಸಿ) ಹೋಗಬೇಕು.

ಗಳೆನ್ನುವರು. ಕಾಯಯೋಗ ಇನ್ನು ಇರುವುದರಿಂದ ಇವರನ್ನು ಸಯೋಗಕೇವಲಿಗಳೆನ್ನುವರು. ಇವರಲ್ಲಿ ಕೆಲವರು ಸಾಮಾನ್ಯಕೇವಲಿಗಳಾಗಿಯೂ ಕೆಲವರು ಅತಿಶಯಕೇವಲಿ(ತೀರ್ಥಂಕರ)ಗಳಾಗಿಯೂ ಇರುತ್ತಾರೆ. ಸಾಮಾನ್ಯಕೇವಲಿಗಳು ಬಹುಮಟ್ಟಿಗೆ ವೈಯಕ್ತಿಕ ಮುಕ್ತಿಯನ್ನು ಮಾತ್ರ ಸಾಧಿಸುವವರು (ಮುಕ್ತಿ ಮಾರ್ಗವನ್ನು ಇವರು ಬೋಧಿಸಕೂಡದೆಂಬ ನಿಯಮವೇನೂ ಇಲ್ಲ.) ತೀರ್ಥಂಕರರು ಮಾತ್ರ ಅತ್ಯಾವಶ್ಯಕವಾಗಿ ಮುಕ್ತಿಮಾರ್ಗವನ್ನು ಬೋಧಿಸುವರು. ಪಾರಮಾರ್ಥಿಕವಾಗಿ ಸಾಮಾನ್ಯಕೇವಲಿಗಳಿಗೂ ತೀರ್ಥಂಕರರಿಗೂ ಶಕ್ತಿಸಾಮರ್ಥ್ಯದಲ್ಲಿ ಯಾವ ಅಂತರವೂ ಇಲ್ಲ.

ಅಯೋಗಕೇವಲಿ ಗುಣಸ್ಥಾನ:—ಕಾಯಯೋಗದಿಂದಲೂ ಬಿಡುಗಡೆ ಪಡೆದ ಚೇತನ ಈ ಗುಣಸ್ಥಾನಕ್ಕೆ ಬರುವುದು. ಅಘಾತಿಕರ್ಮಗಳನ್ನೂ ಧ್ವಂಸಮಾಡಿದ ಪರಿಪೂರ್ಣ ಪರಮಾತ್ಮ ಈ ಗುಣಸ್ಥಾನದಲ್ಲಿ ಸಿದ್ಧನಾಗುವ ಮುನ್ನ ಕೇವಲ ಅ, ಇ, ಉ, ಋ, ಲ್ ಎಂಬ ಐದು ಹ್ರಸ್ವ ಸ್ವರಗಳನ್ನು ಉಚ್ಚಾರ ಮಾಡುವಷ್ಟು ಕಾಲಮಾತ್ರವಿದ್ದು ಅನಂತರ ಮಿಂಚಿನಂತೆ ಸಿದ್ಧಲೋಕಕ್ಕೆ ಪರಿಶುದ್ಧಾತ್ಮ ಮಾತ್ರ ಲಂಘಿಸಿ ಬಿಡುವುದು.[೧] (ಏಕೆಂದರೆ ಕಾಯಯೋಗವನ್ನೂ ಕಳೆದುಕೊಂಡು ಅಯೋಗಕೇವಲಿಯೆನಿಸಿರುವನು; ಸಿದ್ಧನಾದಾಗ ದೇಹವೆಲ್ಲಿದ್ದೀತು?)

ಕುಂಡಲಿನೀಯೋಗದಲ್ಲಿ ಆತ್ಮವಿಕಾಸ:—'ಕುಂಡಲಿನೀಯೋಗ' ಶಾಕ್ತ ತಂತ್ರಗಳಲ್ಲಿ ಬರುವುದು. ಕುಂಡಲಿನೀಶಕ್ತಿ ಮೂಲಾಧಾರ(ಗುದಪ್ರದೇಶ)ದಲ್ಲಿ ಸುಪ್ತವಾಗಿದೆ. ಅದನ್ನು ಎಚ್ಚರಗೊಳಿಸುವುದೇ 'ಕುಂಡಲಿನೀಯೋಗ'. ಮೂಲಾಧಾರ, ಮಣಿಪೂರ (ಲಿಂಗಪ್ರದೇಶ), ಸ್ವಾಧಿಷ್ಠಾನ (ನಾಭಿಪ್ರದೇಶ), ಅನಾಹತ (ಹೃದಯ ಪ್ರದೇಶ), ವಿಶುದ್ಧ (ಕಂಠಪ್ರದೇಶ), ಆಜ್ಞಾ (ಹುಬ್ಬುಗಳ ನಡುವಿರುವ ಭಾಗ) ಈ ಆರು ಚಕ್ರಗಳನ್ನು ಕುಂಡಲಿನೀಶಕ್ತಿಯಿಂದ ದಾಟಿಕೊಂಡು ಮನಸ್ಸು ಸಹಸ್ರಾರ(ನೆತ್ತಿಯ ಪ್ರದೇಶ)ವನ್ನು ಸೇರುವುದೇ ಈ ಯೋಗದ ವೈಶಿಷ್ಟ್ಯ. ಪರಮೇಶ್ವರನ ಆವಾಸಸ್ಥಾನವೇ ಸಹಸ್ರಾರ. ಸಹಸ್ರಾರದಲ್ಲೇ ಜೀವಾತ್ಮ ಹಾಗೂ ಪರಮಾತ್ಮರ ಸಮಾಗಮವಾಗುವುದು. ಸಹಸ್ರಾರವನ್ನು ಅರಿತಮೇಲೆ ಸಂಸಾರಬಂಧವಿಲ್ಲ.[೨]

ವೀರಶೈವ ದರ್ಶನದಲ್ಲಿ ಆತ್ಮವಿಕಾಸ:[೩]

'ಏಕಮೇವಾದ್ವಿತೀಯಂ' ಎಂಬ ಪರವಸ್ತುವಿನ ಅಂತಃಸ್ಫುರಣದಿಂದ ಅನಂತಾತ್ಮಗಳು

---

೧. ಸಂಚಿತವಿವರಣೆ ಜೋಲಿಯಾಯ್ತೆಸೆ ಯೋ | ಗಾಂಚಿತ ಕಾಲ ನೋಳ್ಪಾಗ |
ಪಂಚಹ್ರಸ್ವಾಕ್ಷರದೋದಿನಷ್ಟೆ ಕಾಲ | ಹೊಂಚಿ ಮರ್ದಿಸಿದನಷ್ಟರೊಳು ॥ ೩೪ ॥
ಸಮಯವೆಂಬುದು ಸೂಕ್ಷ್ಮಕಾಲವದರೊಳೊಂದೆ | ಸಮಯದೊಳೇಳುರಚ್ಚುವನು |
ಗಮಿಸಿ ಲೋಕಾಗ್ರದೊಳ್ನೆಲಸಿದನೆಂದರೇ | ನಮಮ ಸಾಮರ್ಥ್ಯನೊ ಹಂಸಾ ॥ ೩೫ ॥
ಭ. ವೈ., ೭೮ನೇ. ಸಂ;

೨. ಈ ಬರವಣಿಗೆಗೆ ಶ್ರೀ ಸ್ವಾಮೀ ಆದಿದೇವಾನಂದರ 'ಯೋಗರಹಸ್ಯ'(ಪ್ರ. ಕ, ೪೧-೩, ಪು. ೬೪)ದಿಂದ ನೆರವು ಪಡೆದಿರುವೆನು.

೩. ಈ ಲೇಖನಕ್ಕೆ ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿಗಳ ವಚನಧರ್ಮಸಾರದಿಂದ ವಿಷಯ ಸಂಗ್ರಹಿಸಿರುವೆನು.

ಹೊರಬಿದ್ದು ಮಲತ್ರಯಗಳ[೧] ಸೆಳೆತಕ್ಕೆ ಸಿಕ್ಕಿ ಜೀವಾತ್ಮರಾದರು; ತಮ್ಮ ಸಹಜ ಸ್ವರೂಪವನ್ನು ಮರೆತು ಕಾರಣಶರೀರ ಪ್ರಾಪ್ತಿಯಾಗಿ ಜನ್ಮಗಳನ್ನೆತ್ತಬೇಕಾಯಿತು.[೨] ಭವಮಾಲಾಧರನಾಗುವುದೇ ಸಂಸಾರವೆನಿಸುವುದು. ಪಂಚಭೂತಗಳ ಸಹಾಯದಿಂದ ಕಾಯತ್ರಯಗಳನ್ನು ಪಡೆಯುವನು.[೩] ಅನಂತರ ಸಂದರ್ಭೋಚಿತವಾಗಿ ಪರದಾಟ ಪ್ರಾರಂಭವಾಗಿ ತಾಪತ್ರಯಕ್ಕೊಳಗಾಗುವನು.[೪]

ವೀರಶೈವ ಸಿದ್ಧಾಂತದ ಪ್ರಕಾರ ಪರವಸ್ತುವೇ ಲಿಂಗ ಮತ್ತು ಅಂಗ (ಪರಮಾತ್ಮ-ಜೀವಾತ್ಮ)ವಾಗಿ ವಿಂಗಡವಾಗಿದೆ. ಪರವಸ್ತುವಿನ ಶಕ್ತಿಯ ಒಂದಂಶ ಅಂಗದಲ್ಲಿ 'ಭಕ್ತಿ'ಯಾಗಿ ಅಂತರ್ಗತವಾಗಿದ್ದರೂ ಕಾಲಕ್ರಮೇಣ ವಿಷಯಲಂಪಟವಾದ ಚೇತನ ತನ್ನಲ್ಲಿರುವ ಪರಮಾತ್ಮಕಳೆಯನ್ನು ಮರೆತು ಪ್ರಾಪಂಚಿಕವಾಗಿ ಸಂಸಾರದಲ್ಲಿ ಅಂಡಲೆಯುತ್ತಿದೆ. ಕಾರಣತನುವಿನಲ್ಲಿ 'ಅಂಗ' ಯೋಗಾಂಗವಾಗಿ, ಸೂಕ್ಷ್ಮತನುವಿನಲ್ಲಿ ಭೋಗಾಂಗವಾಗಿ ಸ್ಥೂಲತನುವಿನಲ್ಲಿ ತ್ಯಾಗಾಂಗವಾಗಿ ಪರಿಣಾಮಹೊಂದಿರುವುದು. ಲಿಂಗವೂ ಅಂಗದೊಡನೆ ತಪ್ಪದೆ ಸಾಗುವುದು.[೫]

ಲಿಂಗಸ್ಥಳಗಳು ಎರಡೆರಡಾಗಿ ವಿಂಗಡವಾದಾಗ ಅಂಗಸ್ಥಲಗಳೂ ವಿಂಗಡವಾಗಿ ಆರು ಲಿಂಗಸ್ಥಳಗಳನ್ನೂ ಆರು ಅಂಗಸ್ಥಲಗಳು ಸಂದರ್ಭೋಚಿತವಾದ ಭಕ್ತಿಯಿಂದ ಸೇವಿಸುವುವು. ಲಿಂಗಸೇವೆಯೇ ಅಂಗಕ್ಕೆ ಗುರಿಯಾದರೂ ಪ್ರವೃತ್ತಿ ಮಾರ್ಗಕ್ಕೆ ಬಿದ್ದಮೇಲೆ ಅದರ ಸಹಜ ಪ್ರವೃತ್ತಿ ಮಾಯವಾಗಿ ವಿಷಯಾಭಿಮುಖವಾಗುತ್ತಾ ಬಂದಿತು. ಪರವಸ್ತುವಿನಿಂದ ಬೇರಾದ ಅಂಗದ ನಾನಾ ಅವಸ್ಥೆಗಳನ್ನೂ ಅದರ ಪರಿಣಾಮವನ್ನೂ ಈ ರೀತಿ ಚಿತ್ರಿಸಬಹುದು.

---

೧. ಮಲತ್ರಯ:—(೧) ಆಣವಮಲ, (೨) ಮಾಯಾಮಲ, (೩) ಕಾರ್ಮಿಕಮಲ.

೨. 'ಆಣವಮಲ'ದಿಂದ ನಾನು ಬೇರೆ ಶಿವನೇ ಬೇರೆ ಎಂಬ ಭೇದಭಾವ ಉಂಟಾಗುವುದು. ಇದರಿಂದ 'ಕಾರಣಶರೀರ' ಪ್ರಾಪ್ತಿಯಾಗುವುದು. 'ಮಾಯಾಮಲ'ದಿಂದ ಸರ್ವಜ್ಞತ್ವ ಹೋಗಿ ಅಲ್ಪಜ್ಞತ್ವ(ಕಿಂಚಿತ್ ಜ್ಞತ್ವ)ವುಂಟಾಗಿ ಸೂಕ್ಷ್ಮಶರೀರಾವರಣ ಪ್ರಾಪ್ತಿಯಾಗುವುದು. ಕಾರ್ಮಿಕ ಮಲದಿಂದ ಸರ್ವಕರ್ತೃತ್ವವಿಲ್ಲದಂತಾಗಿ ಕಿಂಚಿತ್ ಕರ್ತೃತ್ವವುಂಟಾಗಿ ಸ್ಥೂಲಶರೀರ ಲಭಿಸಿ ಕರ್ಮಫಲಾನುಭವಕ್ಕೆ ಕಾರಣವಾಗುವುದು. ಆಣವಮಲದಿಂದ ಸರ್ವಾತ್ಮಕತ್ವವೂ ಹೋಗುವುದು.

೩. ಕಾರಣತನು, ಆತ್ಮ ಚಿತ್ತ ಅಹಂಕಾರಗಳಿಂದ ಕೂಡಿದುದು. ಸೂಕ್ಷ್ಮತನು ಪಂಚಜ್ಞಾನೇಂದ್ರಿಯ, ಪಂಚವಾಯು (ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ) ಮತ್ತು ಮನ ಬುದ್ಧಿಗಳೆಂಬ ತತ್ವಗಳಿಂದ ಕೂಡಿದುದು. ಸ್ಥೂಲತನು ಪಂಚಭೂತಮಯವಾದುದು.

೪. ದೇಹಧಾರಿಗೆ ಸಪ್ತವ್ಯಸನಗಳೂ, ಷಡೂರ್ಮಿಗಳೂ, ಅರಿಷಡ್ವರ್ಗಗಳೂ, ಷಡ್ಭ್ರಮೆಗಳೂ ಉಂಟಾಗುವುವು. ಆಧ್ಯಾತ್ಮಿಕ, ಆದಿಭೌತಿಕ, ಆಧಿದೈವಕಗಳೆಂಬ ತಾಪತ್ರಯಗಳಿಗೆ ತುತ್ತಾಗುವನು.

೫. ಕಾರಣತನುವಿನಲ್ಲಿ ಲಿಂಗ ಭಾವಲಿಂಗವಾಗಿ ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗವೆನಿಸಿ ಸ್ಥೂಲತನುವಿನಲ್ಲಿ ಇಷ್ಟಲಿಂಗವಾಗಿ ವ್ಯವಹರಿಸುವುದು.

ಪ್ರವೃತ್ತಿ ಮಾರ್ಗದ ಚಿತ್ರ[೧]

ಸ್ಥಲಗಳು	ಭಕ್ತಿಗಳು	ಲಿಂಗಗಳು
(೧) ಐಕ್ಯ	ಸಮರಸ ಭಕ್ತಿ	ಮಹಾಲಿಂಗ
(೨) ಶರಣ	ಆನಂದ ಭಕ್ತಿ	ಪ್ರಸಾದಲಿಂಗ
(೩) ಪ್ರಾಣಲಿಂಗಿ	ಅನುಭವ ಭಕ್ತಿ	ಜಂಗಮಲಿಂಗ
(೪) ಪ್ರಸಾದಿ	ಅವಧಾನ ಭಕ್ತಿ	ಶಿವಲಿಂಗ
(೫) ಮಹೇಶ	ನೈಷ್ಠಿಕೀ ಭಕ್ತಿ	ಗುರುಲಿಂಗ
(೬) ಭಕ್ತ	ಸದ್ಭಕ್ತಿ	ಆಚಾರಲಿಂಗ

ಮೇಲಿನ ಚಿತ್ರ ಅವರೋಹಣ ಕ್ರಮದಲ್ಲಿದೆ. ಇದನ್ನೇ ಆರೋಹಣ ಕ್ರಮದಲ್ಲಿ ಬರೆದಾಗ ಸಾಧಕ, ಶಿವನಾಗುವಾಗ ಮನಸ್ಸಿನ ಪರಿಣಾಮಕ್ಕನುಗುಣವಾಗಿ ಪಡೆವ ಅವಸ್ಥೆಗಳ ಷಟ್‌ಸ್ಥಲಗಳಾಗುವುವು. ಸಂಸಾರಲೋಲನಾದ ಜೀವಾತ್ಮನಿಗೆ ದೀಕ್ಷಾಸಂಸ್ಕಾರವಾದ ಮೇಲೆ 'ಭಕ್ತ'ನಾಗುವನು.

"ಯಾವಾಗ ಸಮತೆ ಸದಾಚಾರಗಳು ಬೇರೂರಿ ಚಿತ್ತಶುದ್ಧಿಯುಂಟಾಗಿ, ಶಾಂತಿ ನೆಲೆಸುವುದೋ ಆಗ ಸಹಸ್ರಾರದಲ್ಲಿಯ ಪರಮಾತ್ಮಸ್ವರೂಪವನ್ನು ತಿಳಿಯಲು ಸಹಾಯವಾಗುತ್ತದೆ. ಅಲ್ಲಿಯವರೆಗೆ ಅವನು 'ಕೇವಲ ಪ್ರಪಂಚಿ,' ಬೆಲೆಗಳ ತಾರತಮ್ಯವನ್ನರಿಯದೆ ಸಂಸಾರದಲ್ಲಿ ಒದ್ದಾಡುತ್ತಿರುವ ಪಶು."[೨]

ಭಕ್ತಸ್ಥಲ:—ದೀಕ್ಷಾನಂತರ 'ಭಕ್ತ'ನಾಗಿ ಸಾಧಕನಾಗುವನು. ಅನಂತರ ಸಾಧನೆಯಲ್ಲಿ ತೊಡಗಿ ಏಕಾಗ್ರಚಿತ್ತದಿಂದ ಮೇಲೇರಬೇಕಾಗುವುದು. ಈ ವೇಳೆಯಲ್ಲಿ ಮಾರ್ಗದರ್ಶಿಯಾಗಲು ಪರವಸ್ತು ಇಷ್ಟಲಿಂಗರೂಪದಲ್ಲಿ ಸಾಕಾರವಾಗಿ ಸಿದ್ಧವಾಗಿರುತ್ತದೆ. ಆ ಪರವಸ್ತುವೇ ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗವಾಗಿ, ಕಾರಣ ಶರೀರದಲ್ಲಿ ಭಾವಲಿಂಗವಾಗಿ ನೆಲೆಸಿರುತ್ತದೆ. ಸಾಧಕ (ಭಕ್ತ) ತನುಮನಧನಗಳನ್ನು ಗುರುಲಿಂಗ ಜಂಗಮಕ್ಕೆ ಸವೆಸಬೇಕು. ಭಕ್ತನಾದವನು ಗುರುವಿನ ಅನುಗ್ರಹದಿಂದ ಪಡೆದ ಇಷ್ಟಲಿಂಗವನ್ನೇ ಪರದೈವವೆಂದು ನಂಬಿ ಬಾಳಬೇಕೇವಿನ ಬೇರೆ ಸ್ಥಾವರಲಿಂಗಗಳಿಗೆ ಎರಗಬಾರದು. ಭಕ್ತರ ಅನುಗ್ರಹಾರ್ಥವಾಗಿ ಶಿವನೇ ಜಂಗಮ ರೂಪಿಯಾಗಿ ಬರುತ್ತಾನೆಂದು ತಿಳಿದುಕೊಳ್ಳಬೇಕು. ಜಂಗಮ ಸಂತುಷ್ಟಿಯಾದರೆ ಲಿಂಗ ಸಂತುಷ್ಟಿಯಾಗುವುದು. ಹೀಗೆ ಭಕ್ತಸ್ಥಲದಲ್ಲಿ ಸದ್ಭಕ್ತಿಯನ್ನು ಬಲಿಸುತ್ತ ಕ್ರಿಯಾಶಕ್ತಿಯುಕ್ತವಾದ ಆಚಾರಲಿಂಗದ ಉಪಾಸನೆಯನ್ನು ಭಕ್ತನು ಮಾಡುತ್ತಾನೆ. ಇದರಿಂದ ಅಂತರಂಗ ಶುದ್ಧವಾಗಿ ನಿಷ್ಠಾಭಕ್ತಿ ಮೊಳೆಯುವುದು. ಮುಂದಿನ ನೆಲೆಯೇ ಮಹೇಶ್ವರ ಸ್ಥಲ.

ಮಹೇಶ್ವರಸ್ಥಲಗಳಲ್ಲಿ ಸಾಧಕ ವೀರವ್ರತಿಯಾಗಿ ಎಂಥ ಕಠಿಣ ಪರಿಸ್ಥಿತಿ ಬಂದರೂ ಕೊನೆಗೆ ಪ್ರಾಣಹೋದರೂ ತನ್ನ ವ್ರತವನ್ನು ಬಿಡದಂತೆ ಕಾಪಾಡಿಕೊಳ್ಳಬೇಕಾಗುವುದು. ಮನಸ್ಸು ಶಿವಭಕ್ತಿಯಲ್ಲಿ ತುಂಬಿ, ಕಣ್ಣು ಶಿವಮೂರ್ತಿಯಲ್ಲಿ ನೆಲೆಸಿ ಕೈ ಶಿವಪೂಜೆಯಲ್ಲಿ

೧. ಆಯಾಸ್ಥಳಕ್ಕೆ ಅದರ ಮುಂದಿರುವ ಭಕ್ತಿ, ಅದರ ಮುಂದಿರುವ ಲಿಂಗವಿರುವುದೆಂದು ತಿಳಿಯಬೇಕು.

೨. ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ, ವ. ಧ. ಸಾ., ಪು. ೧೨೭.

ನಿರತವಾಗುವುದು. ಅನ್ಯದೈವಗಳ ಹಾಗು ಅನ್ಯ ದರ್ಶನಗಳ ಆಕರ್ಷಣೆಗೆ ಸಿಕ್ಕದಂತಿದ್ದು ಶಿವನೇ ಸರ್ವೋತ್ತಮ, ಷಟ್‌ಸ್ಥಳವೇ ಸನ್ಮಾರ್ಗ ಎಂದು ದೃಢವಾಗಿ ನಂಬಿರಬೇಕು. "ಅಹಂಕಾರ ಮಮಕಾರಗಳನ್ನು ಬಿಟ್ಟು ಕೋಪತಾಪಗಳನ್ನು ಬಿಟ್ಟು ದಯಾಪೂರ್ಣನಾಗಿ, ಸಕಲ ಪ್ರಾಣಿಗಳಿಗೂ ಹಿತವನ್ನುಂಟುಮಾಡುತ್ತ, ಗುರುಲಿಂಗ ಜಂಗಮಸೇವೆಯಲ್ಲಿ ನಿಷ್ಠೆಯುಳ್ಳವನಾಗಿ ಶಿವಭಾವವುಳ್ಳವನಾಗಿ ಪರಿಣಮಿಸುವವನೇ 'ಮಹೇಶ್ವರನು.'"[೧]

ಪ್ರಸಾದಿಸ್ಥಲ:—ಅಂತರಂಗ ಪ್ರಶಾಂತವಾಗಿ ಎಲ್ಲೆಲ್ಲೂ ಶಿವನನ್ನು ಕಾಣುತ್ತ ಸಕಲ ಕಾರ್ಯಗಳನ್ನು ಶಿವಸೇವೆಯೆಂದುಕೊಂಡು ಎಲ್ಲವೂ ಶಿವನಿಂದ ದೊರೆವ ಪ್ರಸಾದವೆಂದು ನಂಬಿ ಬಾಳುವವನೇ **'ಪ್ರಸಾದಿ'**.

ಪ್ರಾಣಲಿಂಗಿ:—ಹಿಂದಿನ ಸ್ಥಲಗಳೆಲ್ಲ ಕರ್ಮಪ್ರಧಾನವಾದುವು. ಪ್ರಾಣಲಿಂಗಿ ಸ್ಥಳದಿಂದ ಜ್ಞಾನಪ್ರಧಾನವಾಗಿ ಕರ್ಮ ಗೌಣವಾಗುವುದು. ಹಿಂದಿನ ಸಾಧನೆಯೆಲ್ಲ ಶಿವಸಂದರ್ಶನಕ್ಕಾಗಿ ದೇಹ ಮನಸ್ಸಿಗೆ ತರಪೇತುಕೊಡುವುದಾಗಿದೆ. ಈಗ ಸಾಧಕ ಲಿಂಗದ ಹೊಂಬೆಳಗನ್ನು ಕಣ್ಣಾರೆ ಕಾಣುವನು. "ತನುತ್ರಯಗಳ ವ್ಯಾಪಾರವನ್ನು ನಡೆಸುವ ಷಡ್ಲಿಂಗಗಳನ್ನೂ ಅವುಗಳ ಮಂತ್ರಾಕ್ಷರಗಳನ್ನೂ ಕಲೆಗಳನ್ನೂ, ಶಕ್ತಿಗಳನ್ನೂ ಗ್ರಹಿಸಿ ಪ್ರಾಣಲಿಂಗದ ಉಪಾಸನೆ ಮಾಡುತ್ತಾನೆ."[೨]

ಶರಣಸ್ಥಲ:—ಇಲ್ಲಿಗಡರಿದ ಸಾಧಕ, ಜ್ಞಾನಿಯಾಗಿರುತ್ತಾನೆ. ದೇಹಸಂಸಾರಾದಿಗಳ ಮೋಹದಿಂದ ಮುಕ್ತನಾಗಿರುತ್ತಾನೆ. ಅಂತರ್ಮುಖಿಯಾದಾಗ ಕಾರಣತನುವಿನ ಭಾವಲಿಂಗದಲ್ಲಿ ತನ್ಮಯನಾಗಿರುತ್ತಾನೆ. ಬಹಿರ್ಮುಖಿಯಾದಾಗಲೂ ತನುಮನಗಳ ಗುಣಗಳಿಂದ ಬಾಧಿತನಾಗುವುದಿಲ್ಲ. ಇವನ ಕ್ರಿಯೆ, ಲಿಂಗದ ಕ್ರಿಯೆ, ಇವನ ಮನ ಲಿಂಗದಮನ, ಇವನ ಭಾವ ಲಿಂಗದ ಭಾವ. ಪರಮಾನಂದದಲ್ಲಿ ಸದಾ ಓಲಾಡಿಕೊಂಡಿರುವಾತನೇ ಶರಣ. ಶರಣನೇ ಲಿಂಗ, ಲಿಂಗವೇ ಶರಣ!

ಐಕ್ಯಸ್ಥಲ:—ಪರವಸ್ತುವಿನಿಂದ ಲಿಂಗ-ಅಂಗವೆಂದು ಎರಡಾಗಿದ್ದುದು ಇಲ್ಲಿ ಮತ್ತೆ ಅಂತರಂಗದಲ್ಲಿ ಒಂದಾಗಿ ಹೋಗುವುದು. ಇದು ಸಂಪೂರ್ಣ ಸಾಮರಸ್ಯದ ಐಕ್ಯಸ್ಥಲವಾಗುವುದು. ಇಲ್ಲಿಯ ಚೇತನ ತನ್ನ ಆನಂದಾವಸ್ಥೆಯಲ್ಲಿ ತನ್ಮಯವಾಗಿದ್ದುಕೊಂಡೇ ಕಳೇಬರವನ್ನು ತ್ಯಜಿಸಿಹೋಗಬಹುದು ಇಲ್ಲವೆ ಆಗಾಗ ಬಹಿರ್ಮುಖನಾಗುತ್ತ ಜೀವನ್ಮುಕ್ತನಾಗೇ ಸಂಚರಿಸಬಹುದು.

ಜೈನಯೋಗಿಗಳು ಗುಣಸ್ಥಾನದ ಇಚ್ಚಣಿಕೆಯಲ್ಲಿ ಏರಿಹೋಗಿ ಅರಹಂತರಾದರೆ ಶಿವಶರಣರು ಷಟ್‌ಸ್ಥಲದ ಏಣಿಯನ್ನು ಏರಿ ಲಿಂಗಾಂಗ ಸಾಮರಸ್ಯವನ್ನು ಸಾಧಿಸುವರು. ಇವೆರಡನ್ನೂ ತುಲನಾತ್ಮಕವಾಗಿ ವಿವೇಚಿಸಬೇಕಾದರೆ ಸಾಧಕನಿಗೆ ಮಾತ್ರ ಸಾಧ್ಯ!

ಒಂದೇ ವಸ್ತು ಎರಡಾಗಿ ಪ್ರವೃತ್ತಿಮಾರ್ಗದಲ್ಲಿ ಪರದಾಡಿ ಅನಂತರ ನಿವೃತ್ತಿ ಮಾರ್ಗಕ್ಕೆ ಶರಣಾಗಿ ಮೇಲೇರಿ ಮತ್ತೆ ಶಿವನಾಗಿಹೋಗುವ ಭವ್ಯದೃಶ್ಯವನ್ನು ಷಟ್‌ಸ್ಥಲ ದರ್ಶನದಲ್ಲಿ ನಾವು ಕಾಣಬಹುದು.

೧. ವ. ಧ. ಸಾ., ಪು. ೧೩೭.

೨. ವ. ಧ. ಸಾ., ಪು. ೧೪೪.

ಮಾರ್ಗಣ ಸ್ಥಾನಗಳು[೧]

"ಲೋಕದಲ್ಲಿರುವ ಸಮಸ್ತ ಜೀವರುಗಳನ್ನು ಹುಡುಕಬೇಕಾದರೆ ಮಾರ್ಗಣಸ್ಥಾನಗಳಲ್ಲಿ ಹುಡುಕಿರಿ. ಅಲ್ಲಿ ಆ ಜೀವಗಳು ಅವಶ್ಯವಾಗಿ ಸಿಕ್ಕಿಯೇ ಸಿಕ್ಕುತ್ತಾರೆ. ಅವುಗಳನ್ನು ಬಿಟ್ಟು ಸಂಸಾರಿ ಜೀವರುಗಳು ಮತ್ತೆಲ್ಲಿಯೂ ಇರುವುದಿಲ್ಲ. ಆದರಿಂದ ಇದಕ್ಕೆ ಮಾರ್ಗಣಾ (ಹುಡುಕುವುದಕ್ಕೆ ಯೋಗ್ಯವಾದ ಸ್ಥಾನ) ಸ್ಥಾನಗಳು ಎಂದರ್ಥವಾಗುತ್ತದೆ. ಸಿದ್ಧಾತ್ಮರು ಮಾತ್ರ ಈ ಮಾರ್ಗಣಾಸ್ಥಾನಗಳಲ್ಲಿ ಸಿಕ್ಕುವುದಿಲ್ಲವೆಂಬುದು ಸಿದ್ಧಾಂತವಾಕ್ಯ."[೨]

(೧) ಗತಿ, (೨) ಇಂದ್ರಿಯ, (೩) ಕಾಯ, (೪) ಯೋಗ, (೫) ವೇದ, (೬) ಕಷಾಯ, (೭) ಜ್ಞಾನ, (೮) ಸಂಯಮ, (೯) ದರ್ಶನ, (೧೦) ಲೇಶ್ಯಾ, (೧೧) ಭವ್ಯತ್ವ, (೧೨) ಸಮ್ಯಕ್ತ್ವ, (೧೩) ಸಂಜ್ಞಾ, (೧೪)ಆಹಾರ—ಈ ಹದಿನಾಲ್ಕು ಮಾರ್ಗಣಸ್ಥಾನಗಳಾಗಿವೆ.

"ಸಮ್ಯಗ್‌ದರ್ಶನಾದಿ ಅಥವಾ ಉತ್ತಮ ಕ್ಷಮಾದಿ ಧರ್ಮರೂಪದ ಬಿಲ್ಲಿಗೆ ಜ್ಞಾನಾದಿ ಗುಣರೂಪದ ಹೆದೆಯೇರಿಸಿ ಜಿನೇಂದ್ರ ಹದಿನಾಲ್ಕು ಮಾರ್ಗಣಗಳಿಂದ ಮೋಹಾಸುರನನ್ನು ವಿಧ್ವಂಸನಗೊಳಿಸಿದನು"[೩] ಎಂದು ನೇಮಿಚಂದ್ರ ಸಿದ್ಧಾಂತಚಕ್ರವರ್ತಿಗಳು ಮಾರ್ಗಣ ಮಹಾಧಿಕಾರವನ್ನು ಉದ್ಘಾಟಿಸಿರುವರು!

(೧) ಗತಿಮಾರ್ಗಣದಲ್ಲಿ ನರಕಗತಿ, ತಿರ್ಯಗ್ಗತಿ, ಮನುಷ್ಯಗತಿ ದೇವಗತಿಯೆಂದು ನಾಲ್ಕು ಬಗೆ.

(೨) ಇಂದ್ರಿಯಮಾರ್ಗಣದಲ್ಲಿ ಸ್ಪರ್ಶನ, ರಸನ, ಘ್ರಾಣ, ಚಕ್ಷುಃ, ಶ್ರೋತ್ರವೆಂದು ಐದು ಬಗೆ.

(೩) ಕಾಯಮಾರ್ಗಣದಲ್ಲಿ ಪೃಥ್ವೀ, ಜಲ, ಅಗ್ನಿ, ವಾಯು, ವನಸ್ಪತಿ, ತ್ರಸವೆಂದು ಆರು ಬಗೆ.

(೪) ಯೋಗಮಾರ್ಗಣವು ಮನೋಯೋಗ[೪], ವಚನಯೋಗ[೫], ಕಾಯಯೋಗ[೬]ವೆಂದು ಮೂರು ಬಗೆ.

---

೧. ಈ ಬಗ್ಗೆ ವಿವರ ಬೇಕಾದಲ್ಲಿ ಗೋ. ಸಾ., ಜೀ. ಕಾಂ., 'ಮಾರ್ಗಣಮಹಾಧಿಕಾರ' ಪು. ೫೭-೨೪೮ರ ತನಕ ಓದಬೇಕು. (ಪ. ೧೩೯-೬೭೦)

೨. ಶ್ರೀ ಎಸ್. ಡಿ. ನಾಗೇಂದ್ರಶಾಸ್ತ್ರೀ, ಜೈ. ಧ. ದೀ., ಪು. ೨೮.

೩. ಗೋ. ಸಾ., ಜೀ. ಕಾಂ., ಪ. ೧೩೯.

೪. ಮನೋಯೋಗದಲ್ಲಿ ಸತ್ಯಮನೋಯೋಗ, ಅಸತ್ಯಮನೋಯೋಗ, ಉಭಯಮನೋಯೋಗ, ಅನುಭಯ ಮನೋಯೋಗ ಎಂದು ನಾಲ್ಕು ವಿಧ.

೫. ವಚನಯೋಗವೂ ಸತ್ಯವಚನಯೋಗ, ಅಸತ್ಯವಚನಯೋಗ, ಉಭಯವಚನಯೋಗ, ಅನುಭಯ ವಚನಯೋಗವೆಂದು ನಾಲ್ಕು ವಿಭಾಗವಾಗಿದೆ.

೬. ಕಾಯಯೋಗದಲ್ಲಿ ಔದಾರಿಕ ಕಾಯಯೋಗ, ಔದಾರಿಕ ಮಿಶ್ರಕಾಯಯೋಗ, ವೈಕ್ರಿಯಿಕ ಕಾಯಯೋಗ, ವೈಕ್ರಿಯಿಕ ಮಿಶ್ರಕಾಯಯೋಗ, ಆಹಾರಕ ಕಾಯಯೋಗ, ಆಹಾರಕ ಮಿಶ್ರಕಾಯಯೋಗ, ಕಾರ್ಮಣ ಕಾಯಯೋಗವೆಂದು ಏಳು ಬಗೆ.

"ಮೂಲಶರೀರವನ್ನೂ ತೊರೆಯದೆ ಆತ್ಮಪ್ರದೇಶವು ಶರೀರದ ಹೊರಗೂ ಪಸರಿಸಿದ್ದರೆ ಅದಕ್ಕೆ ಸಮುದ್ಘಾತ

(೫) ವೇದಮಾರ್ಗಣೆಯಲ್ಲಿ ಸ್ತ್ರೀವೇದ, ಪುಂವೇದ, ನಪುಂಸಕವೇದಗಳೆಂದು ಮೂರು ವಿಧ.

(೬) ಕಷಾಯಮಾರ್ಗಣೆಯು ಅನಂತಾನುಬಂಧಿ, ಅಪ್ರತ್ಯಾಖ್ಯಾನ, ಪ್ರತ್ಯಾಖ್ಯಾನ, ಸಂಜ್ವಲನ ಇವು ಮತ್ತೆ ಕ್ರೋಧ ಮಾನ ಮಾಯಾ ಲೋಭವೆಂದು ನಾಲ್ಕು ವಿಧವಾಗಿರುವುದರಿಂದ ಒಟ್ಟು ೧೬ ಬಗೆಯಾಯಿತು; ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸಾ, ಸ್ತ್ರೀವೇದ, ಪುಂವೇದ, ನಪುಂಸಕವೇದ ಈ ರೀತಿ ೨೫ ಬಗೆಯಾಗಿದೆ (೧೬+೯=೨೫.)

(೭) ಜ್ಞಾನಮಾರ್ಗಣೆಯಲ್ಲಿ ಕುಮತಿ, ಕುಶ್ರುತ, ವಿಭಂಗ, ಮತಿ, ಶ್ರುತ, ಅವಧಿ, ಮನಃಪರ್ಯಯ, ಕೇವಲಗಳೆಂದು ಎಂಟು ವಿಧ.

(೮) ಸಂಯಮಮಾರ್ಗಣೆಯಲ್ಲಿ ಸಾಮಾಯಿಕ, ಛೇದೋಪಸ್ಥಾಪನಾ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ, ಯಥಾಖ್ಯಾತಚರಿತ್ರಗಳೆಂದು ಐದು ವಿಧ.

ವೆಂದು ಹೆಸರು. (೧) ತೀವ್ರವಾದ ರೋಗಾದಿಗಳಿಂದ ದುಃಖವುಂಟಾದಾಗ ಸ್ಥೂಲಶರೀರದಿಂದ ಹೊರಗೆ ಒಂದು ಪ್ರದೇಶ ಮೊದಲುಗೊಂಡು ಶರೀರದ ಮೂರರಷ್ಟು ಪ್ರದೇಶಗಳವರೆಗೆ ಆತ್ಮಪ್ರದೇಶವು ಕಾರ್ಮಣ ಶರೀರಸಹಿತವಾಗಿ ಹೊರಕ್ಕೆ ಹೊರಡುವುದಕ್ಕೆ ವೇದನಾಸಮುದ್ಘಾತ ಎಂದು ಹೆಸರು. (೨) ತೀವ್ರವಾದ ಕ್ರೋಧಾದಿ ಪರಿಣಾಮಗಳುಂಟಾದಾಗ ಮೇಲೆ ಹೇಳಿದ ಕ್ರಮದಿಂದ ಜೀವಪ್ರದೇಶವು ಹೊರಗೆ ಹೊರಡುವುದಕ್ಕೆ 'ಕಷಾಯಸಮುದ್ಘಾತ' ಎಂದು ಹೆಸರು. (೩) ದೇವತೆಗಳೂ ನಾರಕಿಗಳೂ ಭೋಗಭೂಮಿಜರೂ ಸಕಲಚಕ್ರವರ್ತಿಗಳೂ ವಿಕ್ರಿಯರ್ದ್ಧಿ ಸಂಪನ್ನರಾದ ಯತಿಗಳೂ ತಂತಮ್ಮ ಇಚ್ಛಾನುಸಾರವಾಗಿ ಹಲವು ತರದ ರೂಪಗಳನ್ನು ಮಾಡಿಕೊಳ್ಳುವಾಗ ಆ ಶರೀರಗಳಲ್ಲಿಯೂ ಅಖಂಡವಾಗಿ ಆತ್ಮಪ್ರದೇಶವು ವ್ಯಾಪಿಸುವುದಕ್ಕೆ 'ವೈಕ್ರಿಯಿಕಸಮುದ್ಘಾತ'ವೆಂದು ಹೆಸರು. (೪) ಆಯುಷ್ಯಸ್ಥಿತಿಯು ಅಂತರ್ಮುಹೂರ್ತವಿರುವಾಗ ಕೆಲವು ಜೀವಿಗಳ ಆತ್ಮಪ್ರದೇಶವು ಶರೀರದ ಹೊರಗೂ ಒಂದು ಪ್ರದೇಶ ಮೊದಲುಗೊಂಡು ಮುಂದೆ ಹುಟ್ಟುವ ಸ್ಥಾನದವರೆಗೆ ವ್ಯಾಪಿಸುವುದಕ್ಕೆ 'ಮಾರಣಾಂತಿಕಸಮುದ್ಘಾತ'ವೆಂದು ಹೆಸರು. (೫) ತಪೋಮಹಿಮೆಯನ್ನು ಹೊಂದಿದ ಮಹಾತಪಸ್ವಿಗಳಿಗೆ ಬಾಹ್ಯಾಭ್ಯಂತರ ನಿಮಿತ್ತಗಳಿಂದ ಶುಭಪರಿಣಾಮವುಂಟಾದರೆ ಪ್ರಾಣಿಗಳ ಹಿತಕ್ಕೆ ಕಾರಣವಾಗಿ ದಕ್ಷಿಣ ಭುಜದಿಂದಲೂ ಅಶುಭಪರಿಣಾಮವುಂಟಾದರೆ ಪ್ರಾಣಿಗಳ ಅಹಿತಕ್ಕೆ ಕಾರಣವಾಗಿ ವಾಮಭುಜದಿಂದಲೂ ೧೨ ಯೋಜನ ಉದ್ದವೂ ಸೂಚ್ಯಂಗುಲದ (ಸೂಚ್ಯಂಗುಲಕ್ಕೆ ವಿವರಣೆಯನ್ನು ಮಿರ್ಜಿ ಅಣ್ಣಾರಾಯರ ಜೈ. ಧ., ಪು. ೩೮೯ ನೋಡುವುದು) ಸಂಖ್ಯೇಯ ಭಾಗ ಮೂಲವಿಸ್ತಾರವೂ ೯ ಯೋಜನ ಮುಖ ವಿಸ್ತಾರವೂ ಸಿಂಧೂರದಂತೆ ಬಣ್ಣವುಳ್ಳದ್ದೂ ಆದ ಆತ್ಮಪ್ರದೇಶವು ಪುರುಷಾಕಾರವಾಗಿ ಮೂಲ ಶರೀರದಿಂದ ಹೊರಗೂ ಪಸರಿಸುವುದಕ್ಕೆ 'ತೇಜಸ್ಸಮುದ್ಘಾತ'ವೆಂದು ಹೆಸರು. ಅಶುಭ ತೇಜಸ್ಸಮುದ್ಘಾತವುಂಟಾದ ಮುನಿಯೂ ಆ ಸಮುದ್ಘಾತಾಕೃತಿಯೂ ಅದಕ್ಕೆ ಗುರಿಯಾದ ವಿಷಯವೂ ಭಸ್ಮವಾಗಿ ಹೋಗುವುವು! (೬) ಮಹಾತಪಸ್ವಿಗಳಿಗೆ (ಪ್ರಮತ್ತವಿರತ ಗುಣಸ್ಥಾನವರ್ತೀ ಮುನಿಗಳು) ಪರಮಾಗಮದ ಸೂಕ್ಷ್ಮವಾದ ಅರ್ಥದಲ್ಲಿ ಸಂದೇಹವುಂಟಾದರೆ ತಮ್ಮ ತಪೋಬಲದಿಂದ ಒಂದು ಹಸ್ತಪ್ರಮಾಣವೂ ಸ್ಫಟಿಕದಂತೆ ಶುಭ್ರವೂ ಆದ ಪುರುಷಾಕಾರವು ಮಸ್ತಕದಿಂದ ಹೊರಟು ಮೂಲಶರೀರದ ಸಂಬಂಧವನ್ನು ಬಿಡದೆ ಕೇವಲಿಗಳಿರುವಲ್ಲಿಗೆ ಹೋಗಿ ಅವರ ದರ್ಶನವಾದೊಡನೆ ಸಂದೇಹನಿವೃತ್ತಿಯಾದ ಬಳಿಕ ಅಂತರ್ಮುಹೂರ್ತಕಾಲದಲ್ಲಿ ತಿರುಗಿ ಬಂದು ಆ ಮೂಲದೇಹವನ್ನು ಪ್ರವೇಶ ಮಾಡುವುದಕ್ಕೆ 'ಆಹಾರಸಮುದ್ಘಾತ'ವೆಂದು ಹೆಸರು. (೭) ಕೇವಲಿ ಗಳಿಗೆ ಆಯುಷ್ಯಕರ್ಮದ ಸ್ಥಿತಿ ಕಡಿಮೆಯಿದ್ದು ವೇದ ನಾಮ ಗೋತ್ರಗಳ ಸ್ಥಿತಿಯು ಹೆಚ್ಚಾಗಿದ್ದರೆ ಆ ಸ್ಥಿತಿ ಯನ್ನು ಸಮಾನ ಮಾಡುವುದಕ್ಕಾಗಿ....ಕೇವಲಿಗಳ ಆತ್ಮಪ್ರದೇಶ ಪಸರಿಸುವು ದಕ್ಕೆ 'ಕೇವಲಸಮುದ್ಘಾತ'ವೆಂದು ಹೆಸರು. ದ್ರ. ಸಂ., ಪು. ೭.

(೯) **ದರ್ಶನಮಾರ್ಗಣೆಯಲ್ಲಿ** ಚಕ್ಷುದರ್ಶನ, ಅಚಕ್ಷುದರ್ಶನ, ಅವಧಿದರ್ಶನ, ಕೇವಲ ದರ್ಶನಗಳೆಂದು ನಾಲ್ಕು ಬಗೆ.

(೧೦) **ಲೇಶ್ಯಾಮಾರ್ಗಣೆಯಲ್ಲಿ** ಕೃಷ್ಣ, ನೀಲ, ಕಪೋತ, ಪೀತ, ಪದ್ಮ, ಶುಕ್ಲಗಳೆಂದು ಆರು ಬಗೆ.

(೧೧) **ಸಮ್ಯಕ್ತ್ವ ಮಾರ್ಗಣೆಯಲ್ಲಿ** ಉಪಶಮ, ವೇದಕ, ಕ್ಷಾಯಿಕ, ಮಿಥ್ಯಾತ್ವ, ಸಾಸಾದನ, ಸಮ್ಯಙ್ಮಿಥ್ಯಾತ್ವವೆಂದು ಆರು ಬಗೆ.

(೧೨) **ಭವ್ಯಮಾರ್ಗಣೆಯಲ್ಲಿ** ಭವ್ಯ, ಅಭವ್ಯವೆಂದು ಎರಡು ಬಗೆ.

(೧೩) **ಸಂಜ್ಞೀಮಾರ್ಗಣೆಯಲ್ಲಿ** ಸಂಜ್ಞಿ, ಅಸಂಜ್ಞಿಗಳೆಂದು ಎರಡು ಬಗೆ.

(೧೪) **ಆಹಾರಮಾರ್ಗಣೆಯು** ಮೂರು ಶರೀರಗಳಿಗೂ ಪರ್ಯಾಪ್ತಿಗಳಿಗೂ ಯೋಗ್ಯವಾದ ಪುದ್ಗಲಪಿಂಡ ಸ್ವೀಕಾರರೂಪವಾದ ಆಹಾರವೆಂದೂ ಅದಕ್ಕೆ ವಿರುದ್ಧವಾದ ಅನಾಹಾರವೆಂದು ಎರಡು ಬಗೆ.

ರತ್ನತ್ರಯ

ಮುಕ್ತಿಗಡರಲು ರತ್ನತ್ರಯವೇ ಸೋಪಾನತ್ರಯ. ಸಮ್ಯಗ್‌ದರ್ಶನ ಜ್ಞಾನಚಾರಿತ್ರಗಳಿಗೆ ರತ್ನತ್ರಯವೆನ್ನುವರು. ಯಥಾರ್ಥವಾದ ದೇವಗುರು ಶಾಸ್ತ್ರಗಳನ್ನು ನಂಬುವುದಕ್ಕೆ **'ಸಮ್ಯಗ್ದರ್ಶನ'**ವೆನ್ನುವರು. ಇದು ತ್ರಿಮೂಢ[1] ರಹಿತವಾಗಿರಬೇಕು ಜೊತೆಗೆ ಅಷ್ಟಾಂಗದಿಂದ ಕೂಡಿರಬೇಕು.[2] ಇದನ್ನು **'ಸಮ್ಯಗ್‌ದೃಷ್ಟಿ'**ಯೆಂತಲೂ ಕರೆಯುತ್ತಾರೆ. **'ಸಮ್ಯಕ್ತ್ವ'**ವೆಂದರೂ ಇದೇ ಆಗುವುದು.

ಸಮ್ಯಗ್ದರ್ಶನದಿಂದ ಕಂಡು ದೃಢವಾಗಿ ನಂಬಿಕೊಂಡು ಜೀವಾದಿ ತತ್ವಗಳನ್ನು ತಿಳಿದುಕೊಳ್ಳುವುದಕ್ಕೆ **'ಸಮ್ಯಗ್‌ಜ್ಞಾನ'**ವೆನ್ನುವರು. ಇದರಲ್ಲಿ ಮತಿ, ಶ್ರುತಿ, ಅವಧಿ, ಮನಃಪರ್ಯಯ

---

೧. **ತ್ರಿಮೂಢ:**—ತನಗೆ ಶ್ರೇಯಸ್ಸುಂಟಾಗುವುದೆಂದು ಮಿಥ್ಯಾದೇವತೆಗಳನ್ನು ಪೂಜಿಸುವುದಕ್ಕೆ **'ದೇವಮೂಢ'**ವೆನ್ನುವರು; ಗಂಗಾಸ್ನಾನದಿಂದ ಪಾಪಪರಿಹಾರವಾಗುವುದೆಂದು ನಂಬುವುದು **'ಲೋಕಮೂಢ'**; ವೇಷಧಾರಿಗಳಾದವರನ್ನು ಗುರುಗಳೆಂದು ನಂಬುವುದು 'ಪಾಷಂಡಿ ಮೂಢ'.

ಅಷ್ಟಾಂಗ:—(೧) ಜೈನಧರ್ಮದಲ್ಲಿ ಪೂರ್ಣ ಶ್ರದ್ಧೆಯಿಡುವುದಕ್ಕೆ **'ನಿಃಶಂಕಾ'** ಎನ್ನುವರು. (೨) ಭೋಗೋಪಭೋಗಗಳಲ್ಲಿ ಅನಾಸಕ್ತನಾಗುವುದಕ್ಕೆ **'ನಿಃಕಾಂಕ್ಷಾ'** ಎನ್ನುವರು. (೩) ರತ್ನತ್ರಯಾರಾಧಕರಾದ ಮಹರ್ಷಿಗಳ ಶರೀರದ ಕೊಳಕಿಗೆ ಅಸಹ್ಯಪಡದಿರುವುದಕ್ಕೆ **'ನಿರ್ವಿಚಿಕಿತ್ಸಾ'** ಎನ್ನುವರು. (೪) ತ್ರಿಮೂಢ ರಹಿತನಾಗಿರುವುದಕ್ಕೆ ಅಮೂಢದೃಷ್ಟಿಯೆನ್ನುವರು. (೫) ಜೈನಧರ್ಮದಲ್ಲಿ ಶಂಕೆಪಡುವವರನ್ನು ತಿದ್ದುವುದಕ್ಕೆ **'ಉಪಗೂಹನ'**ವೆಂದು ಹೆಸರು. (೬) ಸಮ್ಯಗ್‌ದರ್ಶನದಲ್ಲಿ ಜೀವಿಗಳನ್ನು ಸ್ಥಿರಗೊಳಿಸುವುದಕ್ಕೆ **'ಸ್ಥಿತೀಕರಣ'**ವೆಂದು ಹೆಸರು, (೭) ಸಾಧುಸಂತರಲ್ಲಿ ವಾತ್ಸಲ್ಯವಿಡುವುದಕ್ಕೆ **'ವಾತ್ಸಲ್ಯ'**ವೆನ್ನುವರು. (೮) ಜಿನಧರ್ಮವನ್ನು ಪ್ರಭಾವಗೊಳಿಸುವುದಕ್ಕೆ **'ಪ್ರಭಾವನಾ'** ಎನ್ನುವರು—ಇವಕ್ಕೆ ವಿರುದ್ಧವಾಗಿ ಆಚರಿಸಿದಾಗ ದೋಷವೆಸಗಿದಂತಾಗುವುದು.

೨. ಶ್ರದ್ಧಾನಂ ಪರಮಾರ್ಥನಾ | ಮಾಪ್ತಾಗಮತಪೋಭೃತಾಂ ||
ತ್ರಿಮೂಢಾಪೋಢಮಷ್ಟಾಂಗಂ | ಸಮ್ಯಗ್ದರ್ಶನ ಮಸ್ಮಯಂ ||—ರ. ಕ. ಶ್ರಾ., ಪ. ೪

ಮತ್ತು ಕೇವಲವೆಂದು ಐದು ಬಗೆ.

ಸಮ್ಯಗ್‌ದರ್ಶನದಿಂದ ಕಂಡು, ಸಮ್ಯಗ್‌ಜ್ಞಾನದಿಂದ ತಿಳಿದುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ **ಸಮ್ಯಕ್‌ಚಾರಿತ್ರ**ವೆನ್ನುವರು. ಇದು ವ್ಯವಹಾರ ಚಾರಿತ್ರ(ಅಣುವ್ರತ, ಮಹಾವ್ರತ, ಸಮಿತಿ, ಗುಪ್ತಿ, ಇವುಗಳಿಂದ ಕೂಡಿದ್ದು)ವೆಂದು ನಿಶ್ಚಯಚಾರಿತ್ರ(ಶುಭಾಶುಭವನ್ನುಳಿದು ಶುದ್ಧೋಪಯೋಗದಲ್ಲಿರುವುದು ಅಂದರೆ ಆತ್ಮಾನಂದದಲ್ಲಿ ತನ್ಮಯನಾಗುವುದು)ವೆಂದು ಎರಡು ಬಗೆ.

ಗೃಹಸ್ಥರ ವ್ಯವಹಾರ ಚಾರಿತ್ರಕ್ಕೆ 'ವಿಕಲ ಚಾರಿತ್ರ'ವೆಂದೂ ಮುನಿಗಳ ಆಚರಣೆಗೆ 'ಸಕಲ ಚಾರಿತ್ರ'ವೆಂದೂ ಕರೆಯುತ್ತಾರೆ.

ಪಂಚಪರಮೇಷ್ಠಿಗಳು

ಶ್ರೇಷ್ಠವಾದ ದರ್ಶನ ಜ್ಞಾನ ಚಾರಿತ್ರಗಳಿಂದ ಕೂಡಿದವರನ್ನು **ಪರಮೇಷ್ಠಿ**ಗಳೆನ್ನುವರು. ಇವರಲ್ಲೂ ತರತಮ ಭಾವವುಂಟು. (೧) ಸಾಧು, (೨) ಉಪಾಧ್ಯಾಯ, (೩) ಆಚಾರ್ಯ, (೪) ಅರಹಂತ, (೫) ಸಿದ್ಧ. ಇವರಲ್ಲಿ ಕ್ರಮವಾಗಿ ಒಬ್ಬರಿಗಿಂತ ಇನ್ನೊಬ್ಬರು ಶ್ರೇಷ್ಠರು.

ಲೋಕಕ್ಕೆ ಧರ್ಮವರ್ಷ ಕರೆದವರು ಅರಹಂತರಾದುದರಿಂದ ಮೊದಲ ಮನ್ನಣೆ ಅವರಿಗೆ ಕೊಡಬೇಕು. ಅನಂತರ ಅವರೇ ಸಿದ್ಧರಾಗುವುದರಿಂದ ೨ನೇ ಸ್ಥಾನ ಸಿದ್ಧರಿಗೆ. ಮುನಿಗಳಲ್ಲಿ, ತಾವು ಪಂಚಾಚಾರವನ್ನು ಆಚರಿಸಿ ಅನ್ಯರಿಗೂ ಮಾರ್ಗದರ್ಶನ ಮಾಡುವವರಿಗೆ ೩ನೇ ಸ್ಥಾನ, ಅವರೇ ಆಚಾರ್ಯರು. ಭವ್ಯಾತ್ಮರಿಗೆ ಜಿನವಾಣಿಯನ್ನು ಉಪದೇಶಿಸುವ ಮುನಿಗಳಿಗೆ ೪ನೇ ಸ್ಥಾನ, ಅವರೇ ಉಪಾಧ್ಯಾಯರು. ಕೇವಲ ತಮ್ಮ ಸಾಧನೆಯಲ್ಲಿ ನಿರತರಾದ ಸಾಧುಗಳಿಗೆ ಕೊನೆಯಸ್ಥಾನ. ಅವರವರ ಸ್ಥಾನಗಳು ಏನೇ ಇರಲಿ ಈ ಐದು ಜನರೂ ಪೂಜ್ಯರೆ!

ಅರಹಂತರು:—ಘಾತಿಕರ್ಮಗಳನ್ನು ಧ್ವಂಸಮಾಡಿ ಅನಂತಜ್ಞಾನ, ಅನಂತಸುಖ, ಅನಂತ ದರ್ಶನ, ಅನಂತವೀರ್ಯಗಳೆಂಬ ಅನಂತಚತುಷ್ಟಯಗಳಿಂದ ಕೂಡಿದವರನ್ನು ಅರಹಂತರೆನ್ನುವರು. ಇವರ ದೇಹ ಪರಮೌದಾರಿಕವಾದುದು (ಸಪ್ತಧಾತುರಹಿತವಾದುದು), ಪರಮಪರಂಜ್ಯೋತಿ ರೂಪವಾಗಿ ಕೋಟಿ ಚಂದ್ರಾರ್ಕಕಿರಣಸುಜ್ಞಾನಪ್ರಕಾಶಮಯವಾದುದು. ಅರಹಂತರು ಹದಿನೆಂಟು ದೋಷಗಳಿಂದ ಮುಕ್ತರು[1]".

ತೀರ್ಥಂಕರರು (ಇವರೂ ಅರಹಂತರೆ) ಪಂಚಕಲ್ಯಾಣಗಳಿಂದ ಕೂಡಿದವರು[2]. ವಿಶೇಷಾತಿ

---

೧. **ಹದಿನೆಂಟು ದೋಷಗಳು:**—(೧) ಹಸಿವು, (೨) ಬಾಯಾರಿಕೆ, (೩) ಭಯ, (೪) ರಾಗ, (೫) ದ್ವೇಷ, (೬) ಮೋಹ, (೭) ಚಿಂತೆ, (೮) ರೋಗ, (೯) ಮುಪ್ಪು, (೧೦) ಬೆವರು, (೧೧) ಸಂಕಟ, (೧೨) ಮದ, (೧೩) ರತಿ, (೧೪) ವಿಸ್ಮಯ, (೧೫) ನಿದ್ರೆ, (೧೬) ವಿಷಾದ, (೧೭) ಜನನ, (೧೮) ಮರಣ—ಇವಿಲ್ಲದವನು ದೇವರು. ರ. ಕ. ಶ್ರಾ., ಪ. ೬.

೨. ತೀರ್ಥಂಕರ ಚೇತನ ತಾಯಿಯ ಗರ್ಭಕ್ಕೆ ಬರುವಾಗ, (ಗರ್ಭಾವತರಣಕಲ್ಯಾಣ), ಹುಟ್ಟಿದನಂತರ (ಜನ್ಮಾಭಿಷೇಕ), ವಿರಾಗಿಗಳಾಗಿ ಹೊರಟಾಗ (ಪರಿನಿಷ್ಕ್ರಮಣ ಕಲ್ಯಾಣ), ಜ್ಞಾನಸಿರಿಯನ್ನು ಅರಿತಾಗ (ಕೇವಲಜ್ಞಾನಕಲ್ಯಾಣ), ಸಿದ್ಧರಾದಾಗ (ನಿರ್ವಾಣಕಲ್ಯಾಣ) ದೇವತೆಗಳು ಆಗಮಿಸಿ ಉತ್ಸವಾದಿಗಳನ್ನು ವೈಭವದಿಂದ ಆಚರಿಸುವರು.

ಶಯಗಳಿಂದ ರಾರಾಜಿಸುವರು[೧]. ಇವರಿಗೆ ಜಿನೇಂದ್ರನೆಂದು, ಕೇವಲಿಯೆಂದು, ಸರ್ವಜ್ಞನೆಂದು, ಬ್ರಹ್ಮನೆಂದು, ವಿಷ್ಣುವೆಂದು, ಶಿವನೆಂದು, ಪರಮೇಶ್ವರನೆಂದೂ ಕರೆಯುತ್ತಾರೆ (ರತ್ನಾ. ಶ., ಪ. ೧೨೬)

ಸಿದ್ಧಪರಮೇಷ್ಠಿ:—ಅರಹಂತರಿಗೆ ಪರಮೌದಾರಿಕ ದೇಹವಾದರೂ ಇರುವುದು. ಇವರು ಸಿದ್ಧರಾಗುವಾಗ, (ಅಘಾತಿಕರ್ಮಗಳನ್ನು ಗೆದ್ದಾಗ) ಇದ್ದ ದೇಹ ಕಪ್ಪುರದಂತೆ ಕರಗಿಹೋಗುವುದು. ಈ ಅವಸ್ಥೆಗೆ '**ಪರಾಮುಕ್ತಿ**'ಯೆನ್ನುವರು. ಆತ್ಮ ಸಂಪೂರ್ಣ ಸ್ವತಂತ್ರನಾಗಿ ತನ್ನ ಸಹಜಸ್ವರೂಪವನ್ನು ಪಡೆದು ಜೀವನದ ಪರಮಧ್ಯೇಯವನ್ನು ಸಾಧಿಸಿ ವಿದೇಹಮೋಕ್ಷವನ್ನು ಪಡೆದು ಸಿದ್ಧನಾಗಿ ಹೋಗುವನು. ಈ ಅವಸ್ಥೆಯಲ್ಲಿ ಇವರ ಜ್ಞಾನಕಾಯವು ಪುರುಷಾಕಾರವಾಗಿರುತ್ತದೆ; ಬಿಟ್ಟುಬಂದ ದೇಹಕ್ಕಿಂತ ತುಸುಮೊಟುಕಾದ ಆತ್ಮಪ್ರದೇಶವುಳ್ಳುದಾಗಿರುತ್ತದೆ.

ಕ್ಷಾಯಿಕ ಸಮ್ಯಕ್ತ್ವ, ಕ್ಷಾಯಿಕ ಜ್ಞಾನ, ಕ್ಷಾಯಿಕ ದರ್ಶನ, ಕ್ಷಾಯಿಕ ಸುಖ, ಕ್ಷಾಯಿಕ ವೀರ್ಯ, ಅಗುರುಲಘುತ್ವ, ಅವ್ಯಾಬಾಧತ್ವ, ಸೂಕ್ಷ್ಮತ್ವ, ಅವಗಾಹನತ್ವ ಈ ಎಂಟು ಗುಣಗಳಿಂದ ಕೂಡಿದವರನ್ನು ಸಿದ್ಧಪರಮೇಷ್ಠಿಯೆನ್ನುವರು.[೨]

---

೧. (೧) **ಅಪಾಯಾಗಮಾತಿಶಯ**:—ಕ್ಲೇಶರಹಿತರಾಗಿರುವುದು. (೨) **ಜ್ಞಾನಾತಿಶಯ**—ತ್ರಿಕಾಲಜ್ಞಾನವಿರುವುದು, (೩) **ಪೂಜಾತಿಶಯ**—ಮೂರು ಲೋಕಕ್ಕೂ ಪೂಜ್ಯರಾಗುವುದು, (೪) **ವಚನಾತಿಶಯ**—ಲೋಕಕಲ್ಯಾಣಕಾರಿಯಾದಿ ವಾಣಿಯಿರುವುದು. ಇವಲ್ಲದೆ ಮತ್ತೆ ೩೪ ಅತಿಶಯಗಳಿರುತ್ತವೆ. **I ಜನ್ಮಾತಿಶಯಗಳು**:—(೧) ಬೆವರಿಲ್ಲದ ದೇಹ, (೨) ಹೊಲಸಾಗದ ದೇಹ, (೩) ರಕ್ತ ಮಾಂಸ ಶುಭ್ರವಾಗಿ ವಿಶುದ್ಧವಾಗಿರುವುದು, (೪) ಅವರ ಆಕೃತಿ ಸರ್ವೋತ್ತಮವಾದುದು (ಸಮಚತುರಸ್ರಸಂಸ್ಥಾನ), (೫) ಅವರ ದೇಹದ ಸ್ನಾಯುವೇಷ್ಟನ, ಎಲುಬುಕೀಲುಗಳು ವಜ್ರಮಯ (ವಜ್ರಕಾಯ), (೬) ನಯನ ಮನೋಹರ ರೂಪು, (೭) ಸುಗಂಧಮಯವಾದ ದೇಹ, (೮) ಅವರ ದೇಹದಲ್ಲಿ ೧೦೮ ಸಲ್ಲಕ್ಷಣ(ಲಾಂಛನ)ಗಳಿರುತ್ತವೆ. (೯) ಅವರ ದೇಹ ಅಪರಿಮಿತ ವೀರ್ಯವುಳ್ಳದ್ದು, (೧೦) ಅವರ ಮಾತು ಮೃದುಮಧುರ ಹಾಗೂ ಹಿತಕರವಾದುದು.

ಜಿನನಾದನಂತರ ಬರುವ ಅತಿಶಯಗಳು:—(೧) ಜಿನೇಂದ್ರನಿರುವ ಪ್ರದೇಶದ ಸುತ್ತಲು ನೂರು ಯೋಜನ ಸುಭಿಕ್ಷವಾಗಿರುವುದು, (೨) ಭೂಮಿಯನ್ನು ಸೋಂಕದೆ ಆಕಾಶದಲ್ಲಿ ಸಂಚರಿಸುವರು, (೩) ಅವರಿರುವೆಡೆ ಹಿಂಸೆಗೆ ಅವಕಾಶವಿಲ್ಲ, (೪) ಉಣ್ಣದೆ ಬದುಕುವರು, (೫) ಅವರ ಸಂಚಾರವಾಗುವೆಡೆ ಈತಿ ಬಾಧೆಗಳಿಲ್ಲ, (೬) ನೋಡುವವರಿಗೆ ಅವರು ತಮ್ಮ ತಮ್ಮ ಸಮ್ಮುಖದಲ್ಲಿರುವಂತೆ ಕಾಣಿಸಿಕೊಳ್ಳುವರು, (೭) ಸರ್ವವಿದ್ಯೆಯಲ್ಲೂ ಪ್ರಾಜ್ಞತೆಯಿರುವುದು, (೮) ನೆಳಲಿಲ್ಲದ ದೇಹ, (೯) ರೆಪ್ಪೆವೊಡೆಯದ ಕಣ್ಣುಗಳು, (೧೦) ಅವರ ದೇಹದ ಕೂದಲು ಉಗುರೂ ಬೆಳೆಯುವುದಿಲ್ಲ.

ಸಮವಸರಣದ ಅತಿಶಯಗಳು:—(೧) ಅರ್ಧಮಾಗಧೀ ಭಾಷೆಯುಂಟಾಗುವುದು, (೨) ಜೀವಿಗಳಲ್ಲಿ ಪರಸ್ಪರ ಮೈತ್ರಿಯುಂಟಾಗುವುದು, (೩) ದಿಕ್ಕುಗಳು ನಿರ್ಮಲವಾಗುವುದು, (೪) ಆಕಾಶ ಶುಭ್ರವಾಗುವುದು, (೫) ಸರ್ವಋತುಗಳ ಫಲಪುಷ್ಪ ಬೆಳೆಯುವುದು, (೬) ಒಂದು ಗಾವುದ ನೆಲ ಕನ್ನಡಿಯಂತಾಗುವುದು, (೭) ಅರಹಂತರು ನಡೆವಾಗ ಹೆಜ್ಜೆ ಹೆಜ್ಜೆಗೂ ಸುವರ್ಣ ಪುಷ್ಪ ಮೂಡುವುದು, (೮) ಆಗಸದಲ್ಲಿ ಜಯಕಾರವಾಗುವುದು, (೯) ಸುಗಂಧಯುಕ್ತ ಮಂದಮಾರುತ, (೧೦) ಸುಗಂಧಯುಕ್ತ ಮಳೆ, (೧೧) ಪವನಕುಮಾರರು ನೆಲವನ್ನು ಶುಭ್ರಗೊಳಿಸುವುದು, (೧೨) ಸಕಲ ಪ್ರಾಣಿಗಳಿಗೂ ಆನಂದವುಂಟಾಗುವುದು, (೧೩) ಅರಹಂತರ ಎದುರಿನಲ್ಲಿ ಧರ್ಮಚಕ್ರ ತಿರುಗುವುದು, (೧೪) ಛತ್ರ, ಚಾಮರ, ಅಶೋಕವೃಕ್ಷ, ಪುಷ್ಪವೃಷ್ಟಿ, ದಿವ್ಯಧ್ವನಿ, ಸಿಂಹಾಸನ, ಪ್ರಭಾಮಂಡಲ, ದೇವದುಂದುಭಿ ಈ ಅಷ್ಟ ಮಹಾಪ್ರಾತಹಾರ್ಯಗಳು.

೨. **ಕ್ಷಾಯಿಕಸಮ್ಯಕ್ತ್ವ**:—ಅರಹಂತನಾದಾಗಲೆ ನವಕೇವಲ ಲಬ್ಧಿಗಳು ಪ್ರಾಪ್ತಿಯಾಗುವುವು. ಆ ಲಬ್ಧಿ

ಆಚಾರ್ಯಪರಮೇಷ್ಠಿ:—ಇವರು ಶ್ರಮಣ ಮಹಾಸಂಘಕ್ಕೆ ಅಧಿಪತಿಗಳು; ಧಾರ್ಮಿಕ ಶಾಸನಾಧಿಕಾರಿಗಳು; ಸಾಧಕರಿಗೆ ದೀಕ್ಷೆ ಕೊಡುವರು; ಪ್ರಮಾದವೆಸಗಿದ ಸಾಧಕರಿಗೆ ಪ್ರಾಯಶ್ಚಿತ್ತ ಕೊಟ್ಟು ಪಾವನಗೊಳಿಸುವರು.

ಆಚಾರ್ಯರಲ್ಲಿ ಮುವತ್ತಾರು ಗುಣಗಳಿರುತ್ತವೆ. ೧೨ ವಿಧ ತಪಸ್ಸು, ಗುಪ್ತಿತ್ರಯ ದಶವಿಧ ಧರ್ಮ, ಪಂಚಾಚಾರ, ಷಡಾವಶ್ಯಕಗಳನ್ನು (೧೨+೩+೧೦+೫+೬=೩೬) ಪರಿಪಾಲಿಸುವರು. ಸಂವರ ತತ್ವದಲ್ಲಿ ಹೇಳದೇ ಬಿಟ್ಟಿರುವುದನ್ನು ಮಾತ್ರ ಇಲ್ಲಿ ವಿವರಿಸುವೆನು.[೧]

ಪಂಚಾಚಾರ:—(೧) ಆತ್ಮವೊಂದನ್ನುಳಿದು ಮಿಕ್ಕುದೆಲ್ಲ ಪುದ್ಗಲಮಯವೆಂದೂ ನಿಜ ಶುದ್ಧಾತ್ಮನೊಬ್ಬನೇ ಉಪಾದೇಯನೆಂದು ಭಾವಿಸುವುದಕ್ಕೆ '**ದರ್ಶನಾಚಾರ**'ವೆನ್ನುವರು; (೨) ಭೇದವಿಜ್ಞಾನದಿಂದ ಪರಿಶುದ್ಧಾತ್ಮನನ್ನು ಅನ್ಯಪುದ್ಗಲಗಳಿಂದ ಭಿನ್ನನೆಂದು ಗ್ರಹಿಸುವುದಕ್ಕೆ '**ಜ್ಞಾನಾಚಾರ**'ವೆಂದು ಹೆಸರು. (೩) ಸಾಮಾಯಿಕ, ಛೇದೋಪಸ್ಥಾಪನ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ, ಯಥಾಖ್ಯಾತ ಚಾರಿತ್ರಗಳನ್ನು ಪರಿಪಾಲಿಸುವುದಕ್ಕೆ—'ಚಾರಿತ್ರಾಚಾರ'ವೆಂದು ಹೆಸರು. (೪) ದ್ವಾದಶತಪಸ್ಸನ್ನು ಪ್ರಮಾದವಿಲ್ಲದೆ ಆಚರಿಸುವುದಕ್ಕೆ 'ತಪಾಚಾರ'ವೆಂದು ಹೆಸರು.

(೫) ಪರೀಷಹಾದಿಗಳೂ ಉಪಸರ್ಗಗಳೂ ಬಂದಾಗ ಎದೆಗುಂದದೆ ಅಚಲನಾಗಿರುವುದಕ್ಕೆ 'ವೀರ್ಯಾಚಾರ'ವೆಂದು ಹೆಸರು.

ಷಡಾವಶ್ಯಕಗಳು:—(೧) ಸಾಮಾಯಿಕ, (೨) ತೀರ್ಥಂಕರಸ್ತವನ, (೩) ಪರಚಪರಮೇಷ್ಠಿ ವಂದನ, (೪) ಪ್ರತಿಕ್ರಮಣ [ತಪ್ಪನ್ನು ಒಪ್ಪಿಕೊಳ್ಳುವುದು], (೫) ಪ್ರತ್ಯಾಖ್ಯಾನ [ಮುಂದೆ ತಪ್ಪಾಗದಂತೆ ಎಚ್ಚರ ವಹಿಸುವುದು], (೬) ಕಾಯೋತ್ಸರ್ಗ [ದೇಹಾಭಿಮಾನವನ್ನು ತೊರೆದು ಧ್ಯಾನಾಸಕ್ತನಾಗುವುದು]—ಈ ಆರು ಅವಶ್ಯಕಕ್ರಿಯೆಗಳನ್ನು ಆಚಾರ್ಯರು ದಿನವೂ ಪರಿಪಾಲಿಸಬೇಕು.

ಗಳಲ್ಲಿ ಸಮ್ಯಕ್ತ್ವ, ಚಾರಿತ್ರ, ಜ್ಞಾನ, ದರ್ಶನ, ದಾನ, ಲಾಭ, ಭೋಗ, ಉಪಭೋಗ, ವೀರ್ಯವೆಂದು ಒಂಭತ್ತು ವಿಧವಾಗಿದೆ. ಕರ್ಮಗಳು ಕ್ಷಯವಾಗಿ ಬರುವ ಸಮ್ಯಕ್ತ್ವಕ್ಕೆ ಕ್ಷಾಯಿಕಸಮ್ಯಕ್ತ್ವವೆನ್ನುವರು.

ಕ್ಷಾಯಿಕ ಜ್ಞಾನ:—ಸಕಲ ಪದಾರ್ಥವನ್ನೂ ತ್ರಿಕಾಲವನ್ನೂ ತಿಳಿಯುವ ಕೇವಲ ಜ್ಞಾನ.

ಕ್ಷಾಯಿಕ ದರ್ಶನ:—ಮೂರು ಲೋಕವನ್ನೂ ಮೂರು ಕಾಲವನ್ನು ಚಣದಲ್ಲಿ ದರ್ಶಿಸುವ ಕೇವಲ ದರ್ಶನ.

ಕ್ಷಾಯಿಕ ವೀರ್ಯ:—ಅನಂತ ಪದಾರ್ಥಗಳ ದ್ರವ್ಯಪರ್ಯಾಗಳನ್ನು ಅಶ್ರಮವಾಗಿ ಅರಿಯುವ ಅನಂತವೀರ್ಯ.

ಅಗುರುಲಘುತ್ವ:—ಹಗುರವೂ ಅಲ್ಲ ಭಾರವೂ ಅಲ್ಲದ ಒಂದು ಅವಸ್ಥೆ. ಇದು ಪ್ರತಿ ಜೀವೀಗುಣವಾಗಿದೆ. (ವಸ್ತುವಿನ ಅಭಾವೀ ಸ್ವರೂಪಕ್ಕೆ ಪ್ರತಿಜೀವಿಗುಣವೆನ್ನುವರು).

ಅವ್ಯಾಬಾಧತ್ವ:—ಇದು ಪ್ರತಿಜೀವೀಗುಣ ಪ್ರಭೇದ. ಸುಖ ದುಃಖಕ್ಕೆ ಅತೀತವಾದ ಒಂದು ಅವಸ್ಥೆ.

ಸೂಕ್ಷ್ಮತ್ವ:—ಇದು ಪ್ರತಿಜೀವೀಗುಣದ ಒಂದು ಪ್ರಭೇದ. ಇಂದ್ರಿಯಾತೀತವಾದ ಒಂದು ಅವಸ್ಥೆ. ಸಿದ್ಧರು ಇಂದ್ರಿಯಗೋಚರರಲ್ಲ.

ಅವಗಾಹನತ್ವ:—ಇದು ಪ್ರತಿಜೀವೀಗುಣ. ಸಿದ್ಧರ ದೇಹಗಳು ಒಂದರಲ್ಲಿ ಇನ್ನೊಂದು ಬೆಳಕಿನಂತೆ ತೂರಬಲ್ಲುವು. ನೂಕಾಟ ತಾಕಾಟವಿಲ್ಲದ ಸ್ಥಿತಿ.

೧. ೧೨ ತಪಸ್ಸು, ಗುಪ್ತಿತ್ರಯ, ದಶವಿಧ ಧರ್ಮ ಇವನ್ನು ಸಂವರತತ್ವದಲ್ಲಿ ಹೇಳಿದೆ.